
ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೧೧-೪-೪೯
★
ಬೆಲೆ ಎರಡಾಣೆ



ಮದ್ರಾಸ್ ಸರಕಾರದ ಕನ್ನಡ ಆಸ್ಥಾನ ಕವಿ ಶ್ರೀ. ಮಂಜೇಶ್ವರ ಗೋವಿಂದ ಪೈಗಳವರು

—ಪರಿಚಯ ೧೫ನೆಯ ಪುಟದಲ್ಲಿ

ಅಂತರ್-ರಾಷ್ಟ್ರೀಯ

ಏಶಿಯದಲ್ಲಿ ಸಾಮ್ರಾಜ್ಯವಾದದ ಭೂತಲೀಲೆ

ಸಾಮ್ರಾಜ್ಯವಾದಿಗಳ ದ್ರೋಹಬುದ್ಧಿ— ಇಂಡೊನೇಶಿಯನ್ನರ ಸ್ವರಾಜ್ಯನಿಷ್ಠೆ— ಅನ್ನಾಹಾರಗಳ ಅಭಾವ— ಒಕ್ಕಲಿಗರ ಅಸಹಕಾರ—

ಉದಾಸೀನ ವೃತ್ತಿಯಿಂದ, ಕೂರ್ಮಗತಿಯಿಂದ ಸಂಯುಕ್ತ ರಾಷ್ಟ್ರಸಂಘವು ವಾಕ್ಸೇನೆ ನಡೆಸುತ್ತ ಡಚ್ಚರ ಅತಿಕ್ರಮಣವನ್ನು ತಡೆಯಲು ಪರಿಣಾಮಕರವಾದ ಯಾವ ಉಪಾಯವನ್ನೂ ಕೈಕೊಳ್ಳದೆ ಕಾಲಹರಣ ಮಾಡುತ್ತಿರುವಾಗ ಡಚ್ಚರು ಪ್ರಜಾಪೀಡನೆಯ ಮಾರ್ಗದಲ್ಲಿ ಪ್ರತಿನಿತ್ಯ ಪ್ರಗತಿಯನ್ನು ತೋರಿಸುತ್ತ ಇಂಡೊನೇಶಿಯದಲ್ಲಿ ಚಿರನಾಗಿ ಬೇರೂರಲು ಸಂಚು ಹೊಂಚುಗಳನ್ನು ಸಿದ್ಧಗೊಳಿಸಿ ಅಮಲಿನಲ್ಲಿ ತರುತ್ತಿರುವುದನ್ನು ಕಂಡು ಬಹಳ ಕಾಲ ಜಗತ್ತು ಕಣ್ಣುಮುಚ್ಚಿ ಕುಳಿತುಕೊಳ್ಳುವದು ಅಸಾಧ್ಯ. ಅದರಲ್ಲೂ ಏಶಿಯದ ಸ್ವತಂತ್ರ ರಾಷ್ಟ್ರಗಳು ಈ ಸಾಮ್ರಾಜ್ಯವಾದದ ದಬ್ಬಾಳಿಕೆಯನ್ನು ಹೀಗೇ ಬೆಳೆಯಗೊಟ್ಟರೆ ಕಾಲಕ್ರಮೇಣ ಆತ್ಮಘಾತಕವಾಗಿ ಪರಿಣಮಿಸದಿರದು.

ಏಶಿಯದ ಬಗ್ಗೆ ಸಂಶಯ ತಾಳುವುದು ಏಶಿಯದ ಜನತೆಗೆ ಅನುವಂಶಿಕವಾಗಿಬಂದಿದೆ. ಅದಕ್ಕೆ ಮೇಲಿಂದ ಮೇಲೆ ನಿದರ್ಶನ ದೊರೆತು ಅವರ ಶ್ರದ್ಧೆಗೆ ಪುಷ್ಟಿ ದೊರಕುವಂತಾಗಿರುವುದು ಜಾಗತಿಕ ಹಿತದ ದೃಷ್ಟಿಯಿಂದ ಶೋಚನೀಯವೆನ್ನಬೇಕಾಗಿದೆ. ೨ನೆಯ ಮಹಾಯುದ್ಧದ ನಂತರ ಸಾಮ್ರಾಜ್ಯವಾದಕ್ಕೆ ಇತಿಶ್ರೀ ಆಯಿತೆಂದು ಜಗತ್ತಿನಲ್ಲಿ ಘೋಷಿಸಲಾಯಿತು. ಆದರದು ಘೋಷಣೆಯಲ್ಲೇ ಉಳಿದಿದೆಯಲ್ಲದೆ ಕಾರ್ಯರೂಪಕ್ಕೆ ಬಂದಿಲ್ಲವೆಂಬುದಕ್ಕೆ ಹಲವಾರು ದೃಷ್ಟಾಂತಗಳಿಂದು ಸಿಕ್ಕುತ್ತವೆ. ಅವುಗಳಲ್ಲಿ ಇಂಡೊನೇಶಿಯದಲ್ಲಿ ಡಚ್ಚರು ಕೈಕೊಂಡಕೃತ್ಯವು ಅತಿ ಮುಖ್ಯವಾಗಿದೆ. ಐರೋಪ್ಯರು ತಮ್ಮ ಹೆಚ್ಚಿನ ಜೀವನ ಮಟ್ಟವನ್ನು ಉಳಿಸಿಕೊಳ್ಳಲು ತದಿತರರ ಶೋಷಣೆಯೇ ಸಾಧನವೆಂದು ಈಗ ೨೦೦–೩೦೦ ವರ್ಷಗಳಿಂದ ನಂಬುತ್ತ ಬಂದಿದ್ದು, ಈಗಲೂ ಅದಕ್ಕೇ ಅಂಟಿಕೊಂಡು ಪರೋಪಕಾರಬುದ್ಧಿಯನ್ನು ಪ್ರದರ್ಶಿಸುವ ಗೋಮುಖ ವ್ಯಾಘ್ರತೆಯಿಂದ ಹಿಂದುಳಿದ ರಾಷ್ಟ್ರಗಳ ಜೀವನದಲ್ಲಿ ಕೈಹಾಕುವ ಉಪಟಳ ಹಾಗೇ ಸಾಗಿದೆ.

ಜಾವಾದ್ವೀಪದ ಮುಖ್ಯ ನಗರಗಳೆಲ್ಲ ಡಚ್ಚರ ಕೈಯಲ್ಲಿವೆ. ಆದರೆ ಪ್ರಜಾರಾಜ್ಯದವರ ಪ್ರತಿಭಟನೆ ಯಥಾಪೂರ್ವ ಒಂದೇ ಸಮನೆ ನಡೆದೇ ಇದೆ. ಈ ಗಳಿಗೆಯಲ್ಲಿ ಕೆಲ ಆಸ್ತಿ ಡಚ್ಚರ ಕೈಗೆ ಹೋದರೆ ಇನ್ನೊಂದು ಗಳಿಗೆಯಲ್ಲಿ ಅವು ಪ್ರಜಾರಾಜ್ಯದವರ ಕೈಗೆ ಹೋಗುತ್ತದೆ. ಹೀಗೆ ಇಂಡೊನೇಶಿಯದ ಜನಜೀವನ ಅಸ್ತವ್ಯಸ್ತವೂ ಅರಾಜಕವೂ ಆಗಿ ಹೋಗಿದೆ.

ಜೋಗ್ ಜಕಾರ್ತದ ಸುಲ್ತಾನನು ಕಳೆದ ೩ ವರ್ಷಗಳಿಂದ ಸ್ವತಂತ್ರನಾಗಿದ್ದಾನೆ. ಆದರೀತನು ಪ್ರಜಾರಾಜ್ಯದ ಭಕ್ತನಾಗಿರುವನಲ್ಲದೆ ಡಚ್ಚರ ಯಾವ ಆಮಿಷಕ್ಕೂ ಬಲಿಬಿದ್ದಿಲ್ಲ. ಅವನೀಗ ತನ್ನ ಇಚ್ಛೆಯಂತೆ ತಾನೇ ತನ್ನ ಅರಮನೆಯಲ್ಲಿ ಕೈದಿಯಂತೆ ಇದ್ದು ಡಚ್ಚರೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಲು ಒಪ್ಪದಾಗಿದ್ದಾನೆ. ಡಚ್ಚರು ಹಿಡಿತದಲ್ಲಿ ಸಿಕ್ಕಿದ ಪ್ರಜಾರಾಜ್ಯದ ಮುಖಂಡರಲ್ಲಿ ಸುಕಾರ್ನೋ, ಹಟ್ಟಾ, ಶಹ್ರೀರ್ ಮತ್ತು ಮಂತ್ರಿಗಳಲ್ಲಿ ಅರ್ಧದಷ್ಟು ಜನರು ಮುಖ್ಯರು. ತಪ್ಪಿಸಿಕೊಂಡವರಲ್ಲಿ ಮುಸೋ–ಕಮ್ಯುನಿಸ್ಟ ವಿರೋಧಿ ತಾನ್ ಮಲಾಕರು ಪ್ರಧಾನರು. ಅವರು ಇಂಡೊನೇಶಿಯದ ರಾಷ್ಟ್ರೀಯ ಪಕ್ಷ, ಸೋಶಲಿಸ್ಟ ಪಕ್ಷ, ಜನತಾಪಕ್ಷ ಮತ್ತು ಇಸ್ಲಾಂ ತರುಣ ಚಳವಳಿಗಳ ಮುಖಂಡರಾಗಿದ್ದಾರೆ.

ಡಚ್ಚರ ಮೋಸ

ಭದ್ರತಾಮಂಡಲದ ಆಜ್ಞೆಯನ್ನು ಉಲ್ಲಂಘಿಸಿದ ಡಚ್ಚರು ಅದಕ್ಕೂ ಪ್ರಜಾರಾಜ್ಯದವರಿಗೂ ಮೋಸ ಮಾಡಲು ಹೊಸ ಯೋಜನೆಯನ್ನು ತಯಾರಿಸಿದ್ದು ಜಗದ್ವಿದಿತವಾಗಿದೆ. ಅದು ಡಚ್ ಸಾಮ್ರಾಜ್ಯದ ದೊಡ್ಡ ಪ್ರತಿನಿಧಿಯಾದ ಡಾ. ಬೀಲರ ತಯಾರಿಕೆ. ಸಾರ್ವಭೌಮತ್ವವನ್ನು ಪಡೆಯಲು ಸೆರೆಯಲ್ಲಿರುವ ಮುಖಂಡರು ತಮ್ಮವರನ್ನು ಕೇಳಬೇಕು, ಅವರೊಡನೆ ವಿಚಾರವಿನಿಮಯ ಮಾಡದೆ ಹೇಗೆ ಹೋಗಬೇಕೆಂಬುದೇ ಅವರ ಮುಖ್ಯ ತಕರಾರ. ಹಾಗೆ ಮಾಡಲು ಆ ಮುಖಂಡರು ಒಪ್ಪರು. ಜೋಗ್ ಜಕಾರ್ತಕ್ಕೆ ಹೋಗಿ ಅಲ್ಲಿ ತಮ್ಮ ಸರಕಾರವನ್ನು ಪುನಃ ಸುವ್ಯವಸ್ಥಿತಗೊಳಿಸಿ ಜನಪ್ರತಿನಿಧಿತ್ವದ ಅಧಿಕಾರ ಪಡೆದು ಅನಂತರ ಬರಬಲ್ಲೆವೆಂಬುದು ಅವರ ಮತ. ಡಚ್ಚರು ಇದಕ್ಕೊಪ್ಪದಿರಲು ಅವರ ವಂಚಕಬುದ್ಧಿಯೇ ಹೊಣೆ. ಅವರು ಸಾರ್ವಭೌಮತ್ವ ತೆಗೆದುಕೊಳ್ಳಿರಿ ಹೇಗಿಗೆ ಬಂದು ಎಂದರೆ ಚಿಲ್ಲರೆ ನೆವ ಒಡ್ಡಿ ಆಗುವುದಿಲ್ಲ ಎನ್ನುತ್ತಾರೆ ನೋಡಿರಿ ಎಂದು ಜಗತ್ತಿಗೆ ತೋರಿಸಿ ಸ್ವಾರ್ಥಸಾಧಿಸಿಕೊಳ್ಳುವುದೇ ಡಚ್ಚರ ಉದ್ದೇಶ. ಪ್ರಾತಿನಿಧ್ಯ ಪಡೆಯದೆ ಮುಖಂಡರು ಹೇಗಿಗೆ ಹೋದರೆ ನಾಳೆ ನಿಮಗೆ ಯಾವ ಅಧಿಕಾರವಿದೆ ಎಂದು ಕೇಳಿ ಅವರೊಡನೆ ತಾವೇ ಮಾಡಿಕೊಂಡ ಒಪ್ಪಂದವನ್ನು ಡಚ್ಚರು ತಾವಾಗಿಯೇ ಮುರಿದೊಗೆಯಬಹುದಾಗಿದೆ.

ಪ್ರಜೆಗಳ ದುಃಸ್ಥಿತಿ

ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬ ಗಾದೆಯಂತೆ ಸ್ವದೇಶೀ ಮತ್ತು ವಿದೇಶೀ ಸೈನಿಕರ ಘರ್ಷಣದಿಂದ ಇಂಡೊನೇಶಿಯದ ಸಾಮಾನ್ಯ ಪ್ರಜೆಗಳು ಅವರ್ಣನೀಯ ಕಷ್ಟನಷ್ಟಗಳಿಗೆ ಗುರಿಯಾಗುತ್ತಿದ್ದಾರೆ. ಆದರೆ ಅವರ ಸ್ವರಾಜ್ಯನಿಷ್ಠೆ ಶಿಥಿಲವಾಗಲಿಲ್ಲ. ಡಚ್ಚರ ಯಾವ ಒತ್ತಾಯ ಪ್ರಲೋಭನಗಳೂ ಅವರನ್ನು ವಶಪಡಿಸಿಕೊಳ್ಳಲು ಶಕ್ತವಾಗಿಲ್ಲ. ಎಲ್ಲೋ ಕೆಲವರು –ಅವರಾದರೂ ಅರ್ಧ ಮನಸ್ಸಿನಿಂದಲೇ– ಡಚ್ಚರಿಗೆ ನೆರವಾಗಿರುವರಲ್ಲದೆ ಬಹುಸಂಖ್ಯರು ಎಲ್ಲಿಂದ ಎಲ್ಲಿಗೆ ಹೋದರೂ ಡಚ್ಚರೊಡನೆ ಅಸಹಕಾರದಿಂದ ವರ್ತಿಸುತ್ತಿದ್ದಾರೆ. ಅಲ್ಲಿಯ ಒಕ್ಕಲಿಗರು ಡಚ್ಚರ ನಾಣ್ಯ ನೋಟುಗಳನ್ನು ಸ್ವೀಕರಿಸಿಲ್ಲವಾದುದರಿಂದ ಯಾವ ವ್ಯವಹಾರಕ್ಕೂ ಪ್ರಜಾರಾಜ್ಯದ ಚಲಾವಣೆಯನ್ನೇ ಬಳಸಬೇಕಾಗಿ ಬಂದಿದೆ. ಆಹಾರಪರಿಸ್ಥಿತಿ ಬಹಳ ಹದಗೆಟ್ಟಿದೆ. ಡಚ್ಚರು ತಮಗೆ ನೆರವಾದವರಿಗೆ ಮಾತ್ರ ಆಹಾರವನ್ನು ಒದಗಿಸುತ್ತಾರೆ; ಮಿಕ್ಕವರಿಗೆ ಮುಕ್ಕುಮಣ್ಣು. ಹಾಗೆ ಅನ್ನಕ್ಕಾಗಿ ಡಚ್ಚರನ್ನು ಅವಲಂಬಿಸಿದವರ ಸಂಖ್ಯೆ ಕೇವಲ ೬೦೦೦. ನಗರಗಳಲ್ಲಿ ಅಕ್ಕಿಯ ಕೊರತೆ ಹೆಚ್ಚಾಗಿರುವುದೂ ಚೀನೀ ವ್ಯಾಪಾರಿಗಳು ಪ್ರಜಾರಾಜ್ಯದ ಚಲಾವಣೆಯನ್ನು ಸ್ವೀಕರಿಸದಿರುವುದೂ ಪ್ರಜಾರಾಜ್ಯದ ಚಲಾವಣೆಯಲ್ಲಿ ಮೊದಲು ಅತಿಪ್ರಸರಣಕ್ಕೆ ಕಾರಣವಾದವು. ಆದರೆ ಒಕ್ಕಲಿಗರ ಹಟ ಮತ್ತು ಪ್ರಜಾರಾಜ್ಯದ ಪುನಃಸಂಸ್ಥಾಪನೆಯಲ್ಲಿರುವ ಸಾಮಾನ್ಯ ವಿಶ್ವಾಸ ಇವುಗಳ ದೆಸೆಯಿಂದ ಅತಿಪ್ರಸರಣ ಇಳಿಯಿತು. ಅಕ್ಕಿಗಾಗಿ ಯಾವರೂ ಆ ಚೀನೀ ವ್ಯಾಪಾರಿಗಳು ಪ್ರಜಾರಾಜ್ಯದ ಚಲಾವಣೆಯನ್ನು ಸ್ವೀಕರಿಸುವ ಪ್ರಸಂಗ ಉಂಟಾಯಿತು.

ಆಕ್ರಾಮಕರ ಬಯಲಾಸೆ

ಜೋಗ್ ಜಕಾರ್ತವನ್ನು ವಶಪಡಿಸಿಕೊಂಡರೆ ಎಲ್ಲರೂ ತಮಗೆ ನೆರವಾಗುವರೆಂದು ಕೊಂಡಿದ್ದ ಡಚ್ಚರ ನಂಬಿಗೆಯು ಬುಡ ಕಳಚಿ ಹೋಯಿತು. ಸುಲ್ತಾನನನ್ನು ಮುಕ್ತಮಾಡುವೆವೆಂಬ ಘೋಷಣೆಯಿತ್ತು ಜೋಗ್ ಜಕಾರ್ತವನ್ನು ಹಿಡಿದರೆ ಮೇಲೆ ಹೇಳಿದಂತೆ ಸುಲ್ತಾನನು ಡಚ್ಚರಿಗೆ ಒಲಿಯದಾದನು. ಪ್ರಜಾರಾಜ್ಯದ ೧೦,೦೦೦ ನೌಕರರಲ್ಲಿ ಕೇವಲ ೧೫೦ ಮಂದಿ ಡಚ್ಚರ ಕೈಕೆಳಗೆ ಕೆಲಸ ಮಾಡಲು ಒಪ್ಪಿದರು. ಪ್ರಜೆಗಳ ಮೇಲೆ ಡಚ್ಚರು ನಡೆಸಿದ ಬಲಾತ್ಕಾರದ ಫಲವಾಗಿ ಅವರಲ್ಲಿ ಡಚ್ಚರ ಬಗ್ಗೆ ಭಯ, ಸಂಶಯ, ತಿರಸ್ಕಾರಗಳು ಉಂಟಾಗಿವೆ. ವಿದ್ಯಾಶಾಖೆಯ ಕಾರ್ಯದರ್ಶಿ ಡಾ. ಸಂತೋಸೋ ಅವರನ್ನೂ ಮಹಮ್ಮದೀಯ ಪಕ್ಷದ ಮುಖಂಡ ಅಬಿಕುಸ್ನೋ ಅವರ ಮಕ್ಕಳನ್ನೂ ಗುಂಡಿಗೆ ಗುರಿಮಾಡಿದುದೇ ಮೊದಲಾದ ಅನಾಗರಿಕ ಕೃತ್ಯಗಳಿಂದ ಆಗಲೇ ಡಚ್ಚರು ಕುಪ್ರಸಿದ್ಧರಾಗಿಬಿಟ್ಟಿದ್ದಾರೆ. ಅನೇಕರನ್ನು ಹಾಗೇ ಗುಂಡಿಕ್ಕಿ ಅವರು ಕೊಂದಿದ್ದಾರೆ.

ದೃಷ್ಟಿಮಾಂದ್ಯ

ಇಂಗ್ಲೆಂಡಿನ ವುಡ್ರೋವ್ಯಾಟರು ''ದಿ ನ್ಯೂ ಸ್ಟೇಟ್ಸ್‌ಮನ್ ಎಂಡ್ ನೇಶನ್''ನಲ್ಲಿ ಬರೆದಿರುವಂತೆ ಡಚ್ಚರಿಗೆ ಹಿಡಿದ ಈ ರಾಜಕೀಯ ದೃಷ್ಟಿಮಾಂದ್ಯ ಇನ್ನೂ ಹರಿಯದಾದರೆ, ಜಗತ್ತು ಡಚ್ಚರು ಮುಂದೆಮಾಡುವ ನೆವಗಳನ್ನೆಲ್ಲ ಕೇಳಿಕೊಂಡು ಸುಮ್ಮನೆ ಕುಳಿತುಕೊಳ್ಳಬೇಕೇ? ತಮ್ಮ ಪ್ರದೇಶದ ಹೊರಗೆ ಪ್ರಜಾರಾಜ್ಯದವರಿಗೆ ಬೆಂಬಲವಿಲ್ಲ ಎಂಬದು ಸುಳ್ಳು, ಸಂ. ರಾ. ಸಂಘದ ಆದೇಶವನ್ನು ತಳ್ಳಿಹಾಕುವ ಮೋಸ, ಬಲವಾದ ರಕ್ಷಣೆಯಿಲ್ಲದೆ ನಗರಗಳ ಹೊರ ಹೊರಡಲಾಗದಿದ್ದರೂ ಪ್ರಜಾರಾಜ್ಯದ ಪ್ರದೇಶಗಳೆಲ್ಲ ಶಾಂತವಾಗಿವೆಯೆಂಬ ಬುಡವಿಲ್ಲದ ಹೇಳಿಕೆ ಮುಂತಾದವುಗಳಿಂದ ಡಚ್ಚರು ಏಶಿಯದ ಒಂದು ಪ್ರಬುದ್ಧ ರಾಷ್ಟ್ರವನ್ನು ಶೋಷಿಸುತ್ತಿದ್ದರೆ ಅವರನ್ನು ಯುರೋಪಿನ ಪಶ್ಚಿಮ ಒಕ್ಕೂಟದಿಂದ ಬಹಿಷ್ಕರಿಸುವ ಸೂಚನೆಯನ್ನು ಏಶಿಯದಲ್ಲಿ ತಮ್ಮ ಪ್ರತಿಷ್ಠೆಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದಾದರೂ ಬ್ರಿಟಿಶರು ಮಾಡದಿರರೆಂದು ಮೇಲೆ ಹೇಳಿದ ಲೇಖಕರು ಆಶೆಯನ್ನು ವ್ಯಕ್ತಪಡಿಸಿದ್ದಾರೆ. ಹೊಸದಿಲ್ಲಿಯಲ್ಲಿ ಮೊನ್ನೆ ನೆರೆದ ಏಶಿಯದ ಅಷ್ಟಾದಶ ರಾಷ್ಟ್ರಗಳು ಈ ಸಂಗತಿಯನ್ನು ಗಮನಿಸಿ ಮುಂದಿನ ಕರ್ತವ್ಯವನ್ನು ನಿರ್ಣಯಿಸಲು ಮತ್ತೊಮ್ಮೆ ಸಭೆ ಸೇರುವ ಸಂಭವವಿದೆ. ಅವಾದರೂ ತಮ್ಮ ಪ್ರತಿಷ್ಠೆಯನ್ನು ಏಶಿಯದ ಮರ್ಯಾದೆ ಸ್ವಾತಂತ್ರ್ಯಗಳನ್ನೂ ಉಳಿಸಿಕೊಳ್ಳಬೇಕಾದರೆ ಭದ್ರತಾ ಮಂಡಲದ ನಿರ್ವೀರ್ಯತೆಯನ್ನು ಕಂಡು ಸುಮ್ಮನಿರದೆ ಸ್ವತಃ ಡಚ್ಚರ ಗರ್ವಭಂಗಕ್ಕಾಗಿ ಆರ್ಥಿಕ ಬಹಿಷ್ಕಾರ ಮುಂತಾದ ಅಸ್ತ್ರಗಳನ್ನೂ ಮಿಕ್ಕ ನಾನಾ ರೂಪದ ಅಸಹಕಾರ ಪ್ರತಿಬಂಧಕಗಳನ್ನೂ ಪ್ರಯೋಗಿಸುವ ಕಾಲ ಸಮೀಪಿಸುತ್ತಿದೆ.

–ಅರ್ಜುನ

ಮುಚ್ಚಲೀಪಟ್ಟಣದ ಸಮೀಪದಲ್ಲಿರುವ ಕೊಡಲಿ ಗ್ರಾಮದಲ್ಲಿಯ ದನಗಳ ಪ್ರದರ್ಶನ ನೋಡಲು ಬಂದ ಜನ ಸಮೂಹದ ಮೇಲೆ ದಾಳಿ ಮಾಡಿದ್ದರಿಂದ ಓರ್ವನು ಕೊಲ್ಲಲ್ಪಟ್ಟು ನಾಲ್ವರು ಗಾಯಗೊಂಡರು. ಪೋಲೀಸರು ಜನಸಮೂಹವನ್ನು ನಿಯಂತ್ರಿಸಲು ಸೌಮ್ಯ ಲಾಠಿ ಪ್ರಹಾರ ಮಾಡಿದರು.

೧೯೧೪-೧೮ ರ ಮಹಾಯುದ್ಧದ ಸಮಯ. ಇಂಗ್ಲೀಷ ಮತ್ತು ಫ್ರೆಂಚರು ಜರ್ಮನರೊಂದಿಗೆ ಕಾದಾಡುತ್ತಿರುವ ರಣಾಂಗಣದ ಒಂದು ಭಾಗ. ಎಲ್ಲೆಲ್ಲಿಯೂ ನೀರವತೆ, ನೀರವತೆಯೊಂದಿಗೆ ಕತ್ತಲೆಯೂ ಹಬ್ಬಿತ್ತು. ಮುಗಿಲಿನಲ್ಲಿ ಪಂಚಮಿಯ ಚಂದ್ರನಿದ್ದರೂ ಅವನ ಬೆಳಕನ್ನು ನೆಲದ ವರೆಗೆ ಬರದಂತೆ ಮೋಡಗಳು ತಡೆದಿವೆ.

ಇಂಥ ಯುದ್ಧ ಸಮಯದಲ್ಲಿ ಹಗಲಿನಲ್ಲಿ ಎಲ್ಲಿಯಾದರೂ ಅಡ್ಡಾಡಿದರೆ ತೀರಿತು, ಯಾವದಾದರೂ ಒಂದು ಗುಂಡು ಬಂದು ತಲೆ ಹೊಡೆದುಕೊಂಡು ಹೋಗುತ್ತಿತ್ತು. ಇಂತಹ ಮಬ್ಬು ರಾತ್ರಿಯಲ್ಲಿ ನೀವು ಪಹರೆಯ ಮೇಲಿನ ಸೈನಿಕರಿಗೆ ಹಾಗೆಯೇ ಕಾಣಸಿಗದಿದ್ದರೂ ಅವರು ಬಿಡುತ್ತಿದ್ದ ಬೆಳಕಿನ ಗುಂಡುಗಳು ನಿಮ್ಮನ್ನು ಅವರಿಗೆ ತೋರಿಸುತ್ತಿದ್ದವು.

ಮಧ್ಯರಾತ್ರಿಗೆ ಸ್ವಲ್ಪ ಹೊತ್ತಿರುವಾಗ ರಣಾಂಗಣದ ಮೇಲಿನ ನಿರ್ಜನವಾದ ಮತ್ತು ಬೆಳಕಿನ ಗುಂಡುಗಳ ದಾರಿಯಿಂದ ತುಸು ದೂರವಿದ್ದ ಸ್ಥಳದಲ್ಲಿ ಒಂದು ವ್ಯಕ್ತಿ ಹೊರಟಿತ್ತು. ಅವನು ಗಾಯಾಳುಗಳನ್ನು ನೋಡುತ್ತಿದ್ದಿಲ್ಲ, ಶತ್ರುಗಳನ್ನು ನಿರೀಕ್ಷಿಸುತ್ತಿದ್ದಿಲ್ಲ, ಅಥವಾ ಉಳಿದವರು ಮಾಡುವ ಯಾವ ಕೆಲಸವನ್ನೂ ಅವನು ಮಾಡುತ್ತಿದ್ದಿಲ್ಲ. ಹಾಗೆಯೇ ಹೊರಟಿದ್ದನು. ಅವನು ಮೆಲ್ಲನೆ ನಡೆಯಬೇಕಾಗುತ್ತಿತ್ತು, ಕಾರಣ ನೆಲವೆಲ್ಲ ಗುಂಡು ಮತ್ತು ಬಾಂಬುಗಳ ಬಡೆತದಿಂದ ತಗ್ಗುತಗ್ಗಾಗಿರುತ್ತಿತ್ತು; ಅಷ್ಟಲ್ಲದೆ ಸತ್ತ ಇಲ್ಲವೆ ಗಾಯಗೊಂಡ ಸೈನಿಕರನ್ನು ಅವನು ಎಡವಬಹುದಾಗಿತ್ತು, ತುಳಿಯಬಹುದಾಗಿತ್ತು. ಅವನು ಅಷ್ಟು ಎಚ್ಚರದಿಂದ ನಡೆಯುತ್ತಿದ್ದುದರ ಕಾರಣವೆಂದರೆ, ಅವನು ಜರ್ಮನ ದೇಶದ ಬಾದಷಹನಿದ್ದನು.

ರಣಾಂಗಣದ ತುಂಬ ದಟ್ಟವಾದ ಕತ್ತಲೆ ಹಬ್ಬಿದೆ ಎಂದು ಬಾದಷಹನು ಅತ್ಯಂತ ಸಾವಧಾನದಿಂದ ನಡೆಯುತ್ತಿದ್ದರೂ ಅವನು ಒಂದು ತಗ್ಗಿನಲ್ಲಿ ಕಾಲಿಡಲೇಬೇಕಾಯಿತು. ಅವನು ಬೀಳುವ ಹೆದರಿಕೆಯಿಂದ ಒಣಗಿದ ಹುಲ್ಲಿನಂತಹ ಒಂದು ವಸ್ತುವಿನ ಆಧಾರವನ್ನು ತೆಗೆದುಕೊಂಡನು. ಆದರೆ ಅದು ನಿಜವಾಗಿಯೂ ಒಣಗಿದ ಹುಲ್ಲಾಗಿರಲಿಲ್ಲ! ಒಬ್ಬ ಫ್ರೆಂಚ ಸೈನಿಕನ ಗಡ್ಡವಾಗಿತ್ತು. ಚಂದ್ರನು ಒಂದು ಕ್ಷಣ ಮೋಡಗಳ ಹೊರಗೆ ಬಂದನು. ಅವನ ಬೆಳಕಿನಲ್ಲಿ ಬಾದಷಹನಿಗೆ ಆ ತಗ್ಗಿನಲ್ಲಿ ಒಬ್ಬ ಫ್ರೆಂಚ ಮತ್ತು ಒಬ್ಬ ಇಂಗ್ಲೀಷ ಹಾಗೂ ಇಬ್ಬರು ಜರ್ಮನ ಸೈನಿಕರು ಕಂಡುಬಂದರು. ಅವರೆಲ್ಲರೂ ಅರೆಜೀವವಾಗಿ ಬಿದ್ದಿದ್ದರು. ಅವರು ತನ್ನನ್ನೇ ದಿಟ್ಟಿಸುತ್ತಿರುವರೆಂದು ಬಾದಷಹನು ಬಗೆದನು.

ಬಾದಷಹನ ವಿಶಾಲವಾದ ಎದೆ ಅದುರಿತು. ವಿಚಾರ ಮಾಡುವ ಮೊದಲೇ ಅವನು ಜರ್ಮನ ಭಾಷೆಯಲ್ಲಿ ನುಡಿದನು: "ಹೀಗಾಗಬೇಕೆಂದು ನಾನೆಂದಿಗೂ ಬಗೆದಿದ್ದಿಲ್ಲ." ಅವನು ಆ ಸ್ಥಳದಿಂದ ಬೇಗ ಬೇಗನೆ ಮುಂದೆ ಹೋದನು. ಆದರೆ ಆ ನಾಲ್ಕು ಗಾಯಾಳುಗಳನ್ನು ನೋಡಿದಾಗಿನಿಂದ ಅವನು ನಿಸ್ಸತ್ವನಾದಂತಾಗಿದ್ದನು. ಅವನಿಗೆ ನಾಲ್ಕುಹೆಜ್ಜೆ ನಡೆಯಲೂ ಆಗಲೊಲ್ಲದು. ಅವನು ಸ್ವಲ್ಪ ದೂರದಲ್ಲಿ ಕುಳಿತುಕೊಂಡನು.

ಚಿಕ್ಕ ಕತೆ

ಬಾದಷಹ ಮತ್ತು ಬಾಲಿಕೆ

ಮೂಲ: ಜಾರ್ಜ ಬರ್ನಾರ್ಡ ಷಾ * ಅನುವಾದ: ಶ್ರೀನಿವಾಸ ನರಗುಂದಕರ

ಮುಂದೆ ನಡೆದದ್ದೆಲ್ಲ ಅತ್ಯಂತ ಆಶ್ಚರ್ಯಕರವಾಗಿದೆ.

ಕತ್ತಲೆಯಲ್ಲಿ ಒಂದು ಕಂದು ಬಣ್ಣದ ಆಕೃತಿ ಬರುತ್ತಿರುವದನ್ನು ಬಾದಷಹನು ಕಂಡನು. ಆ ಆಕೃತಿ ಬಿಕ್ಕುತ್ತಿರದಿದ್ದರೆ, ಕಿಣಿ ಕಿಣಿ ಶಬ್ದ ಮಾಡುತ್ತಿರದಿದ್ದರೆ, ಅವನು ಅದನ್ನು ಒಂದು ನಾಯಿ ಎಂದೇ ತಿಳಿದುಕೊಳ್ಳಬಹುದಾಗಿತ್ತು. ಆದರೆ ಹತ್ತಿರ ಹತ್ತಿರ ಬಂದ ಹಾಗೆ ಅದು ಒಂದು ಚಿಕ್ಕ ಹುಡುಗಿ ಎಂದು ಅವನಿಗೆ ಗೊತ್ತಾಯಿತು. ಅವಳ ಕೈಯಲ್ಲಿ ನೀರಿನ ಒಂದು ಟಿನ್ ಡಬ್ಬಿಯಿತ್ತು, ಅದೇ ಕಿಣಿ ಕಿಣಿ ಶಬ್ದ ಮಾಡುತ್ತಿತ್ತು. ಹುಡುಗಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಬಾದಷಹನನ್ನು ನೋಡಿದಾಗ ಅವಳು ಬಿಕ್ಕುವದನ್ನು ನಿಲ್ಲಿಸಲಿಲ್ಲ ಅಥವಾ ಹೆಚ್ಚೂ ಮಾಡಲಿಲ್ಲ, ಆದರೆ ಬಿಕ್ಕುತ್ತಲೇ ಹೇಳಿದಳು:

"ನನ್ನ ಹತ್ತಿರಿನ ನೀರೆಲ್ಲ ಮುಗಿದಿದೆ."

"ಅಯ್ಯೋ," ಮಕ್ಕಳಲ್ಲಿ ಒಂದಾಗುವ ಸ್ವಭಾವವುಳ್ಳ ಬಾದಷಹನು ನುಡಿದನು. "ನಿನಗೆ ಬಹಳ ನೀರಡಿಕೆ ಆಗಿದೆಯೇ? ನನ್ನ ಹತ್ತಿರ ಈ ಫ್ಲ್ಯಾಸ್ಕು ಇದೆ. ಆದರೆ ಅದರಲ್ಲಿ ನೀರು ಕುಡಿಯುವ ಲೋಟ ಇಲ್ಲ."

"ನನಗೇನೂ ಕುಡಿಯಲು ಬೇಕಾಗಿಲ್ಲ." ಆ ಹುಡಿಗೆ ಆಶ್ಚರ್ಯಚಕಿತವಾಗಿ ನುಡಿಯಿತು, "ಆದರೆ ನಿನಗೆ ನೀರು ಬೇಡವೇ? ನಿನಗೆ ಗಾಯವಾಗಿಲ್ಲವೇ?" ಆ ಹುಡಿಗೆ ಪುನಃ ಅಳಹತ್ತಿದಳು.

"ಆ ಸೈನಿಕರು ನನಗೆ ಸಿಟ್ಟು ಮಾಡಿದರು" ಅವಳು ಬಾದಷಹನ ಹತ್ತಿರ ಹೋಗಿ ಅವನ ಮೊಣಕಾಲಿಗೆ ಅನಿಸಿ ಕೂಡುತ್ತ ಹೇಳಿದಳು. "ಆ ತಗ್ಗಿನಲ್ಲಿ ನಾಲ್ಕು ಸೈನಿಕರಿದ್ದಾರೆ. ಒಬ್ಬ ಟಾಮಿ, ಇನ್ನೊಬ್ಬ ಹ್ಯಾರಿ, ಮತ್ತಿಬ್ಬರು ಬೂಚರು."

"ಜರ್ಮನ ಸೈನಿಕರಿಗೆ 'ಬೂಚ'ನೆಂದನಬಾರದು" ಬಾದಷಹನು ಅತ್ಯಂತ ಗಂಭೀರನಾಗಿ ನುಡಿದನು, "ಅದು ತಪ್ಪು."

"ಅದು ತಪ್ಪೇ? ಸುಳ್ಳು. ಇಂಗ್ಲೀಷ ಸೈನಿಕನಿಗೆ ಟಾಮಿ ಎಂದೆನ್ನುತ್ತಾರೆ; ಫ್ರೆಂಚನಿಗೆ ಹ್ಯಾರಿ ಎಂದೆನ್ನುತ್ತಾರೆ ಮತ್ತು ಜರ್ಮನ ಸೈನಿಕರಿಗೆ 'ಬೂಚ' ನೆಂದೆನ್ನುತ್ತಾರೆ. ನನ್ನ ತಾಯಿಯೂ ಹಾಗೇ ಕರೆಯುತ್ತಾಳೆ. ನಮ್ಮ ಕಡೆಗೆ ಎಲ್ಲರೂ ಹಾಗೆ ಕರೆಯುತ್ತಾರೆ. ಆ ತಗ್ಗಿನಲ್ಲಿಯ ಒಬ್ಬ ಬೂಚನು ಚಾಳೀಸು ಹಾಕಿದ್ದಾನೆ. ಅವನು ಶಾಲೆಯ ಮಾಸ್ತರನಂತೆ ಕಾಣುತ್ತಾನೆ. ಇನ್ನೊಬ್ಬನು ಎರಡು ದಿನಗಳಿಂದಹಾಗೆಯೇಬಿದ್ದಿದ್ದಾನೆ. ಯಾರಿಗೂಅಲುಗಾಡಲು ಬರುವದಿಲ್ಲ. ನಾನು ಅವರಿಗೆ ನೀರು ಕೊಟ್ಟೆ. ಅವರು, ದೇವರು ನಿನ್ನನ್ನು ಕಾಪಾಡಲಿ ಎಂದು ಹರಸಿದರು. ಅಷ್ಟರಲ್ಲಿ ಒಂದು ಬೆಳಕಿನ ಗುಂಡು ದೂರದಲ್ಲಿ ಬಿತ್ತು. ಅವರು ಗಾಬರಿಯಾಗಿ, ನೀನು ಬೇಗನೆ ಮನೆಗೆ ಹೋಗದಿದ್ದರೆ ಕರಡಿ ಬಂದು ನಿನ್ನನ್ನು ತಿಂದು ಬಿಡುತ್ತದೆ, ಇಲ್ಲವೆ ನನ್ನ ತಂದೆ ನನ್ನನ್ನು ಹೊಡೆಯಬಹುದೆಂದು ಹೇಳಿದರು. ನನ್ನ ತಂದೆ ಹೊಡೆಯುವದಿಲ್ಲ. ನಾನು ನಿನ್ನ ಹತ್ತಿರ ಕುಳಿತಿರಲೇ? ನನಗೆ ಕರಡಿಯದೇ ಹೆದರಿಕೆ ಇದೆ."

"ನನ್ನ ಹತ್ತಿರ ಇರು. ಕರಡಿ ನಿನಗೆ ಏನೂ ಮಾಡಲಾರದು. ನಿಜವಾಗಿ ಇಲ್ಲಿ ಕರಡಿಗಳೇ ಇಲ್ಲ," ಬಾದಶಹನು ನುಡಿದನು.

"ನಿಜವಾಗಿಯೂ? ಆ ಟಾಮಿಯು ಇಲ್ಲೊಂದು ದೊಡ್ಡ ಕರಡಿ ಇದೆ. ಅದು ಸಣ್ಣ ಹುಡುಗರನ್ನು ತಿಂದ ನಂತರ ಅವರನ್ನು ಹೊಟ್ಟೆಯಲ್ಲಿ ಕುದಿಸುತ್ತದೆ ಎಂದು ಹೇಳಿದನು."

"ಟಾಮಿ ಎಂದರೆ ಇಂಗ್ಲೀಷನಲ್ಲವೇ? ಇಂಗ್ಲೀಷರೆಂದಿಗೂ ಸತ್ಯವನ್ನು ಹೇಳುವದಿಲ್ಲ," ಬಾದಷಹನು ಹೇಳಿದನು.

"ಹಾಗೇನಿಲ್ಲ. ಅವನು ಮೊದಲು ಬಹಳ ಸಭ್ಯನಾಗಿ ನಡೆದುಕೊಂಡನು." ಆ ಹುಡುಗಿ ಇಷ್ಟು ಹೇಳಿ ಪುನಃ ಅಳಹತ್ತಿತು. ಮತ್ತೆ ಮೆಲ್ಲನೆ ಹೇಳಿತು: "ಆದರೆ ಅವನು ಆ ಮೇಲೆ ಹಾಗೇಕೆ ಹೇಳಿದನೋ? ಬಹಳವಾಡಿ ಅವನಿಗೆ ನೋವಿನಿಂದ ಎಲ್ಲವೂ ಹಾಗೆ ತೋರಿಬರುತ್ತಿದ್ದಿರಬಹುದು."

"ಅಳಬೇಡ" ಬಾದಷಹನು ಹೇಳಿದನು. "ಅವರಿಗೆ ನಿನ್ನ ಮೇಲೆ ಸಿಟ್ಟಿಲ್ಲ. ನಿನ್ನನ್ನು ಮನೆಗೆ ಕಳಿಸಬೇಕಾಗಿತ್ತು ಅವರಿಗೆ. ಇಲ್ಲದಿದ್ದರೆ ನೀನು ಅವರಂತೆಯೇ ಗಾಯಗೊಂಡು ಬೀಳುತ್ತಿದ್ದೆ."

"ಓ! ನನಗೆ ಈ ಬೆಳಕಿನ ಗುಂಡುಗಳ ಹೆದರಿಕೆ ಇಲ್ಲ. ಪ್ರತಿ ರಾತ್ರಿ ನಾನು ಗಾಯಾಳುಗಳಿಗೆ ನೀರು ಕೊಡುತ್ತಿರುತ್ತೇನೆ. ನನ್ನ ತಂದೆ ಐದು ದಿನಗಳಿಂದಲೂ ಅಲ್ಲಿ ಬಿದ್ದುಕೊಂಡಿದ್ದಾನೆ. ಅವನು ನೀರಡಿಕೆಯಿಂದ ಒಣಗಿ ಹೋಗಿದ್ದಾನೆ" ಆ ಹುಡುಗಿ ಸ್ವಲ್ಪ ಬಿಕ್ಕಿತು.

"ಹೀಗಾಗಬಹುದೆಂದು ನಾನೆಂದೂ ಬಗೆದಿದ್ದಿಲ್ಲ" ಬಾದಷಹನು ಪುನಃ ನಿಸ್ಸತ್ವಗೊಂಡವರಂತೆ ಜರ್ಮನ ಭಾಷೆಯಲ್ಲಿ ಗುಣಗುಟ್ಟಿದನು.

"ಹಾ! ನೀನು ಬೂಚನೇನು?" ಆ ಹುಡುಗಿ ಕೇಳಿದಳು. ಬಾದಷಹನು ಇಷ್ಟೊತ್ತಿನವರೆಗೆ ಫ್ರೆಂಚಿನಲ್ಲೆ ಮಾತನಾಡುತ್ತಿದ್ದನು. "ನೀನು ಫ್ರೆಂಚ ಚೆನ್ನಾಗಿ ಮಾತನಾಡುತ್ತೀ. ಆದರೆ ನೀನು ಇಂಗ್ಲೀಷನಿರಬಹುದೆಂದು ನಾನು ತಿಳಿದಿದ್ದೆ."

ಪುನಃ ಚಂದ್ರನು ಹೊರಗೆ ಬಂದನು. ಹುಡುಗಿ ಬಾದಷಹನನ್ನು ನೋಡಿದಳು. "ನಿನ್ನ ಮೇಲಂಗಿ ಉತ್ತಮವಾದದ್ದಿದೆ ನಿನ್ನ ಪೋಷಾಕೂ ಸ್ವಚ್ಛವಾಗಿದೆ! ಇವು ಹೇಗೆ ಇಷ್ಟು ಸ್ವಚ್ಛವಾಗಿವೆ? ಬೆಳಕಿನ ಗುಂಡುಗಳು ಬಂದರೆ ನಿನಗೆ ನೆಲದ ಮೇಲೆ ಬೀಳಬೇಕಾಗುವದಿಲ್ಲವೇ?"

"ಇಲ್ಲ, ನಾನು ಹಾಗೇ ಸ್ಥಿರವಾಗಿ ನಿಲ್ಲುತ್ತೇನೆ" ಬಾದಷಹನು ಹೇಳಿದನು.

"ನೀನು ಹಾಗೆ ನಿಲ್ಲಬಾರದು. ಅವರು ನೋಡಿದರೆ ನಿನಗೆ ಗುಂಡು ಹೊಡೆಯಬಹುದು."

"ಒಳ್ಳೇದು" ಬಾದಷಹನು ನುಡಿದನು. "ನಿಜವಾಗಿ ನಿನ್ನೊಂದಿಗೆ ಇದ್ದಾಗ ನಾನು ನೆಲದ ಮೇಲೆ ಬೀಳುವೆ. ಇನ್ನು ನಿನ್ನನ್ನು ಮನೆಗೆ ಮುಟ್ಟಿಸುತ್ತೇನೆ. ನಿನ್ನ ಮನೆ ಎಲ್ಲಿದೆ?"

ಆ ಚಿಕ್ಕ ಹುಡಿಗೆ ನಕ್ಕಿತು. "ನಮಗೆ ಮನೆಯೇ ಇಲ್ಲ. ಮೊದಲು ಜರ್ಮನರು ನಮ್ಮೂರಿನ ಮೇಲೆ ದಾಳಿ ಮಾಡಿ ಅದನ್ನು ಕಸಿದುಕೊಂಡರು. ಆಮೇಲೆ ಫ್ರೆಂಚರು ಅದರ ಮೇಲೆ ದಾಳಿ ಮಾಡಿದರು. ಅನಂತರ ಇಂಗ್ಲೀಷರು ಬಂದು ದಾಳಿ ಮಾಡಿ ಜರ್ಮನರನ್ನು ಹೊರಗೆ ಅಟ್ಟಿದರು. ಈಗ ಮೂರು ಜನರು ಕೂಡಿಯೇ ನಮ್ಮೂರಿನ ಮೇಲೆ ದಾಳಿ ಮಾಡುತ್ತಿದ್ದಾರೆ. ಈ ದಾಳಿಗಳಲ್ಲಿ ನಮ್ಮ ಮನೆ ಎಲ್ಲ ಸುಟ್ಟು ಹೋಗಿದೆ. ನಮ್ಮ ಮನೆ ಇದ್ದ ಸ್ಥಳದಲ್ಲಿ ಬೂದಿ ಮಾತ್ರ ಉಳಿದಿದೆ. ನಮ್ಮ ಮನೆ ಎಷ್ಟು ಚಂದವಾಗಿತ್ತು!" ಆ ಹುಡುಗಿ ಮತ್ತೆ ಅಳಹತ್ತಿತು.

"ಹೀಗಾಗಬಹುದೆಂದು ನಾನೆಂದೂ ಬಗೆದಿದ್ದಿಲ್ಲ," ಬಾದಷಹನು ಪುನಃ ಬಲಗುಂದಿದವನಂತೆ ನುಡಿದನು. ಮತ್ತೆ ಸುಧಾರಿಸಿಕೊಂಡು ಕೇಳಿದನು, "ನೀವು ಈಗೆಲ್ಲಿರುವಿರಿ?"

"ಸಿಕ್ಕಿದಲ್ಲಿ ಕೆಲದಿನಗಳ ವರೆಗೆ ಇದು ತ್ರಾಸಾಗುವದು, ಮುಂದೆ ತಾನೆ ಸರಿ ಹೋಗುವದು. ನೀನು ಯಾರು?"

"ನಾನು ಕೈಸರ."

"ಕೈಸರ? ಕೈಸರನ ಕೆಲಸವೇನು? ಯುದ್ಧ ಮಾಡುವದೇ? ಗಾಯಾಳುಗಳನ್ನು ತೆಗೆದುಕೊಂಡು ಹೋಗುವದೇ?"

"ಹಾಗೆ ಹೇಳಬೇಕಾದರೆ ಅವನು ಏನೂ ಮಾಡುವದಿಲ್ಲ. ಅವನು ವಿಚಾರ ಮಾತ್ರ ಮಾಡುತ್ತಾನೆ,"

"ಏನು ವಿಚಾರ ಮಾಡುತ್ತಾನೆ?" ಆ ಹುಡುಗಿ ಕೇಳಿದಳು. ಉಳಿದ ಚಿಕ್ಕವರಂತೆ ಅವಳಿಗೂ ಕುತೂಹಲಬುದ್ಧಿ ಇತ್ತು.

"ಅದಿರಲಿ, ಕೈಸರನಾಗುವದೊಂದು ಮೋಜಲ್ಲವೇ? ಆದರೆ ನೀನು ಇಷ್ಟೊತ್ತಿನಲ್ಲಿ ಇಲ್ಲಿ ಏನು ಮಾಡುತ್ತಿದ್ದೆ?"

"ನಾನು ಹೇಳಿದ್ದನ್ನು ನೀನು ಬೇರೊಬ್ಬರ ಮುಂದೆ ಹೇಳಬೇಡ. ಅದು ಗುಟ್ಟಾಗಿರಬೇಕು."

"ಓಹೋ! ಬೇಕಾದ ಹಾಗೆ ಹೇಳು. ನನಗೆ ಗುಟ್ಟೆಂದರೆ ಪ್ರೀತಿ."

"ಇಂದು ಬೆಳಗಿನಲ್ಲಿ ನನ್ನ ಸೈನಿಕರು ಯುದ್ಧಕ್ಕೆ ಹೊರಟಾಗ, ಅವರಿಗಾಗಿ ನಾನು ಬಹಳ ವಿಚಾರ ಮಾಡಬೇಕಾಗುತ್ತದೆಂದೂ ನಾನು ಅವರೊಂದಿಗೆ ಯುದ್ಧಕ್ಕೆ ಹೋದರೆ, ನಾನು ಸತ್ತು, ಅವರು ಅನಾಯಕರಾಗಬಹುದು ಹಾಗು ಅವರ ಸಂಹಾರವಾಗಬಹುದೆಂದೂ ಅದಕ್ಕಾಗಿ ನಾನು ಅವರೊಂದಿಗೆ ಯುದ್ಧಕ್ಕೆ ಬರಲಾಗುವದಿಲ್ಲೆಂದೂ ಅವರಿಗೆ ಹೇಳಿದ್ದೆ."

"ಇದು ನೆಟ್ಟಗಲ್ಲ. ನನಗೇನು ಇದು ನಿಜ ಎಂದೆನಿಸುವದಿಲ್ಲ. ಕಾರಣ ನನ್ನ ಅಣ್ಣ ಇದೆ ಯುದ್ಧದಲ್ಲಿ ಮಡಿದಾಗ, ಅವನಿಗಾಗಿ ಒಂದು

–೧೪ನೆಯ ಪುಟಕ್ಕೆ

ವಿಚಾರದ್ವಂದ್ವ

ಈ ಕಲಿಕಟ್ಟಿನ ಕೆಳಗೆ ಜನಾಭಿಪ್ರಾಯವನ್ನು ವಾರವಾರವೂ ಪ್ರಕಟಿಸಬೇಕೆಂದಿದ್ದೇವೆ. ಕೇವಲ ಸ್ವಾರ್ಥ ದೂರುಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಚರ್ಚೆ ನಡೆಸಿ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬರುವ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

ಭಾರತೀಯ ವಾಚಕರು

ಹಿಟ್ಲರ ಹೇಳುತ್ತಿದ್ದ: ಜರ್ಮನರು ಆಳಲಿಕ್ಕೆ ಹುಟ್ಟಿದವರು, ಮಿಕ್ಕವರು ಆಳಿಸಿಕೊಳ್ಳಲಿಕ್ಕೆ—ಎಂದು. ಪ್ರಜಾತಂತ್ರವಾದಿಗಳೆಲ್ಲ ಇದನ್ನು ಕೇಳಿ ಒಮ್ಮಿಂದೊಮ್ಮೆ ಕಿಡಿಯುಗುಳಿದರು, ಕೋಪಾಟೋಪದಿಂದ ಹಿಟ್ಲರನದು ಆಸುರೀವೃತ್ತಿಯೆಂದು ಶಪಿಸಿದರು. ಆದರೆ ನಮ್ಮ ದೇಶದಲ್ಲಿಯೇ ನಮ್ಮ ಸುತ್ತುಮುತ್ತಿನ ಜನರನ್ನು ಅಥವಾ ನಮ್ಮನ್ನೇ ಸ್ವಲ್ಪ ಕಣ್ದೆರೆದು ನೋಡಿದರೆ ಹಿಟ್ಲರವೇದದಲ್ಲಿ ಸತ್ಯವೇ ಪ್ರತಿಫಲಿತವಾಗಿದೆ ಎಂಬುದು ಮನಸ್ಸಿಗೊಪ್ಪದಿದ್ದರೂ ಹೌದೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ನಮ್ಮಲ್ಲಿ ಮುಖ್ಯವಾಗಿ ಎರಡು ಜಾತಿಯ ಜನರಿದ್ದಾರೆ: ಒಂದನೆಯದು ತಾಯಂದಿರದು, ಎರಡನೆಯದು ಮಕ್ಕಳದು. ತಾಯಂದಿರಿಗೆ ತಾವು ಯಾವಾಗಲೂ ಮಕ್ಕಳಿಗೆ ಮೀಸೆ ಮೊಲೆಗಳು ಮೂಡಿದಾಗಲೂ, ತಾಯಂದಿರಾಗಿಯೇ ಉಳಿಯುವ ಆಸೆ; ಮಕ್ಕಳಿಗಾದರೂ ಹಾಗೇ—ಕೂದಲು ಬೆಳ್ಳಗಾದರೂ ಮೊಲೆಹಾಲು ಕುಡಿದುಕೊಂಡಿರಬೇಕೆಂಬ ಆಸೆ! ನಮ್ಮ ಮುಖಂಡರೆಂದರೆ ಈ ತಾಯಂದಿರಂತೆ, ಜನಗಳು ಅವರ ಮಕ್ಕಳಂತೆ, ಹಸುಳೆಗಳಂತೆ ಇದ್ದಾರೆ. ಅವರಿಗೆ ಸದಾ ಚಮಚದಿಂದ ಅನುಯಾಯಿಗಳಿಗೆ ತಿನ್ನಿಸುತ್ತಿರುವ ಬಯಕೆಯಿದ್ದರೆ, ಇವರಿಗೆ ಸ್ವತಃ ಆ ಉಣಿಸನ್ನೇ ಉಂಡುಕೊಂಡು ಬಿದ್ದಿರುವ ಅಪೇಕ್ಷೆ! ನಮ್ಮಲ್ಲಿಯ ಬಹುಸಂಖ್ಯ ತಾಯಂದಿರಂತೆಯೇ ಬಹುಸಂಖ್ಯರಾಗಿರುವ ನಮ್ಮ ಮುಖಂಡರಲ್ಲಿ ಅದೇ ವಿಧದ ಅಜ್ಞಾನ, ಅಂಧಶ್ರದ್ಧೆ, ಪೂರ್ವಗ್ರಹ, ಜಾತೀಯತೆ, ವೈಯಕ್ತಿಕ ಸ್ವಾರ್ಥ ಇವು ಬೇರೆ ಬೇರೆ ಪ್ರಮಾಣಗಳಲ್ಲಿ ಕಂಡು ಬರುತ್ತವೆ. ಅವರು ಹೇಳಿದ್ದೇ ಅನುಯಾಯಿಗಳಿಗೆ ವೇದ. ಸ್ವಂತ ವಿಚಾರ ಮಾಡಬೇಕೆಂಬ ಉತ್ಸಾಹ, ಅವಶ್ಯಕತೆ ಮತ್ತು ಸಾಮರ್ಥ್ಯ ಭಾರತೀಯ ಅನುಯಾಯಿವರ್ಗಕ್ಕೆ ಇದ್ದಂತೆ ತೋರುವುದಿಲ್ಲ.

> ಯಚ್ಚೈವ ರೋಚತೇ ಮಹ್ಯಂ
> ತಚ್ಚೈವ ಕುರುತೇ ಪ್ರಿಯಾ
> ಇತಿ ವೇತ್ತಿ ನ ಜಾನಾತಿ
> ತತ್ಪ್ರಿಯಂ ಯತ್ಕರೋತಿ ಸಾ—

ತನಗೆ ಯಾವುದು ರುಚಿಸುವುದೋ ಅದನ್ನೇ ತನ್ನ ಹೆಂಡತಿ ಮಾಡುತ್ತಾಳೆ ಎಂದು ತಿಳಿವ Henpecked Husband—ಹೆಂಡತಿಯ ಇಚ್ಛೆಗೆ ಆಳಾದವನಂತೆ ತಮ್ಮ ನೇತೃಗಳು, ಮುಖಪತ್ರಗಳು ಮತ್ತು ಇತರ "ವಾಗ್ಭಟರು" ತಮಗೆ ತಕ್ಕದ್ದನ್ನೇ ಬೋಧಿಸುತ್ತಾರೆ ಎಂದು ಜನ ತಿಳಿದುಕೊಳ್ಳುತ್ತಿದೆ. ಇಂಥವರನ್ನೇ ಕಾಳಿದಾಸನು "ಮೂಢಃ ಪರಪ್ರತ್ಯಯನೇಯ ಬುದ್ಧಿಃ" ಎಂದು ಹೀಗಳೆದಿರುವುದು.

ಭಾರತದ ದೇಶೀ ಭಾಷೆಗಳಲ್ಲಿಯೂ ಇಂಗ್ಲೀಷಿನಲ್ಲಿಯೂ ಅನೇಕ ಪತ್ರಿಕೆಗಳು ಹೊರಡುತ್ತಿವೆ. ಅನೇಕರು ಅವುಗಳಲ್ಲಿ ಬರುವ ವಿವಿಧ ವಿಷಯಗಳನ್ನು ಪ್ರತಿನಿತ್ಯ ಓದುತ್ತಾರೆ. ಲೋಕಶಿಕ್ಷಣಾರ್ಥವಾಗಿ ಪ್ರಸಿದ್ಧವಾದ ಅನೇಕ ಪತ್ರಿಕೆಗಳಲ್ಲಿ ಓದುಗರ ಅಭಿಪ್ರಾಯ, ಅರಿಕೆ, ಸಮಸ್ಯೆ ಮುಂತಾದುದನ್ನು ವ್ಯಕ್ತಪಡಿಸಲು ಜನಮತಕ್ಕಾಗಿ ಒಂದೆರಡು ಅಂಕಣಗಳನ್ನು ಮೀಸಲಿಡುವುದು ಬಹಳ ಕಾಲದಿಂದ ರೂಢಿಗೆ ಬಂದಿದೆ. ಆಂಗ್ಲ ಪತ್ರಿಕೆಗಳಲ್ಲಿ ಹಲವಾರು ಓದುಗರು ನಾನಾ ವಿಷಯಗಳ ಬಗ್ಗೆ ಅಭಿಪ್ರಾಯ, ಪ್ರಶ್ನೆ ಮುಂತಾದುದನ್ನು ಪ್ರಕಟಿಸುತ್ತಿರುವುದೇನೋ ನಿಜ. ಆದರೆ ಅವುಗಳಲ್ಲಿ ಬಹ್ವಂಶ ಉಡಿಗೆ, ತೊಡಿಗೆ, ಊಟ, ತಿಂಡಿ, ಆಟ, ನೋಟಗಳಿಗೇ ಹೆಚ್ಚಾಗಿ ಸಂಬಂಧಿಸಿದವು. ಕುಲವ 'ನಾಲಗೆಯರುಹಿತು ಎಂಬ ನಾಣ್ಣುಡಿಯಂತೆ ಆಯಾ ಪತ್ರಕಾರರ ಸಂಸ್ಕೃತಿ, ಬುದ್ಧಿ, ನಾಗರಿಕತೆ, ಗುಣ ಇವುಗಳ ಮಟ್ಟವನ್ನೇ ಆ ಬರಹಗಳು ಹೊರಗೆಡಹುತ್ತವೆಯಲ್ಲವೆ? ಇನ್ನು ದೇಶೀಭಾಷೆಯ ಪತ್ರಿಕೆಗಳು. ಅವರಲ್ಲೂ ಕನ್ನಡ ಪತ್ರಿಕೆಗಳಲ್ಲಿ. ಜನಮತಗಳು ಬರುವುದೇ ವಿರಳ, ಬಂದರೂ ವಾಹನಗಳ ಸೌಕರ್ಯ, ಆಹಾರ ಮತ್ತು ವಸ್ತ್ರಗಳ ಸೀವಾ, ಕಂದಾಯ ಕರಗಳ ಹೇರಾಟ ಮುಂತಾದವುಗಳ ಬಗ್ಗೆ ದೂರನ್ನಷ್ಟು ಮಾತ್ರ ಅವುಗಳಲ್ಲಿ ಕಾಣಬಹುದಲ್ಲದೆ, ಸಮಾಜ ಮತ್ತು ರಾಷ್ಟ್ರದ ಸಾರ್ವಜನಿಕವೂ ಸಾರ್ವತ್ರಿಕವೂ ಚಿರಪರಿಣಾಮಿಯೂ ಆಗುವ ತತ್ವ, ಸಮಸ್ಯೆ ಮತ್ತು ಅವುಗಳ ವಿವರಣ, ಉತ್ತರ ಇವುಗಳನ್ನು ಆಚರಣೀಯವಾಗಿ ಜನತೆಯ ಮುಂದಿಡಲು ಯಾರೂ ಹೆಚ್ಚಾಗಿ ಪ್ರಯತ್ನಿಸುವುದಿಲ್ಲ. ಯಾರಿಗೂ ಅದರ ಅವಶ್ಯಕತೆಯಿದೆಯೆಂಬುದರ ಅರಿವಾಗಲಿ, ಅವಶ್ಯಕತೆಯ ಅರಿವಿದ್ದರೆ ಅದನ್ನು ಪ್ರಕಾಶಪಡಿಸಬೇಕೆಂಬ ಲವಲವಿಕೆಯಾಗಲಿ ಇದ್ದಂತೆ ತೋರುವುದಿಲ್ಲ. ಪರದೇಶದ ಪತ್ರಿಕೆಗಳಲ್ಲಿ ಇದಕ್ಕೆ ವಿರುದ್ಧ ನಿದರ್ಶನಗಳನ್ನು ಕಾಣಬಹುದು. ಸಾಮಾನ್ಯರಲ್ಲದೆ, ಮಾನ್ಯ ವಿದ್ವಾಂಸರೂ ಅಧಿಕೃತ ವ್ಯಕ್ತಿಗಳೂ ಜಿಜ್ಞಾಸುಗಳೂ ವಿಚಾರಮಂಡಿತರೂ ಸಾರ್ವಜನಿಕರ ಅಜ್ಞಾನ ಕುಜ್ಞಾನಗಳನ್ನು ನಿವಾರಿಸುವ ಅಥವಾ ತಮ್ಮ ಸಂಶಯಗಳನ್ನು ಬಗೆಹರಿಸಿಕೊಳ್ಳುವ ದೃಷ್ಟಿಯಿಂದ ವಿವಿಧ ವಿಷಯಗಳ ಮೇಲೆ ಪತ್ರಿಕೆಗಳೊಡನೆ ಪತ್ರವ್ಯವಹಾರ ಮಾಡುವುದು ರೂಢಿಯಲ್ಲಿದೆ. ಚರ್ಚಿಲ್ಲರಂಥ ರಾಜಕಾರಣಿಗಳು, ಬರ್ನಾರ್ಡ್ ಶಾನಂಥ ಮೇಧಾವಿಗಳು ಮತ್ತು ಇತರ ಅನೇಕ ಭಿನ್ನ ಭಿನ್ನ ಕರ್ತೃತ್ವಶಕ್ತಿಯುಳ್ಳ, ವಿಚಾರಶಕ್ತಿಯುಳ್ಳ ಜಿಜ್ಞಾಸುಗಳೂ ಬೋಧಕರೂ ಔದಾಸೀನ್ಯವನ್ನೂ ಆಲಸ್ಯವನ್ನೂ ಕೊಡಹಿ ಜನಮತರೂಪಣಕ್ಕಾಗಿ, ಸ್ವಮತ ಪರಿಷ್ಕಾರಕ್ಕಾಗಿ ಪ್ರಸಿದ್ಧ ಪತ್ರಿಕೆಗಳಲ್ಲಿ ಜನಮತದ ಅಂಕಣಕ್ಕೆ ಪತ್ರ ಬರೆದ ಉದಾಹರಣೆಗಳಿವೆ. ಪಾಶ್ಚಾತ್ಯರ ದುರಭ್ಯಾಸಗಳನ್ನೇ ಆಧುನಿಕವೆಂದು ಸಮರ್ಥಿಸಿ ಆಚರಿಸುವ ನವನಾಗರಿಕರನ್ನು ನಮ್ಮ ದೇಶದಲ್ಲಿ ಕಾಣಬಹುದಲ್ಲದೆ, ಅವರ ಸದಭ್ಯಾಸಗಳನ್ನು ಪ್ರಯೋಜನ ದೃಷ್ಟಿಯಿಂದ ಸ್ವೀಕರಿಸಿ ಅನುಸರಿಸುವ ವಿವೇಕಿಗಳು ನಮ್ಮ ವಿವಿಧ ವಯಸ್ಸಿನ, ವಿವಿಧ ಶಿಕ್ಷಣದ ಸ್ತ್ರೀಪುರುಷರಲ್ಲಿ ಕಾಣಸಿಗುವುದು ದುರ್ಲಭವಾಗಿದೆ. ಇದು ಕಾಲಗುಣವೋ ನಿಂದ ನೆಲದ ಗುಣವೋ ಎಂದು ಪ್ರಶ್ನೆ ಹಾಕಿದರೆ ಎರಡೂ ಅಲ್ಲವೆನ್ನಬೇಕಾಗುತ್ತದೆ. ಇದೇ ಕಾಲದಲ್ಲಿ ಬೇರೆ ದೇಶಗಳಲ್ಲಿಯ ಜನರಿಗೆ ಈ ಔದಾಸೀನ್ಯ ಹಿಡಿಯದಿರುವುದು ಕಂಡು ಬರುವುದರಿಂದ ಇದು ಕಾಲಗುಣವಲ್ಲ. ಇದೇ ದೇಶದಲ್ಲಿ ಭಾರೀ ವಿಚಾರವಂತರು, ಸೂಕ್ಷ್ಮಜ್ಞರು, ದಾರ್ಶನಿಕರು ಜನಿಸಿದ್ದಿರುವುದರಿಂದ ಇದು ನೆಲದ ಗುಣವಲ್ಲ. ಹಾಗಾದರೆ ಈ ನ್ಯೂನತೆಗೆ ಇತ್ತೀಚಿನ ಕೆಲ ತಲೆಮಾರುಗಳ, ಜನರ ಉಂಡಾಡಿತನವೇ, ಹೊಣೆಗೇಡಿತನವೇ ಕಾರಣವೆನ್ನಬೇಕಾಯಿತಲ್ಲವೆ? —ಪ್ರಬುದ್ಧ

\+ × ×

"ಮರಾಠಾ ಬ್ಲಾಕ್ಸ"

ಮೊನ್ನೆ ಹಾನೆ ದಾರಿಗುಂಟ ನಡೆದಾಗ "ಮರಾಠಾ ಬ್ಲಾಕ್ಸ" ಎಂದು ಬರೆದ ಒಂದು ಫಲಕವನ್ನು ನೋಡಿ ವಿಚಾರತರಂಗಗಳ ಕೋಲಾಹಲವೆದ್ದಿತು. ನಮ್ಮ ರಾಷ್ಟ್ರವು ಜಾತ್ಯತೀತವಾಗಬೇಕೆಂಬದೇ ನಮ್ಮ ಆಡಳಿತಗಾರರ ಮತ್ತು ದೇಶದ ಹಿತಚಿಂತಕರ ಗುರಿ! ಮತ್ತು ಆ ನಿಟ್ಟಿನಲ್ಲಿ ಪ್ರಯತ್ನಗಳೂ ನಡೆದಿವೆ. ಮೇಲೆ ವಿವರಿಸಿದ ಫಲಕವು ಒಂದು ಸರಕಾರಿ ಕಾಲೇಜಿನ ವಸತಿಗೃಹದ ಮೇಲೆ ಅಲೆದಾಡುತ್ತಿತ್ತು—ಬಿಚ್ಚುಗತ್ತಿಯಂತೆ! ನಾಳಿನ ನಾಗರಿಕರನ್ನು ಉಚ್ಚಶಿಕ್ಷಣದಿಂದ ಸಜ್ಜುಗೊಳಿಸುವ ಕೇಂದ್ರವಾದ ಕಾಲೇಜಿನ ವಸತಿಗೃಹದ ಮೇಲಿನ, ಅದರಲ್ಲಿಯೂ ಸರಕಾರೀ ಕಾಲೇಜಿನ ವಸತಿಗೃಹದ ಮೇಲಿನ ಈ ಫಲಕವು, ಜಾತಿ ಎಂಬ ಕಾಳಸರ್ಪವು ತನ್ನ ಹೆಡೆ ಎತ್ತಿ "ಜಾತೀಯತೆಯನ್ನು ಹೇಗೆ ನಿರ್ಮೂಲಗೊಳಿಸುವಿರಿ ನೋಡುವಾ" ಎಂದು ವಿಕಟಹಾಸ್ಯವನ್ನು ಬೀರಿ, ಸರಕಾರ ಮತ್ತು ಸಮಾಜಕ್ಕೆ ಆಹ್ವಾನ ಕೊಟ್ಟ ಬಗೆ ಭೀಕರವಾಗಿತ್ತು! ಬೇರೆ ಎಷ್ಟೋ ಶಾಲೆ, ಕಾಲೇಜು, ಉಪಾಹಾರಗೃಹ ಬ್ಯಾಂಕು ಇತ್ಯಾದಿ ಸ್ಥಳಗಳಲ್ಲಿ ಇಂಥ ಫಲಕಗಳನ್ನು ಹೇರಳವಾಗಿ ಕಾಣಬಹುದು— ವಿಷಯವೇನೋ ಕ್ಷುಲ್ಲಕವೆನಿಸಬಹುದು. ಇವು ನಮ್ಮ ಮನೋಭೂಮಿಕೆಯ ಪಡಿನೆಳಲೇ ಆಗಿವೆ—ನಮ್ಮ ಅಧಃಪಾತಕ್ಕೆ ಕಾರಣವಾದ ಈ ಪಡಿನೆಳಲನ್ನು ಈ ಕಲಂಕವನ್ನು ಅಳಿಸಲೇಬೇಕು— ಮನೆಗಳಲ್ಲಿಯ ಸತ್ಪುರುಷರ ನೀತಿವಚನಗಳ ಭಿತ್ತಿಪತ್ರಗಳು ಮೇಲಿಂದ ಮೇಲೆ ದೃಷ್ಟಿಗೆ ಬೀಳುವದರಿಂದ ಮನಸ್ಸಿನ ಮೇಲೆ ಸುಪರಿಣಾಮವಾಗುವದಿಲ್ಲವೇ? ತದ್ವಿರುದ್ಧವಿದೆ ಈ ಫಲಗಳ ಪರಿಣಾಮ! ಆದ್ದರಿಂದ ಸಮಾಜವೂ ಸರಕಾರವೂ ಇಂಥ ಲೋಪದೋಷಗಳನ್ನು, ಸ್ಪಷ್ಟ ಮಾಡುವದು ಒಳ್ಳೆಯದು. —"ಕ್ಷ"

ಜಾತೀಯತೆಯ ಆಸುರೀ ಪ್ರವಾಹ

"ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ" ಎಂದು ಆಹ್ವಾನ ಕೊಟ್ಟ ಕಾಲ ಒಂದಿದ್ದರೆ ಈಗ "ಜಾತಿವಂತನ ಮನೆಯ ಸಂಸ್ಕೃತಿಯು ತ್ಯಾಜ್ಯವೇ" ಎಂದು ಕೇಳಬೇಕಾದ ಕಾಲ ಬಂದು ಬಿಟ್ಟದೆ. ಅದೊಂದು ತುದಿಯಾದರೆ ಇದಿನ್ನೊಂದು ತುದಿ. ಸಮಾಜದಲ್ಲಿ ಈ ಎರಡು ಸ್ಥಿತಿಗಳು ಸಂಭವಿಸಲು ಅಜ್ಞಾನ ಮಾತ್ಸರ್ಯಗಳೇ ಬೀಜಗಳು. ಇದರಿಂದ ಮಾನವ ಕಟ್ಟಿದ ಸಂಸ್ಕೃತಿಯ ಕಲಶ ಮಸುಳದಿರದು. ಧರ್ಮದ ತಿರುಳನ್ನು ಮರೆತು ಸಿಪ್ಪೆಯಿಂದಲೇ ಹೆಮ್ಮೆಪಟ್ಟು ಅಜ್ಞಾನಿಗಳನ್ನು ಅವಹೇಲನ ಮಾಡಿದ ಬ್ರಾಹ್ಮಣಿಕೆಗೆ ವಿರುದ್ಧವಾಗಿ ಈಗ ಬರಬೇಕಾದುದೇನು? ಅಜ್ಞಾನಿಗಳು ಜ್ಞಾನಿಗಳಾಗಿ ನಿಜ ಬ್ರಾಹ್ಮಣಿಕೆಯನ್ನು, ಸಜ್ಜನಿಕೆಯನ್ನು, ಶಿಷ್ಟತೆಯನ್ನು, ಗುಣಜ್ಞಾನಸಮನ್ವಿತ ಸೌಂದರ್ಯವನ್ನು ಬೆಳೆಸಿಕೊಂಡು ಡಾಂಭಿಕರಿಗೆ ಪ್ರತ್ಯುತ್ತರ ಕೊಡಬೇಕಾದುದು. ಅದರ ಬದಲು ಅಜ್ಞಾನಿಗಳು ಅಜ್ಞಾನವೇ ಜ್ಞಾನವೆಂಬ ಶಾಠ್ಯವನ್ನು ಅಳವಡಿಸಿಕೊಂಡು ವಿದ್ವೇಷಾವಿಷ್ಟರಾಗಿ ಅಲ್ಪಸ್ವಲ್ಪವಾದರೂ ಉಳಿದಿರುವ ನಿಜ ಬ್ರಾಹ್ಮಣಿಕೆಯ, ನಿಜ ಹಿಂದುತ್ವದ, ನಿಜ ಭಾರತೀಯತೆಯ ಸಂಸ್ಕಾರಾವಶೇಷಗಳನ್ನು ವಿನಾಶಮಾಡಲು ಕಂಕಣತೊಡುವುದು ಕಂಡು ಬರುತ್ತಿದೆ. ಇದು ಭಾರತೀಯ ಪ್ರಜೆಯೆನಿಸಿದ ಯಾವನಿಗೇ ಆಗಲಿ ಆತ್ಮಘಾತಕವೆನಿಸದಿರದು.

ಗಾಂಧಿಯವರು ಜಾತ್ಯತೀತ ಹಿಂದುಧರ್ಮದ ಕನಸನ್ನು ಕಂಡರು. ಕಾಂಗ್ರೆಸ್ ಸರಕಾರವು ಜಾತ್ಯತೀತ ಸರಕಾರವನ್ನು ರೂಪಿಸಿತು. ಆದರೆ ತಿಳಿದವರೆನಿಸಿಕೊಂಬವರಿಂದು ಬಾಯಲ್ಲಲ್ಲದೆ ಕಾರ್ಯದಲ್ಲಿ ಜಾತ್ಯತೀತತೆಯನ್ನು ಆಚರಿಸುವುದು ದುರ್ಲಭವೆನಿಸಿದೆ. ಮದ್ರಾಸ ಸರಕಾರ ಇದಕ್ಕೊಂದು ಉತ್ತಮ ನಿದರ್ಶನವಾಗಿದೆ. ಜಾತೀಯತೆಯ ಸರಕಾರೀ ಆದೇಶವನ್ನು ಮೊನ್ನೆ ಎತ್ತಿಹಿಡಿದ ಗೋಪಾಲರೆಡ್ಡಿಯವರ ಭಾಷಣ ಯಾವ ಕಾಂಗ್ರೆಸ್ಸಿಗನನ್ನಾದರೂ ನಾಚಿಕೆಗೀಡು ಮಾಡದಿರದು. ಕಲಬುರ್ಗಿ ಸಾಹಿತ್ಯ ಸಮ್ಮೇಳನದ ಮಹಿಳಾಗೋಷ್ಠಿಯಲ್ಲಿ ಅಧ್ಯಕ್ಷ ಗೌರಾದೇವಿ ಇಂಚಲಮಠರು ಕ.ಸಾಹಿತ್ಯ ಸಮ್ಮೇಲನಗಳಾದರೂ ಹೆಂಗಸೊಬ್ಬಳಿಗೆ ಅಧ್ಯಕ್ಷಸ್ಥಾನ ಕೊಡಲಿಲ್ಲವೆಂದು ವ್ಯಥಾ ದೂರಿಕೊಂಡಂತೆ ಬ್ರಾಹ್ಮಣೇತರರು ಆದರ್ಶ ಬ್ರಾಹ್ಮಣಿಕೆಯ ಗುಣ ಧರ್ಮ ವಿದ್ಯಾವಿವೇಕಾದಿಗಳನ್ನು ಸಂಪಾದಿಸಿಕೊಳ್ಳದೆ ಸ್ವಂತ ಯೋಗ್ಯತೆಯಿಂದ ಎಲ್ಲಿಯೋ ಕೆಲ ಬ್ರಾಹ್ಮಣರು ಉಚ್ಚ ಸ್ಥಾನವನ್ನು ಅಲಂಕರಿಸಿದ್ದರೆ ಅದಕ್ಕೆ ಹೊಟ್ಟೆಕಿಚ್ಚುಪಟ್ಟು ಅಪಪ್ರಚಾರಕ್ಕೆ ಪ್ರಾರಂಭಿಸುವುದು ಕಣ್ಣುಮುಚ್ಚಿಕೊಂಡು ಬೆಕ್ಕು ಹಾಲು ಕುಡಿದು ಯಾರೂ ಕಾಣರೆಂದು ತಿಳಿದುಕೊಂಡಂತೆ ಸಾಗಿದೆ.

ದಕ್ಷಿಣ ಹಿಂದುಸ್ತಾನದಲ್ಲಿ ಶ್ರೀ ರಾಮಸ್ವಾಮಿ ನಾಯ್ಕರ "ದ್ರಾವಿಡಕರಗಂ" ಹೊತ್ತಿ ಉರಿಯತೊಡಗಿದ್ದು ಸ್ಪಷ್ಟವೇ ಇದೆ. ಆ ಹಾಲಾಹಲದ ಬೀಜಗಳು ಮೊಳೆತು ಪ್ರಕಾಶಂ ಅವರ ಮಂತ್ರಿತ್ವದ ಪೀಠವನ್ನು ಉರುಳಿಸಿದ್ದು ಸರ್ವವಿದಿತವಾಗಿದೆ. ಒಂದು ಸರಕಾರೀ ಅಥವಾ ತದಿತರ ಕಾರ್ಯಾಲಯದಲ್ಲಿ ಕೇವಲ ಛಲದಿಂದ ಅನರ್ಹ ಬ್ರಾಹ್ಮಣೇತರರನ್ನು ನಿಯಮಿಸಿದ್ದಕ್ಕೆ ಅನೇಕ ಉದಾಹರಣೆಗಳಿಂದು ಸಿಗುತ್ತವೆ. ಅವರ ಅರ್ಹತೆಯನ್ನು ಹೆಚ್ಚಿಸಲು ಬೇಕಾದ ಸೌಲಭ್ಯಗಳನ್ನು ಕಲ್ಪಿಸಿ ಮಿಕ್ಕವರಿಗೆ ಸರಿಗಟ್ಟುವಂತೆ ಮಾಡಿ ನಿಯೋಜಿಸಿಕೊಂಡರೆ ಅದರಿಂದ ಆಡಳಿತೆಯ ಕಾರ್ಯ ಸುಗಮವಾಗುವುದೂ ಹಿಂದುಳಿದವರು ಮುನ್ನಡೆಯುವುದೂ ಒಟ್ಟೊಟ್ಟಿಗೇ ಸಾಗುವುದು. ಹಾಗೆ ಮಾಡದೆ ದೈವಾಯತ್ತವಾದ ಯಥಾಜಾತತೆಯ ದೋಷವನ್ನೇ ಗುಣವೆಂದು ಗ್ರಹಿಸಿ ಜಾತೀಯವಾಗಿ ಅಧಿಕಾರಗಳನ್ನು ಹಂಚಿದರೆ ಮೊದಲಿನ ಅನುವಂಶಿಕತೆಯ ತತ್ವವನ್ನೇ ಇನ್ನೊಂದು ಜಾತಿಯವರಿಗೆ ಅನ್ವಯಿಸಿದಂತಾಗುವುದಲ್ಲದೆ, ಆ ದೋಷವನ್ನು ಕಳೆದಂತಾಗುವುದಿಲ್ಲ; ಅಲ್ಲದೆ, ಅದಕ್ಕಿಂತ ಹೆಚ್ಚಿನ ನಷ್ಟ ರಾಷ್ಟ್ರದ ಮತ್ತು ಸಮಾಜದ ಏಳಿಗೆಯ, ಪ್ರತಿಷ್ಠೆಯ ಮತ್ತು ಸಂಸ್ಕೃತಿ ನಾಗರಿಕತೆಗಳ ದೃಷ್ಟಿಯಿಂದ ಉಂಟಾಗುತ್ತದೆ.

ಈ ಪಿಡುಗು ಕೇವಲ ದಕ್ಷಿಣ ಹಿಂದುಸ್ತಾನದಲ್ಲಿ ಮಾತ್ರ ಇದೆಯೆಂದು ತಿಳಿದರೆ ತಪ್ಪಾಗುವುದು; ಸಂಯುಕ್ತ ಪ್ರಾಂತದಲ್ಲಿಯೂ ಪ್ರಾರಂಭವಾಗಿದೆಯೆಂಬುದನ್ನು ಅಲ್ಲಿಯ ಬ್ರಾಹ್ಮಣೇತರ ಮಂತ್ರಿಗಳಲ್ಲೊಬ್ಬರಾದ ಶ್ರೀ ಸಂಪೂರ್ಣಾನಂದರು ಇತ್ತೀಚೆಗೆ ಹೊರಗೆಡಹಿದ್ದಾರೆ:

"ಪೆರಿಯಾರ್ ರಾಮಸ್ವಾಮಿ ನಾಯ್ಕರ ಬ್ರಹ್ಮನಿಂದಕ ಕರಿಯಂಗಿಗಳ ಅವತಾರಗಳು ಉತ್ತರದಲ್ಲೂ ಇವೆ...... ಶೋಷಿತ ಸಂಘ ಎಂಬುದು ಇದಕ್ಕೆ ನಿದರ್ಶನವಾಗಿದೆ. ಇದು ಚೆನ್ನಾಗಿ ಸಂಘಟಿತವಾಗಿಲ್ಲವಾದರೂ ಇಡೀ ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಶಿಥಿಲವಾಗಿ ಹರಡಿಕೊಂಡಿದೆ.

> ಬ್ರಾಹ್ಮಣ ಕ್ಷತ್ರಿಯ ಲಾಲಾ
> ಇನ್ಕೋ ದೇಶ್ ನಿಕಾಲಾ

ಎಂಬುದೇ ಸಂಘದ ಘೋಷ. ಅದರಲ್ಲಿ ಲಾಲ ಎಂದರೆ ವೈಶ್ಯ, ಬನಿಯ ಅಥವಾ ಕಾಯಸ್ಥ ಎಂದರ್ಥ. ಮೂರು ದಾರದ ಜನರನ್ನು ನಾವೆಂದೂ ಸಹಿಸೆವೆಂದು ಅವರು ಪ್ರಕಟವಾಗಿ ಸಾರುತ್ತಾರೆ. ಸಂಘದಲ್ಲಿ ಅಹೀರರು, ಕೂರ್ಮಿಗಳು, ಕೋಯರಿಗಳು ಮುಂತಾದವರಿದ್ದಾರೆ. ಹಿಂದುಳಿದ ವರ್ಗದವರುಶ್ಚಿತಮಗಿಂತ ಕೀಳೆಂದು ಭಾವಿಸಿ ಅವರನ್ನು ದೂರವಿಡುತ್ತಾರೆ. ಇವರದು ಹರಿಜನರಿಗೂ ದ್ವಿಜರಿಗೂ (ಮೂರುದಾರದವರಿಗೂ) ನಡುವೆ ಬರುವ ಜಾತಿ. ಇತ್ತೀಚಿನ ಗ್ರಾಮಪಂಚಾಯತಿಯ ಆಯ್ಕೆಯಲ್ಲಿ ಇವರ ಹಾವಳಿ ಬೆಳಕಿಗೆ ಬಂದಿದೆ. ನಾಳೆ ವಯಸ್ಕ ಮತದಾನಪದ್ಧತಿ ಜಾರಿಗೆ ಬಂತೆಂದರೆ ಇಂಥವರಿಂದ ಆಗುವ ಸಂಸ್ಕೃತಿಘಾತಕ ಚಟುವಟಿಕೆಗಳನ್ನು ಎಣಿಸಲಾದೀತೇ? ನಮ್ಮ ಮುಖಂಡರು ಕ್ರಾಂತಿ ಕಹಳೆಯನ್ನು ಊದಿದರು. ಆದರೆ ಆ ಕ್ರಾಂತಿಯ ಓಟಕ್ಕೆ ಸರಿಯಾದ ಮಾರ್ಗದರ್ಶನ ಮಾಡಿಲ್ಲ. ಇದರಿಂದ ಸರ್ವನಾಶ ಸಂಭವಿಸಲಿದೆ. ನಾನೇನೂ ಬ್ರಾಹ್ಮಣನಲ್ಲ. ಆದರೆ ನಾನು ಮನುವಿನ ಬಗ್ಗೆ ಪೂಜ್ಯಬುದ್ಧಿಯುಳ್ಳವನು. ಅವನು ಸಂಗ್ರಹಿಸಿ ಬರೆದ ಅಂಶಗಳಲ್ಲಿ ಎಲ್ಲವೂ ನ್ಯಾಯವಲ್ಲದಿದ್ದರೂ ಅರ್ಧಾಂಶವಾದರೂ ಸಾರ್ವಕಾಲಿಕ ಎನಿಸುವ ನೀತಿಗಳಾಗಿವೆ. ದ್ವಿಜತ್ವ ಅಥವಾ ಬ್ರಾಹ್ಮಣಿಕೆ ಒಂದು ವಿಷವೆಂದೇ ಒಂದು ವೇಳೆ ಒಪ್ಪಿಕೊಂಡು ಅದನ್ನು ನಿರ್ನಾಮಗೊಳಿಸಿದೆವೆಂದುಕೊಳ್ಳೋಣ. ಆದರೆ ಅದರಿಂದ ಎಲ್ಲ ಜನರಲ್ಲೂ ವ್ಯಾಪಿಸಿರುವ ಅಸಾಮಂಜಸ್ಯ, ಅಂಧಶ್ರದ್ಧೆ, ಸಂಕುಚಿತ ಮನೋವೃತ್ತಿಗಳು ಕೊನೆಗೊಳ್ಳಲಾರವು. ಆದರಿಂದ ರಕ್ತಪಾತ, ಹಿಂಸೆ ನೋವುಗಳಲ್ಲದೆ ಮತ್ತೇನೂ ಸಾಧಿಸಲ್ಪಡವು"

ಮೇಲಿನ ಅಭಿಪ್ರಾಯಸಾರ ಭಾರತೀಯರಾದ ನಮಗೊಂದು ಎಚ್ಚರಿಕೆಯಂತಿದೆ. ಹುಬ್ಬಳ್ಳಿಯ ಒಂದು ಕೋರ್ಟಿನಲ್ಲಿ ಒಮ್ಮೆ

—೧೩ನೆಯ ಪುಟಕ್ಕೆ

ಸಂಸ್ಥಾಪಕರು : ಶ್ರೀ ರಂ. ರಾ. ದಿವಾಕರ

ಸಂಪುಟ ೨೧
ಸಂಚಿಕೆ ೧

ಕರ್ಮವೀರ

ಸೋಮವಾರ
ಚೈತ್ರ ಶುದ್ಧ ೧೩

ಸಂಪಾದಕರು : ಪ. ರಾ. ಪುರೋಹಿತ, ಎಂ. ಎ.

ಕರ್ನಾಟಕಸ್ಥರ ಕರ್ತವ್ಯ

ಜಯಪುರ ಕಾಂಗ್ರೆಸ್ಸು ನೇಮಿಸಿದ್ದ ತ್ರಿಮೂರ್ತಿಗಳ ವರದಿಯನ್ನು ಕಾಂಗ್ರೆಸ ಕಾರ್ಯ ಸಮಿತಿಯು ಇಡಿಯಾಗಿ ಸ್ವೀಕರಿಸಿ ಭಾಷಾನ್ವಯ ಪ್ರಾಂತ ರಚನೆಗಾಗಿ ಆತುರರಾಗಿದ್ದ ಬಹುಸಂಖ್ಯರನ್ನು ನಿರಾಸೆಗೊಳಿಸಿತು. ಸಮಿತಿಯು ಭಾಷಾನ್ವಯ ಪ್ರಾಂತ ರಚನೆಯ ತತ್ವವನ್ನೊಪ್ಪಿದ್ದರೂ ಸದ್ಯಕ್ಕೆ ಪರಿಸ್ಥಿತಿ ಅನುಕೂಲವಿಲ್ಲದ್ದರಿಂದ ಹೊಸ ಪ್ರಾಂತಗಳ ರಚನೆಯನ್ನು ಮುಂದಕ್ಕೆ ಹಾಕಬೇಕೆಂದು ಅಭಿಪ್ರಾಯಪಟ್ಟಿದೆ. ಭಾಷಾನ್ವಯ ಪ್ರಾಂತ ರಚನೆಯು ಅವಶ್ಯ, ಅದಕ್ಕೆ ಬಲವಾದ ಬೇಡಿಕೆಯಿದೆ, ಅದರಲ್ಲಿಯೂ ಕರ್ನಾಟಕ ಕೇರಳ ಭಾಗಗಳು ಅನ್ಯ ಭಾಷಾ ಬಹುಮತದ ಪ್ರಾಂತಗಳಲ್ಲಿ ಸಿಕ್ಕು ನರಳುತಿವೆ ಎಂದು ಸಮಿತಿಯವರು ಅಭಿಪ್ರಾಯಪಟ್ಟರೂ ಈ ಪ್ರಾಂತಗಳ ರಚನೆಯು ಕೆಲವು ಸಂಸ್ಥಾನಗಳ ಸಮೀಕರಣವನ್ನವಲಂಬಿಸಿರುವದರಿಂದ ಅವುಗಳ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದ್ದಾರೆ.

ಸಮಿತಿಯವರು ಭಾಷಾನ್ವಯ ಪ್ರಾಂತ ರಚನೆಯನ್ನು ಮುಂದೂಡಬೇಕೆಂಬ ಅಭಿಪ್ರಾಯಕ್ಕೆ ಬರುವಾಗ ರಾಷ್ಟ್ರದ ಮುಂದಿರುವ ಅದಕ್ಕೂ ಮಹತ್ವದ ಪ್ರಶ್ನೆಗಳತ್ತ ಹೆಚ್ಚು ಗಮನಿಸಿರುವರೆಂಬುದು ಸ್ಪಷ್ಟವಾಗಿ ಕಂಡು ಬರುವದು. ದೇಶದ ಆರ್ಥಿಕ ಪರಿಸ್ಥಿತಿ ಬಹಳ ಸೂಕ್ಷ್ಮವುಟ್ಟಕ್ಕೆ ಬಂದಿರುವಾಗ ಹೊಸ ಪ್ರಾಂತಗಳನ್ನು ರಚಿಸಿ ಹೆಚ್ಚಿನ ಆರ್ಥಿಕ ಹೊಣೆಯನ್ನು ಹೊರುವುದು ಸಮಂಜಸವಾಗದು ಸ್ವಾತಂತ್ರ್ಯ ಪ್ರಾಪ್ತಿಯ ನಂತರ ದೇಶದಲ್ಲಿ ಉಂಟಾದ ಪರಿಸ್ಥಿತಿಯನ್ನೂ ಅಲಕ್ಷಿಸಲಾಗದು. ಎಂದು ಮುಂತಾಗಿ ಸಮಿತಿಯವರು ಹೇಳಿದ್ದಾರೆ. ಅದೇ ರೀತಿಯಾಗಿ ಗಡಿಗಳ ಸಂಬಂಧದಲ್ಲಿ ಉಂಟಾಗಬಹುದಾದ ವಿವಾದಗಳು ರಾಷ್ಟ್ರದ ಐಕ್ಯಕ್ಕೆ ಬಾಧೆಯನ್ನುಂಟುಮಾಡುವ ಪ್ರಶ್ನೆ ತ್ರಿಮೂರ್ತಿಗಳನ್ನು ಭಯಭೀತಮಾಡಿದೆ. ಅಂತೆಯೇ ಸದ್ಯದಲ್ಲಿ ಈ ವಿವಾದವನ್ನು ಎಬ್ಬಿಸುವದು ಬೇಡ ಎಂದು ಅವರು ಹೇಳಿದ್ದಾರೆ. ಗಡಿಗಳ ಪ್ರಶ್ನೆಯನ್ನು ಆಯಾ ಭಾಗದವರು ಬಗೆಹರಿಸಿಕೊಂಡರೆ ಭಾಷಾನ್ವಯ ಪ್ರಾಂತಗಳ ರಚನೆ ನಿರೀಕ್ಷಿಸಿದ್ದಕ್ಕಿಂತ ಬೇಗ ಆಗಬಲ್ಲದು. ಮಹಾತ್ಮಾ ಗಾಂಧಿಯವರಾದರೂ ಗಡಿಗಳ ಈ ಪ್ರಶ್ನೆಯನ್ನು ಇದೇ ರೀತಿಯಿಂದ ಬಗೆಹರಿಸಿಕೊಳ್ಳಬೇಕೆಂದು ಹೇಳಿದ್ದು ಎಲ್ಲರ ಸ್ಮರಣೆಯಲ್ಲಿ ಇರಬಹುದು. ಹಿಂದೂ ಮುಸಲ್ಮಾನರ ಪ್ರಶ್ನೆಯನ್ನು ಬಗೆಹರಿಸಿಕೊಂಡು ಬನ್ನಿರಿ ಎಂದರೆ ಸ್ವರಾಜ್ಯ ಕೊಡುವೆವು ಎಂದು ಬ್ರಿಟಿಶರು ಹೇಳಿದಂತೆಯೆ ಇದೆ ಗಡಿ ನಿರ್ಣಯದ ಈ ಪ್ರಶ್ನೆ ಎಂದು ಹಲವರು ಹೇಳುವುದುಂಟು. ಆದರೆ ಇವೆರಡರಲ್ಲಿ ಯಾವ ಬಗೆಯ ಸಾಮ್ಯವೂ ಇಲ್ಲ. ಗಡಿನಿರ್ಣಯದ ಪ್ರಶ್ನೆ ಪ್ರಾಂತ ಪ್ರಾಂತಗಳಲ್ಲಿ ದ್ವೇಷಭಾವನೆಯನ್ನು ಹೆಚ್ಚಿಸುವದಾದ್ದರಿಂದ ಅದರಲ್ಲಿ ಆಯಾ ಪ್ರಾಂತದವರು ಒಂದು ಬಗೆಯ ಒಡಂಬಡಿಕೆಗೆ ಬರುವೆದು ಅತ್ಯವಶ್ಯ. ವರಿಷ್ಠರ ಗಡಿನಿರ್ಣಾಯಕ ಸಮಿತಿಯ ಮುಖಾಂತರ ಈ ಪ್ರಶ್ನೆಯನ್ನು ಬಿಡಿಸಬಹುದಲ್ಲ ಎಂದೂ ಹಲವರು ವಾದಿಸಬಹುದು. ಆದರೆ ಗಡಿನಿರ್ಣಾಯಕ ಸಮಿತಿಯ ನಿರ್ಣಯವನ್ನು ಆಯಾ ಪ್ರಾಂತಗಳ ಮೇಲೆ ಹೇರಿ ಪರಸ್ಪರರಲ್ಲಿ ದ್ವೇಷ ಮನಸ್ತಾಪಗಳನ್ನು ಹೆಚ್ಚಿಸುವ ಸಮಯವಿದಲ್ಲ ಎಂಬದು ಎಲ್ಲರೂ ಒಪ್ಪತಕ್ಕ ಮಾತಾಗಿದೆ.

ತ್ರಿಮೂರ್ತಿಗಳ ವರದಿಯು ಎಷ್ಟೇ ನಿರಾಶಾಜನಕ ತೋರಿದರೂ ಜನಮತ ಪ್ರಬಲವಾದರೆ, ಪರಿಸ್ಥಿತಿಯನ್ನು ಪುನಃ ಪರಿಶೀಲಿಸಲಾಗುವದೆಂಬ ಆಶ್ವಾಸನವು ಆಶಾದಾಯಕವಾಗಿದೆ. ಸದ್ಯದಲ್ಲಿ ಆಯಾ ಪ್ರಾಂತದವರು ಕಾಂಗ್ರೆಸ ಕಾರ್ಯಸಮಿತಿಯ ನಿರ್ಣಯವನ್ನು ಒಪ್ಪಿಕೊಂಡೂ ಜನಮತವನ್ನು ಪ್ರಬಲಗೊಳಿಸಿ ಗಡಿಪ್ರಶ್ನೆಯನ್ನು ಬಗೆಹರಿಸಿಕೊಳ್ಳುವತ್ತ ಗಮನಿಸುವುದು ಕರ್ತವ್ಯವಾಗಿದೆ. ಆಂಧ್ರಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಲಾಗುವದೆಂದು ಸಮಿತಿಯವರು ಹೇಳಿದ್ದರೂ ಹೊಸ ಪ್ರಾಂತಗಳ ರಚನೆಯು ಪರಸ್ಪರಾವಲಂಬಿಯಾಗಿರುವದರಿಂದ ಎಲ್ಲ ಪ್ರಾಂತಗಳೂ ಕೂಡಿಯೆ ಆಗತಕ್ಕವೆಂಬುದು ಸ್ಪಷ್ಟವಾಗಿದೆ. ಸದ್ಯದಲ್ಲಿ ಕನ್ನಡಿಗರ ಕರ್ತವ್ಯವಂತೂ ನಿಚ್ಚಳವಾಗಿದೆ. ಮೈಸೂರು ಕರ್ನಾಟಕದಲ್ಲಿ ಕೂಡುವಂತಾದರೆ ಕರ್ನಾಟಕಪ್ರಾಂತ ನಿರ್ಮಾಣವನ್ನು ಯಾರೂ ತಡೆಯರು. ಒಕ್ಕೂಟ ಪ್ರದೇಶವನ್ನು ಸಂಸ್ಥಾನಗಳಿಗೆ ಬಿಟ್ಟುಕೊಡಲು ಒಕ್ಕೂಟ ಸರಕಾರವು ಸಿದ್ಧವಾಗಲಾರದೆಂದು ಈ ಮೊದಲು ನಾವು ಅಭಿಪ್ರಾಯಪಟ್ಟದ್ದು ಸಮಿತಿಯವರು ಅದಕ್ಕೆ ಪುಷ್ಟಿ ಕೊಟ್ಟಿರುತ್ತಾರೆ. ಇದನ್ನು ನೆನೆದರೆ ಮೈಸೂರ ಅರಸರನ್ನು ಘಟನಾತ್ಮಕ ಅರಸರನ್ನಾಗಿಟ್ಟುಕೊಳ್ಳುವ ಪ್ರಶ್ನೆ ಉದ್ಭವಿಸುವದಿಲ್ಲ. ಕನ್ನಡ ಕುಲಲಲಾಮರೆಂದು ಕೀರ್ತಿವೆತ್ತ ಮೈಸೂರು ಮಹಾರಾಜರು ಕನ್ನಡಕುಲದ ಹಿತದ ದೃಷ್ಟಿಯಿಂದ ವೀರೋಚಿತ ತ್ಯಾಗವನ್ನು ತೋರಿ ಸಿಂಹಾಸನವನ್ನು ಬಿಟ್ಟುಗೊಡಲು ಸಿದ್ಧರಾಗಬೇಕೆಂದು ಇಡೀ ಕನ್ನಡನಾಡಿನ ಜನತೆಯ ಪರವಾಗಿ ನಾವು ಬಿನ್ನವಿಸಿಕೊಳ್ಳಬಯಸುತ್ತೇವೆ ಮೈಸೂರಿನ ಜನತೆಯಾದರೂ ತನ್ನ ಮಹಾರಾಜರನ್ನು ಈ ಅಪೂರ್ವ ತ್ಯಾಗ ಮಾಡಲು ಬಿನ್ನವಿಸಿಕೊಳ್ಳುವದು ಕರ್ತವ್ಯವೆಂದು ತಿಳಿದುಕೊಳ್ಳಬೇಕಾದ ಸಮಯ ಪ್ರಾಪ್ತವಾಗಿದೆಯೀಗ. ಕರ್ನಾಟಕ ಪ್ರಾಂತೀಕರಣದ ಪ್ರಶ್ನೆ ಸಮಾಧಾನಕರವಾಗಿ ಬೇಗ ಬಗೆಹರಿಯಬೇಕಾದರೆ ಇದರ ಹೊರತು ಅನ್ಯ ಮಾರ್ಗವಿಲ್ಲೆಂಬುದು ಸ್ಪಷ್ಟವಿದೆ.

ಹೊಸ ವರುಷ

ಈ ಸಂಚಿಕೆಯಿಂದ ಕರ್ಮವೀರವು ಇಪ್ಪತ್ತೊಂದನೆಯ ವರುಷದಲ್ಲಿ ಕಾಲಿಡುವದು. ಕಳೆದ ಇಪ್ಪತ್ತು ವರುಷ ಪತ್ರಿಕೆಯು ಮಾಡಿದ ನಾಡ-ನುಡಿ ಸೇವೆ ಅನುಭವಿಸಿದ ಕಷ್ಟ-ನಷ್ಟ . ಕರ್ನಾಟಕದ ಜನತೆಯ ಮುಂದಿವೆ ಪತ್ರಿಕೆಯು ಪ್ರಾರಂಭದಲ್ಲಿ ಇಟ್ಟುಕೊಂಡಿದ್ದ ಎರಡು ಮುಖ್ಯ ಧ್ಯೇಯಗಳಲ್ಲ ಭಾರತ ಸ್ವಾತಂತ್ರ್ಯವು ಕೈಗೂಡಿದ್ದು ಕರ್ನಾಟಕ ಪ್ರಾಂತೀಕರಣವು ಮಾತ್ರ ಇನ್ನೂ ಸಾಧ್ಯವಾಗಬೇಕಾಗಿದೆ. ಅದಕ್ಕೆ ಎಷ್ಟೇ ಎಡರು ತೊಡರುಗಳು ಬಂದರೂ ಕರ್ನಾಟಕ ಪ್ರಾಂತ ನಿರ್ಮಾಣವೂ ಬೇಗ ಆಗಿ ಭಾರತದ ವಿವಿಧ ಪ್ರಾಂತಗಳ ಜೊತೆಯಲ್ಲಿ ಕರ್ನಾಟಕವೂ ಸ್ವತಂತ್ರ ಪ್ರಾಂತವೆಂದು ಹೆಮ್ಮೆಯಿಂದ ಮೋರೆಯನ್ನು ಮೇಲಕ್ಕೆತ್ತುವುದೆಂದು, ನಮಗೆ ಬಲವಾದ ವಿಶ್ವಾಸವಿದೆ. ಕನ್ನಡ ಜನತೆಯು ಈ ಧ್ಯೇಯಸಾಧನೆಗಾಗಿ ಸರ್ವವಿಧದಿಂದ ಪ್ರಯತ್ನಿಸಬೇಕಾದುದು ಕರ್ತವ್ಯವಾಗಿದೆ. ಈ ಮಹಾಕಾರ್ಯದಲ್ಲಿ ಕರ್ಮವೀರವು ಸದಾ ನಿರತವಾಗಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ಹೊಸ ವರುಷದಲ್ಲಿ ನಮ್ಮ ಪತ್ರಿಕೆಯನ್ನು ಇನ್ನಷ್ಟು ಆಕರ್ಷಕ ಮಾಡುವ ಆಶ್ವಾಸನವನ್ನು ಕೊಟ್ಟು ಗ್ರಾಹಕರೆಲ್ಲ ನಮ್ಮೀ ಕಾರ್ಯದಲ್ಲಿ ಎಂದಿನಂತೆ ತುಂಬ ಸಹಾಯ ಸಹಕಾರಗಳನ್ನು ನೀಡುವರೆಂಬ ಬಲವಾದ ವಿಶ್ವಾಸದಿಂದ ಮುಂದಡಿಯಿಡುತ್ತೇವೆ.

ಕರ್ನಾಟಕ ವಿಶ್ವವಿದ್ಯಾನಿಲಯ ಮಸೂದೆಯು ಮುಂಬಯಿ ಶಾಸನ ಸಭೆಯಲ್ಲಿ ಸ್ವೀಕೃತವಾಗಿ ಕನ್ನಡಿಗರ ಬಹುದಿನದ ಬೇಡಿಕೆ ಈಡೇರಿದಂತಾಯಿತು. ಈ ಮಸೂದೆಯನ್ವಯ ಬರುವವರ್ಷ ವಿಶ್ವವಿದ್ಯಾನಿಲಯವು ಸ್ಥಾಪಿತವಾಗುವದು. ಪ್ರಾದೇಶಿಕ ವಿಶ್ವವಿದ್ಯಾನಿಲಯಗಳಿಂದ ಆಯಾ ಸಾಹಿತ್ಯದ ಅಭಿವೃದ್ಧಿ ಮತ್ತು ಶಿಕ್ಷಣದ ಪ್ರಗತಿ ಹೆಚ್ಚಾಗುವದೆಂಬದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇದರಿಂದ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ವಿಶಿಷ್ಟವಾದ ಸ್ಥಾನವೊಂದೂ ದೊರೆದಂತಾಗುಪದು. ಆದರೆ ಈ ವಿಶ್ವವಿದ್ಯಾನಿಲಯದ ಮಸೂದೆ ಸ್ವೀಕೃತವಾದ ಕೂಡಲೆ ವಿದ್ಯಾಲಯ ಸ್ಥಾಪಿತವಾದಂತಾಯಿತೆಂದು ಮಾತ್ರ ಯಾರೂ ತಿಳಿಯಬಾರದು ಇದಕ್ಕಾಗಿ ಕನ್ನಡಿಗರು ಮುಕ್ತಹಸ್ತದಿಂದ ಧನ ಸಹಾಯ ಮಾಡಬೇಕಾಗುತ್ತದೆ. ಸಾರ್ವಜನಿಕರಿಂದ ಹಣ ಬಾರದೆ ವಿಶ್ವವಿದ್ಯಾಲಯದ ಸ್ಥಾಪನೆಯಾಗದು ನಾಡಿನ ಸಾರ್ವಾಂಗಿಕ ಉನ್ನತಿಗೆ ತಳಹದಿಯಂತಿರುವ ಈ ವಿದ್ಯಾಪೀಠದ ಸ್ಥಾಪನೆಗೆ ಅವಶ್ಯವಾದ ಧನ ಮತ್ತು ಇತರ ಸಹಾಯ ಸಹಕಾರಗಳನ್ನು ಕರ್ನಾಟಕದ ಮಹಾಜನರು ನೀಡಿ ಅದು ಮೂರ್ತಸ್ವರೂಪಕ್ಕೆ ಬರಲೆಂದು ಹಾರಯಿಸುತ್ತೇವೆ.

× × × ×

ಹೊಸ ಉದ್ಯೋಗಗಳಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ ಮುಂಬಯಿ ಸರಕಾರವು ಬಾಗಲಕೋಟೆಯ ಸಿಮೆಂಟ ಕಂಪನಿಯೊಂದಿಗೆ ಕರಾರು ಮಾಡಿಕೊಂಡು ಒಂದು ಕೋಟಿ ರೂಪಾಯಿ ಮಿಕ್ಕದ ಬೆಲೆಯ ಸಾಮಾನ್ಯ ಶೇರುಗಳ ಮೇಲೆ ೧೦೦ ಕ್ಕೆ ೧ ವರುಷಕ್ಕೆ ೪ ರಂತೆ ೫ ವರುಷಗಳ ವರೆಗೆ ಶೇರದಾರರಿಗೆ ಡಿವಿಡೆಂಡದ ಭರವಸೆ ಕೊಟ್ಟಿರುವದೆಂದೂ ಅದು ಭರವಸೆಯಿತ್ತ ಒಟ್ಟು ಹಣವು ೧೫ ಲಕ್ಷ ರೂಪಾಯಿ ಆಗುತಿದ್ದು ಡಿವಿಡೆಂಡಿನ ಕೊನೆಯ ಕಂತು ಕೊಟ್ಟ ನಂತರ ೫ ವರುಷಗಳಲ್ಲಿ ಕಂಪನಿಯು ಹಣವನ್ನು ತಿರುಗಿ ಕೊಡಬೇಕೆಂಬ ಕರಾರು ಇರುವುದೆಂದೂ ಅರ್ಥಸಚಿವರಾದ ಶ್ರೀ ವೈಕುಂಠ ಭಾಯಿ ಮೆಹತಾ ಇವರು ಶಾಸನ ಸಭೆಯಲ್ಲಿ ಹೇಳಿದರು. ಈ ಕಂಪನಿಯಲ್ಲಿ ಸಾವಿರದಿಂದ ಹದಿನೈದು ನೂರರ ವರೆಗೆ ಕೆಲಸಗಾರರು ಕೆಲಸ ಮಾಡುವರು. ಹಿಂದುಳಿದ ಪ್ರದೇಶದಲ್ಲಿ ಉದ್ಯೋಗಾಭಿವೃದ್ಧಿಯ ದೃಷ್ಟಿಯಿಂದ ಸರಕಾರದವರು ಹೀಗೆ ಸಹಾಯ ಮಾಡಲು ಮುಂದಾಗಿರುವದು ಸ್ತುತ್ಯ.

× × × ×

ನಮ್ಮ ಆಯಾತವು ಮರ್ಯಾದಿತವಾಗಿದ್ದರಿಂದ ನಮ್ಮ ನಮ್ಮ ಜಿಲ್ಹೆಗಳಲ್ಲಿಯ ಎತ್ತುವಳಿಯನ್ನು ಹೆಚ್ಚಿಸಿ ಆಹಾರ ಧಾನ್ಯದ ಕೊರತೆಯನ್ನು ಹಿಂಗಿಸಿಕೊಳ್ಳಬೇಕಾಗಿದೆ. ಎತ್ತುವಳಿಯನ್ನು ಹೆಚ್ಚಿಸಲು ರೈತರ ಮನವೊಲಿಸಬೇಕು. ಪ್ರತಿಯೊಂದು ಜಿಲ್ಹೆಯಲ್ಲಿ ಹೆಚ್ಚು ಆಹಾರ ಧಾನ್ಯ ಕೊಡಮಾಡಿದ ಮೊದಲನೆಯ ಮತ್ತು ಎರಡನೆಯ ಹಳ್ಳಿಗೆ ಅನುಕ್ರಮವಾಗಿ ೧೦ ಸಾವಿರ ಮತ್ತು ೫ ಸಾವಿರರೂಪಾಯಿಗಳ ಪಾರಿತೋಷಕಗಳನ್ನು ಕೊಡಲಾಗುವದು. ಪಾರಿತೋಷಕಗಳನ್ನು ಹಳ್ಳಿಯ ಭೂಮಿ, ಕ್ಷೇತ್ರ, ಜನಸಂಖ್ಯೆ ಮೊದಲಾದವುಗಳ ಮೇಲಿಂದ ನಿರ್ಧರಿಸಲಾಗುವದು ಎಂದು ಮುಂಬಯಿ ಸರಕಾರದ ಆಹಾರಮಂತ್ರಿ ಶ್ರೀ ದಿನಕರ ರಾವ ದೇಸಾಯಿಯವರು ಧಾರವಾಡದಲ್ಲಿ ಕಳೆದ ೬ ನೇ ತಾರೀಕು ಕೂಡಿದ್ದ ಜಿಲ್ಹಾ ಆಹಾರ ಸಲಹೆ ಸಮಿತಿಯ ಸಭೆಯಲ್ಲಿ ಸಾರಿದರು. ತಮಗೆ ಬೇಕಾದಷ್ಟು ಕಾಳನ್ನಿಟ್ಟುಕೊಂಡು ಉಳಿದುದನ್ನೆಲ್ಲ ಸರಕಾರಕ್ಕೆ ಮಾರುವದು ತಮ್ಮ ಕರ್ತವ್ಯವೆಂದು ತಿಳಿದು ರೈತರು ನಡೆದುಕೊಂಡದ್ದಾದರೆ ಎತ್ತುವಳಿ ಕಾರ್ಯವು ಯಶಸ್ವಿಯಾಗಬಲ್ಲದು. ರೈತರಲ್ಲಿ ಈ ಕರ್ತವ್ಯಬುದ್ಧಿ ಜಾಗ್ರತವಾಗುವಂತೆ ನೋಡಿಕೊಳ್ಳುವದು ಧುರೀಣರೆನ್ನಿಸಿಕೊಳ್ಳುವವರ ಹೊಣೆಯಾಗಿದೆ.

× × × ×

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲ ಸದಸ್ಯರು ಪ್ರಮುಖ ರಾಷ್ಟ್ರೀಯ ಧುರೀಣರನ್ನು ಕೊಲ್ಲುವ ಒಳಸಂಚಿನಲ್ಲಿ ತೊಡಗಿದ್ದಾರೆ, ಬೇರೆ ಕೆಲವರು ಹಿಂಸಾಚಾರಗಳಿಗಾಗಿ ಗೋಡೆಯಿಂದ ಕಳ್ಳತನದಿಂದ ಶಸ್ತ್ರಾಸ್ತ್ರಗಳನ್ನು ಸಾಗಿಸುವದರಲ್ಲಿ ತೊಡಗಿರುವರೆಂದು ಮುಂಬಯಿ ಗೃಹಮಂತ್ರಿಗಳಾದ ಶ್ರೀ. ಮುರಾರಜಿ ದೇಸಾಯಿಯವರು ಮುಂಬಯಿ ವಿಧಿಮಂಡಳದಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಹೇಳಿದರು. ಆದರೆ ಒಳಸಂಚಿನ ಆಧಿಯನ್ನಾಗಲಿ ವಿವರಗಳನ್ನಾಗಲಿ ತಿಳಿಸುವದು ಸಾರ್ವಜನಿಕರ ಹಿತದ ದೃಷ್ಟಿಯಿಂದ ವಿಹಿತವಲ್ಲ ಎಂದೂ ಶ್ರೀ ಮುರಾರಜಿಯವರು ಹೇಳಿದರು. ಜುಲೈ ೧೯೪೮ ರಲ್ಲಿ ಶಹಾಪುರದಲ್ಲಿ ಹಿಂಸಾತ್ಮಕ ದುರ್ಘಟನೆ ಸಂಭವಿಸಿದ್ದು ಒಂದು ದರೋಡೆಯೂ ಆಗಿದೆಯೆಂದು ಮಂತ್ರಿವರ್ಯರು ಹೇಳಿದರು. ದಿಸೆಂಬರ ೩೧ಕ್ಕೆ ೪೦೦೪ ಜನ ಆರ್. ಎಸ್. ಎಸ್. ಬಂಧಿತರಿದ್ದು ಅವರಲ್ಲಿ ೩೫೩ ಜನರು ವಿಚಾರಣೆಗೊಳಪಟ್ಟವರು ೩೩೨ ಜನರು ಸ್ಥಾನಬದ್ಧರಿದ್ದರು ಎಂದೂ ಗೃಹಮಂತ್ರಿಗಳು ಹೇಳಿದರು.

× × ×

ಸಾಮಾಜಿಕ ಬಹಿಷ್ಕಾರವನ್ನು ನಿರ್ಬಂಧಿಸುವ ಮಸೂದೆಯು ಮುಂಬಯಿ ಶಾಸನ ಸಭೆಯಲ್ಲಿ ಸ್ವೀಕೃತವಾಯಿತು. ಧರ್ಮದ ಹೆಸರಿನಲ್ಲಿ ನಡೆದ ಜುಲುಮೆ ಇಲ್ಲವೆ ನಿರಂಕುಶತ್ವವನ್ನು ಸ್ವತಂತ್ರ ಭಾರತವು ಇನ್ನು ಮುಂದೆ ನಡೆಯಗೊಡಲಾರದು ಎಂದು ಮುಖ್ಯ ಮಂತ್ರಿಗಳು ಮಸೂದೆಯ ವಿರೋಧಿಗಳಿಗೆ ಉತ್ತರ ಕೊಡುವಾಗ ಸಾರಿದರು. ಈ ಮಸೂದೆಯು ಮುಖ್ಯವಾಗಿ ದಾವುದಿ ಮತ್ತು ಬೋಹ್ರಾ ಸಮಾಜಕ್ಕೆ ಸಂಬಂಧವಾಗುವದು ಪ್ರಜೆಗಳ ಸ್ವಾಯತ್ತತೆಯಲ್ಲಿ ಕೈಹಾಕುವ ಉದ್ದೇಶ ಸರಕಾರದ್ದಿರುವದಿಲ್ಲ. ಆದರೆ ನಾಗರಿಕ ಹಕ್ಕುಗಳಿಗೂ ಮೇರೆಯುಂಟು. ನ್ಯಾಯ್ಯವಾದ ಹಕ್ಕನ್ನು ಅಕ್ರಮವಾಗಿ ಅಪಹರಿಸುತಿರುವದನ್ನು ತಡೆಯುವದೆ ಈ ಮಸೂದೆಯ ಮುಖ್ಯಾಶಯವಾಗಿದೆಯೆಂದು ಗೃಹಮಂತ್ರಿಗಳು ಚರ್ಚೆಗೆ ಉತ್ತರ ಕೊಡುವಾಗ ಹೇಳಿದರು.

ಓರ್ವ ಗೃಹಸ್ಥನು ತನ್ನ ಮಗಳನ್ನು ಮುಲ್ಲಾ ಸಾಹೇಬರಿಂದ ಬಹಿಷ್ಕಾರಕ್ಕೊಳಗಾದ ತನ್ನ ಸಮಾಜದಲ್ಲಿಯ ಓರ್ವನಿಗೆ ಲಗ್ನ ಮಾಡಿಕೊಟ್ಟದ್ದಕ್ಕೆ ಸ್ತ್ರೀ ಪುರುಷರನ್ನೊಳಗೊಂಡು ಆ ಇಡೀ ಕುಟುಂಬವು ಥಳಿಸಲ್ಪಟ್ಟ ಒಂದು ಪತ್ರವು ಬಂದಿದೆಯೆಂದೂ ನುಡಿದರು.

ಜಮೀನದಾರಿ ನಿರ್ಮೂಲನದ ಪ್ರಥಮ ಹೆಜ್ಜೆಯೆಂದು ಭಾಗದಾರಿ ಮತ್ತು ನಾರವದಾರಿ ಪದ್ಧತಿಗಳನ್ನು ರದ್ದುಪಡಿಸುವ ಮಸೂದೆಯೂ ಶಾಸನಸಭೆಯಲ್ಲಿ ಸ್ವೀಕೃತವಾಯಿತು. ಈ ಪದ್ಧತಿಯು ವಿಶೇಷವಾಗಿ ಗುಜರಾಥದಲ್ಲಿ ಜಾರಿಯಲ್ಲಿ ಇದೆ.

× × +

ಯುಕ್ತರಾಷ್ಟ್ರ ಸಂಘದ ಮಧ್ಯಸ್ಥಿಯಿಂದ ಕಾಶ್ಮೀರ ಸಮಸ್ಯೆ ಬೇಗ ಬಗೆಹರಿದು ಅಲ್ಲಿನ ಜನರ ಸಾರ್ವಾಂಗಿಕ ಪ್ರಗತಿಗೆ ಅನುಕೂಲ ವಾತಾವರಣವುಂಟಾಗಬಹುದೆಂದು ನಂಬಿದವರಿಗೆ ಮತ್ತೆ ನಿರಾಸೆಯಾಗಹತ್ತಿದೆ. ಈ ನಿರಾಸೆಗೆ ಪಾಕಿಸ್ತಾನದ ದುರಾಗ್ರಹಧೋರಣವೇ ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆಝಾದ ಕಾಶ್ಮೀರ ಸೈನ್ಯವನ್ನು ವಿಸರ್ಜಿಸದೆ ಕಾಶ್ಮೀರದಲ್ಲಿ ಸಾರ್ವತ್ರಿಕ ಮತಗಣನೆ ನ್ಯಾಯ್ಯವಾಗಿ ಮತ್ತು ನಿಷ್ಪಕ್ಷಪಾತತನದಿಂದ ನಡೆಯಲಾರದು. ಆದರೆ ಪಾಕಿಸ್ತಾನ ಸರಕಾರದವರು ಒಡಂಬಡಿಕೆಯಂತೆ ಆಝಾದ ಕಾಶ್ಮೀರ ಸೈನ್ಯವನ್ನು ವಿಸರ್ಜಿಸಲು ನಿರಾಕರಿಸುತಿರುವರೆಂದು ತಿಳಿಯುತ್ತದೆ. ಅದೇ ರೀತಿ ಒಡಂಬಡಿಕೆಯಾದ ಪ್ರಕಾರ ನಿರ್ಧರಿಸಲಾಗುವ ಗಡಿಯನ್ನು ಈ ಮೊದಲು ಯುದ್ಧ ನಿಲ್ಲಿಸುವಾಗ ಒಪ್ಪಿಕೊಂಡ ಗಡಿಗಿಂತ ಬದಲು ಮಾಡಬಾರದೆಂದೂ ಈ ಗಡಿಯೊಂದನ್ನೆ ಪಾಕಿಸ್ತಾನವು ಒಪ್ಪಿಕೊಳ್ಳುವದೆಂದೂ ಆಗ್ರಹ ಹಿಡಿಯುವ ಸಂಭವನಿದೆಯೆಂದು ತಿಳಿಯುತ್ತದೆ. ಕಾಶ್ಮೀರ ಉಪಸಮಿತಿಯು ಮುಂದೆ ಪಾಕಿಸ್ತಾನ ಸರಕಾರದ ಈ ವಾದವನ್ನು ಮಂಡಿಸಲಾಗುವದು ಗಡಿಯಲ್ಲಿ ಬದಲಾವಣೆ ಮಾಡುವದರಿಂದ ಹಿಂದೀ ಸೈನಿಕರ ವಶದಲ್ಲಿರುವ ಕಾಶ್ಮೀರ ಪ್ರದೇಶವು ವಿಸ್ತಾರವಾಗುವದೆಂದೂ ಆಝಾದ ಕಾಶ್ಮೀರ ಪ್ರದೇಶದಲ್ಲಿಯ ಕೆಲ ಪ್ರದೇಶವು ಇವರ ವಶದಲ್ಲಿ ಬರುವದೆಂದೂ ಆಝಾದ ಕಾಶ್ಮೀರ ಕೇಂದ್ರದಿಂದ ಬಂದ ಸುದ್ದಿಯಿಂದ ತಿಳಿಯುತ್ತದೆ. ಏನೇ ಆದರೂ ಇವೆರಡೂ ಸರಕಾರಗಳಲ್ಲಿ ಬಹುಶಃ ಎಲ್ಲ ವಿಷಯಗಳಲ್ಲಿ ಒಡಂಬಡಿಕೆಯಾಗದಿದ್ದರೆ, ಆಯಾ ಪ್ರದೇಶಗಳಲ್ಲಿರುವ ಜನತೆಯ ನೆಮ್ಮದಿಗೆ ಭಂಗವುಂಟಾಗುವದೆಂಬುದು ನಿಶ್ಚಿತ.

ವಿಹಂಗಮ ದರ್ಶನ

ಭಾಷಾನ್ವಯ ಪ್ರಾಂತರಚನೆ ಸದ್ಯಕ್ಕೆ ಸಲ್ಲದು

ಭಾರತದ ವಿದೇಶ ಧೋರಣೆ ಸ್ವತಂತ್ರವಾಗಿರುವದು

ಬ್ರಿಟಿಶ್ ಸಾಮ್ರಾಜ್ಯದೊಡನೆ ಹೊಸಬಗೆಯ ಸಂಬಂಧ

ಈ ವಾರದ ಅತಿ ದೊಡ್ಡ ಸುದ್ದಿಯೆಂದರೆ ಭಾಷಾನ್ವಯ ಪ್ರಾಂತ ರಚನೆಯನ್ನು ಕುರಿತು ಕಾಂಗ್ರೆಸ್ ತ್ರಿಮೂರ್ತಿಗಳು ಮಾಡಿದ ವರದಿ ಯೆಂದು ನಿಸ್ಸಂಶಯವಾಗಿ ಹೇಳಬಹುದು. ಭಾಷಾನ್ವಯ ಪ್ರಾಂತ ರಚನೆಯ ತತ್ವವನ್ನು ನಿರಾಕರಿಸದೆ ಅದನ್ನು ಕೆಲ ವರ್ಷ-ಎಷ್ಟು ವರ್ಷ ವೆಂದು ಯಾರಿಗೆ ಗೊತ್ತು?-ಮುಂದೆ ಹಾಕ ಬೇಕೆಂಬುದು ಅದರ ಸಾರವೆಂದು ಒಂದು ಮಾತಿನಲ್ಲಿ ಹೇಳಿಬಿಡಬಹುದು. ದರ್ ಸಮಿತಿಯ ಪ್ರತಿಕೂಲ ವರದಿ ಹೊರಬಿದ್ದೊಡನೆ ಭಾಷಾನ್ವಯ ಪ್ರಾಂತರಚನೆಯನ್ನು ಜೀವಾಳದ ಪ್ರಶ್ನೆಯೆಂದು ಬಗೆದಿದ್ದ ಪ್ರದೇಶಗಳ ಜನರಲ್ಲಿ ಎದ್ದ ಸ್ಪಷ್ಟವಾದ ಅಸಂತೋಷವನ್ನು ನೋಡಿ ಕಾಂಗ್ರೆಸ್ಸು ಜಯಪುರ ಅಧಿವೇಶನದಲ್ಲಿ, ಈ ಬಗ್ಗೆ ವಿಚಾರ ಮಾಡಿ ಮೂರು ತಿಂಗಳಲ್ಲಿ ವರದಿಯೊಪ್ಪಿಸಲು ನೇಮಿಸಿದ್ದ ಕಾಂಗ್ರೆಸ ಅಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯ, ಪಂ. ಜವಾಹರಲಾಲ ಮತ್ತು ಸರದಾರ ಪಟೇಲರ ಈ ಸಮಿತಿ ಮಾಡಿದ ತೀರ್ಮಾನವನ್ನು ಕಾಂಗ್ರೆಸ್ ಕಾರ್ಯ ಸಮಿತಿ ಎತ್ತಿಹಿಡಿದಿದೆ. ಸಮಿತಿ ನೇಮಕವಾಗುವ ಮುಂಚೆಯೂ ಅನಂತರವೂ ಡಾ। ಪಟ್ಟಾಭಿಯವರನ್ನು ಬಿಟ್ಟು ಉಳಿದಿಬ್ಬರು "ಮೂರ್ತಿ"ಗಳು ಪ್ರಾಂತೀಯ ಭಾವನೆಗಳನ್ನು ನಿರುತ್ಸಾಹಗೊಳಿಸುವ ಉದ್ದೇಶದಿಂದ ಕೊಡುತ್ತಿದ್ದ ಹೇಳಿಕೆಗಳನ್ನು ಮರೆಯದಿದ್ದವರು ಈ ಸಿಹಿಯಲ್ಲದ ಗುಳಿಗೆಯನ್ನು ನಿರೀಕ್ಷಿಸಿಯೇ ಇದ್ದರೇನೋ?

ತ್ರಿಮೂರ್ತಿ ವರದಿ ದರ್ ವರದಿಗಿಂತ ಬಹುಶಃ ಒಂದೇ ವಿಷಯದಲ್ಲಿ ಉತ್ತಮವಾಗಿದೆ ಯೆಂದು ಹೇಳಬಹುದು. ಭಾಷಾನ್ವಯ ಘಟಕಗಳ ಬಗ್ಗೆ ದರ್ ಸಮಿತಿಗಿದ್ದ ಭಯಗಳನ್ನೇ ಇದೂ ಪುನರುಚ್ಚರಿಸಿದ್ದರೂ ಮುಂದೆ ಎಂದಾದರೊಂದೂ ದಿನ, ಜನಮತ ಪ್ರಬಲವಾಗಿ ಅಪೇಕ್ಷಿಸಿದಲ್ಲಿ ಭಾಷಾನ್ವಯ ಪುನರ್ಘಟನೆಯಾಗುವದು ಸಾಧ್ಯವಿದೆಯೆಂಬೊಂದು ಆಶೆಯನ್ನು ಮಾತ್ರ ಕೊಡುತ್ತದೆ. ಸ್ವಾತಂತ್ರ್ಯದೊಡನೆ ಬಂದ ಲಾಭಗಳನ್ನು ಇನ್ನೂ ದಕ್ಕಿಸಿಕೊಂಡಾಗಿಲ್ಲ. ಇದಕ್ಕಿಂತಲೂ ಮಹತ್ವದ ಅನೇಕ ಪ್ರಶ್ನೆಗಳನ್ನು ಬಿಡಿಸಿ ಸ್ವರಾಜ್ಯವನ್ನು ಭದ್ರ ತಳಹದಿಯಲ್ಲಿ ನಿಲ್ಲಿಸುವ ವರೆಗೆ ಪ್ರಾಂತಗಳ ಪುನರ್ಘಟನೆಗೆ ಕೈಹಾಕಕೂಡದು. ಉತ್ತಮ ಆಡಳಿತಗಾರರ ಕೊರತೆಯಿರುವಾಗ ಹೊಸ ಪ್ರಾಂತಗಳನ್ನು ರಚಿಸಿದರೆ ಆಡಳಿತಗೆ ಧಕ್ಕೆ ಬಂದೀತು. ಹಲವು ಹೊಸ ಪ್ರಾಂತಗಳು ಹಣಕಾಸಿನ ವಿಷಯದಲ್ಲಿ ಕೊರತೆಯವಾಗಬಹುದಾದ್ದರಿಂದ ಆರ್ಥಿಕ ಪರಿಸ್ಥಿತಿಯನ್ನೂ ಇನ್ನಷ್ಟು ಹದಗೆಡಿಸಬಹುದು. ಇನ್ನು ಕರ್ನಾಟಕ, ಕೇರಳ ಪ್ರಾಂತಗಳ ರಚನೆಯ ಬೇಡಿಕೆ ನ್ಯಾಯ್ಯವೇ ಆಗಿದ್ದರೂ ಕೆಲ ಸಂಸ್ಥಾನಗಳು ಲೀನವಾದಲ್ಲದೆ ಅದು ಸಾಧ್ಯವಿಲ್ಲ. ಆ ವರೆಗೆ ಇವು ಕಾಯಲೇ ಬೇಕು. ಇವೆಲ್ಲದರ ಸಂಗಡ "ಭಾಷೆ ಐಕ್ಯದ ಸಾಧನವಾದಂತೆ ಅನೈಕ್ಯದ ಶಕ್ತಿಯೂ ಆಗಿದೆ" ಯೆಂಬ ಭಯದಿಂದುದ್ಭೂತವಾದ ಮನೋವೃತ್ತಿಯೂ ಸಮಿತಿಯನ್ನು ಈ ನಿರ್ಣಯಕ್ಕೆ ಮುಂದೊತ್ತಿದೆ.

ಉಪ-ಸಿದ್ಧಾಂತಗಳು

ಅದ್ದರಿಂದ ಭಾಷಾನ್ವಯ ಪ್ರಾಂತವಾದಿಗಳು ಸದ್ಯಕ್ಕಂತೂ ಭವಿಷ್ಯತ್ತಿನ ಮೇಲೆ ಕಣ್ಣಿಟ್ಟು ಕುಳಿತಿರಬೇಕಾಗಿದೆ. ಈ ನಿಷೇಧಾತ್ಮಕ ಸಿದ್ಧಾಂತದೊಂದಿಗೆ ಸಮಿತಿ ಹೊರಪಡಿಸಿದ ಕೆಲ ಉಪಸಿದ್ಧಾಂತಗಳೂ ಮಹತ್ವದವಾಗಿವೆ. ಇವುಗಳಲ್ಲಿ ಎಲ್ಲಕ್ಕೂ ಮೊದಲಿನದೆಂದರೆ ಭಾಷಾನ್ವಯ ಪುನರ್ಘಟನೆಯಾಗುವ ಪ್ರಸಂಗದಲ್ಲಿ ಆಂಧ್ರಕ್ಕೆ ಪ್ರಾಶಸ್ತ್ಯ ಕೊಡಬೇಕೆಂಬುದು. ಇದು ಎಲ್ಲಕ್ಕಿಂತ ಸುಲಭಸಾಧ್ಯ ಪ್ರಾಂತವೆಂದು ಸಮಿತಿಯ ಅಭಿಪ್ರಾಯ. ಆದರೆ ಅದೇ ಉಸಿರಲ್ಲಿ ಅದು, ಒಂದು ಪ್ರಾಂತವನ್ನು ರಚಿಸಿದರೆ ಉಳಿದವುಗಳ ಆಡಳಿತೆಯ ವ್ಯವಸ್ಥೆಯನ್ನೂ ಒಡನೆ ಮಾಡಬೇಕಾಗುವದೆಂದು ಹೇಳಿದ್ದರಿಂದಲೂ ಆಂಧ್ರವನ್ನು ಕೂಡ ತಕ್ಷಣ ರಚಿಸಲು ಅದಕ್ಕೆ ಒಪ್ಪಿಗೆ ಇಲ್ಲದ್ದರಿಂದಲೂ ಇದು ಕೇವಲ ಡಾ. ಪಟ್ಟಾಭಿಯವರ ಸ್ಥಿತಿಯನ್ನು ಸಹ್ಯವಾಗಿ ಮಾಡುವ ಹೊರ ಸಿಂಗಾರವೆಂದು ತಿಳಿದುಕೊಳ್ಳಲು ಕಾರಣವಿದೆ. ಕನಿಷ್ಠಪಕ್ಷ ಸದ್ಯಕ್ಕೆ ಮದ್ರಾಸ್ ಪ್ರಾಂತದಲ್ಲಿ ಆಂಧ್ರ, ತಮಿಳು ನಾಡುಗಳಿಗೆ ಬೇರೆ ಬೇರೆ ಉಪಮಂತ್ರಿ ಮಂಡಲಗಳಾಗಬಹುದೆಂದು ಬಾಯಲ್ಲಿ ನೀರೂರಿಸಿಕೊಂಡಿದ್ದವರಿಗೆ ನಿರಾಶೆಯೆ ಆಯಿತು. ಎರಡನೆಯ ದೊಡ್ಡ ವಿಷಯವೆಂದರೆ, ಸಂಸ್ಥಾನಗಳನ್ನು ಒಕ್ಕೂಟ ಪ್ರದೇಶಗಳಲ್ಲಿ ಲೀನಗೊಳಿಸಿ ಭಾಷಾನ್ವಯ ಪ್ರಾಂತಗಳನ್ನು ರಚಿಸಬೇಕೇ ಹೊರತು ಒಕ್ಕೂಟ ಪ್ರದೇಶಗಳನ್ನು ಸಂಸ್ಥಾನಗಳಲ್ಲಿ ಕೂಡಿಸುವದು ಸಾಧ್ಯವೇ ಇಲ್ಲೆಂದು ಸಮಿತಿ ಸ್ಪಷ್ಟಗೊಳಿಸಿದ್ದು. ಇದರಿಂದ ನಮ್ಮ ಮೈಸೂರು ರಾಜಕಾರಣಿಗಳಿಗೆ ಸಂತೋಷವಾದೀತೋ ದುಃಖವೋ ಹೇಳುವದು ಕಷ್ಟ. ಏಕೀಕರಣದ ಬಗ್ಗೆ ಅವರ ಕಳಕಳಿ ಹೆಚ್ಚೋ ಅರಸೊತ್ತಿಗೆಯ ಬಗ್ಗೆಯೋ ಎಂಬುದು ಒರೆಗೆ ಹತ್ತಲು ಬಹಳ ಕಾಲ ಹಿಡಿಯದು. ಮೈಸೂರು ದೊಡ್ಡ ಮನಸುಮಾಡಿ ಒಕ್ಕೂಟದಲ್ಲಿ ಲೀನವಾದರೆ ಕರ್ನಾಟಕ ಮಾತ್ರವಲ್ಲ, ಎಲ್ಲ ಭಾಷಾನ್ವಯ ಪ್ರಾಂತಗಳ ರಚನೆಯನ್ನೂ ತಡವಿಲ್ಲದೆ ಮಾಡಲೇಬೇಕಾದ ಪ್ರಸಂಗ ಸರಕಾರಕ್ಕೆ ಬಂದೇಬರುವದು. ಕೇರಳಕ್ಕಾದರೂ ಇದೇ ಅನ್ವಯಿಸುವದು. ಮುಂಬಯಿನಗರ ಮಹಾರಾಷ್ಟ್ರ ಪ್ರಾಂತಕ್ಕೆ-ಅಂಥ ಪ್ರಾಂತ ಆದರೂ-ದೊರೆಯದು, ಅದು ಸ್ವತಂತ್ರ ಘಟಕವಾಗುವದೆಂಬದು ಮತ್ತೊಂದು ಸಿದ್ಧಾಂತ. ಹಾಗೆಯೇ ಮದ್ರಾಸು ನಗರದ ಆಸೆಯನ್ನು ಆಂಧ್ರರು ಬಿಟ್ಟು ತಮಿಳನಾಡಿಗೆ ಅದನ್ನು ಕೊಡಬೇಕಾಗುವದು. ಆದರೆ ಹೊಸ ಪ್ರಾಂತ ರಚನೆಯ ಪರಿಣಾಮವನ್ನಭ್ಯಸಿಸಲು ಮೊದಲು ಆಂಧ್ರವನ್ನು ರಚಿಸಿ ನೋಡಬಹುದೆಂದು ಸಮಿತಿಯ ಸೂಚನೆಯಿದೆ. ಉತ್ತರ ಹಿಂದುಸ್ತಾನದ ಕೆಲಪ್ರಾಂತಗಳ ಗಡಿಗಳನ್ನು ಪುನರ್ವಿಮರ್ಶಿಸಬೇಕೆಂಬ ಬೇಡಿಕೆಯನ್ನು ಸದ್ಯಕ್ಕೆ ವಿಚಾರಿಸುವಂತಿಲ್ಲವೆಂದೂ ಸಮಿತಿ ನಿರ್ಣಯಿಸಿದೆ. ಮುಖ್ಯವಾಗಿ ಬಂಗಾಲ-ಬಿಹಾರಗಳ ನಡುವೆ ಕೆಲ ಜಿಲ್ಲೆಗಳಿಗಾಗಿ ಈಚೆಗೆ ತೀಕ್ಷ್ಣ ವಿವಾದಗಳೆದ್ದಿರುವದನ್ನು ಇಲ್ಲಿ ನೆನೆದುಕೊಳ್ಳಬಹುದು.

ರಾಜಕೀಯ ಬಿಕ್ಕಟ್ಟುಗಳು

ಮೇಲ್ಗಿನ ಮುಂದಾಳುಗಳಿಗೆ ಒಗ್ಗಲಿ ಒಗ್ಗದಿರಲಿ, ಎಲ್ಲ ಪ್ರಾಂತಗಳ ರಾಜಕೀಯ ತಕ್ಕಡಿ ಬಯಸಿದಷ್ಟು ಸಮತೂಕದಲ್ಲಿಲ್ಲವೆಂದು ಸ್ಪಷ್ಟವಾಗತೊಡಗಿದೆ. ಒಂದೇ ವಾರದಲ್ಲಿ ಎರಡು ಪ್ರಾಂತಗಳಲ್ಲೂ ಒಂದು ಸಂಸ್ಥಾನ ಒಕ್ಕೂಟದಲ್ಲೂ ಮಂತ್ರಿಮಂಡಲದ ಸ್ಥಿತ್ಯಂತರಗಳುಂಟಾದುದೇ ಇದಕ್ಕೆ ಸಾಕ್ಷಿ. ಮದ್ರಾಸ್ ಕಾಂಗ್ರೆಸ್ ಶಾಸನಸಭಾ ಪಕ್ಷ ಶ್ರೀ ಒ. ಪಿ. ರಾಮಸ್ವಾಮಿ ರೆಡ್ಡಿಯಾರರನ್ನು ಮುಖ್ಯ ಮಂತ್ರಿತ್ವದಿಂದ ಚ್ಯುತಗೊಳಿಸಿ ಅವರಿಗಿಂತ ಕಡಿಮೆಪ್ರಸಿದ್ಧರಾದ ಶ್ರೀ ಕುಮಾರಸ್ವಾಮಿ ರಾಜರನ್ನು ನಾಯಕನಾಗಿ ಆರಿಸಿಕೊಂಡಿದ್ದು ಓದುಗರಿಗೆ ಗೊತ್ತೇ ಇದೆ. ಶ್ರೀ ರೆಡ್ಡಿಯವರು "ಮರಳಿ ಮಣ್ಣಿಗೆ" ಹೋಗಿ ಕುಲಕಸುಬನ್ನು ಅವಲಂಬಿಸುವದಾಗಿ ಅತ್ತ ಹೇಳುತ್ತಿರಲು, ಗೆದ್ದ ಕುದುರೆಯಾದ ಶ್ರೀ ರಾಜಾ ಅವರು ದಿಲ್ಲಿಗೆ ಹೋಗಿ ಮಹಾನಾಯಕರೊಡನೆ ಮಾತಾಡಿ ಹಳೆಯ ಮಂತ್ರಿಮಂಡಲದ ಅಧಿಕತರ ಸದಸ್ಯರನ್ನೊಳಗೊಂಡ ಹೊಸ ಮಂತ್ರಿಮಂಡಲವನ್ನು ಜಾಹೀರುಗೊಳಿಸಿದರು. ಶ್ರೀ ರೆಡ್ಡಿಯಾರ, ಶ್ರೀ ಕೂರ್ಮಯ್ಯ, ಅವಿನಾಶಲಿಂಗಂ, ಹಾಗು ಶ್ರೀ ಗುರುಪಾದಂ ಅವರನಷ್ಟೆ ಬಿಟ್ಟುಬಿಡಲಾಗಿದೆ. ಹೊಸ ಮಂತ್ರಿಮಂಡಲದಲ್ಲಿ ಶ್ರೀ ಕುಮಾರಸ್ವಾಮಿ ರಾಜಾರಲ್ಲದೆ ಶ್ರೀ ಪರಮೇಶ್ವರನ್ ಮತ್ತು ಶ್ರೀ ಸಂಜೀವರೆಡ್ಡಿಯವರು ಹೊಸಬರಾಗಿದ್ದರೆ, ಹಳಬರಾದ ಶ್ರೀ ಗೋಪಾಲರೆಡ್ಡಿ, ಭಕ್ತವತ್ಸಲಂ, ಡಾ। ರಾಜನ್, ಕೆ. ಮಾಧವ ಮೆನನ್, ಸೀತಾರಾಮರೆಡ್ಡಿ, ಎ. ಬಿ ಶೆಟ್ಟಿ, ಚಂದ್ರಮೌಳಿಯವರು ಇದ್ದಾರೆ. ಕನ್ನಡಿಗರಾದ ಶ್ರೀ ಶೆಟ್ಟಿಯವರು ಅವಿನಾಶಲಿಂಗಂರ ಶಿಕ್ಷಣ ಶಾಖೆಯನ್ನು ತಮ್ಮ ಸಾರ್ವಜನಿಕ ಆರೋಗ್ಯ ಶಾಖೆಯನ್ನು ಇಟ್ಟುಕೊಂಡಿದ್ದರೆ, ಮುಖ್ಯ ಮಂತ್ರಿಗಳೇ ಹಿಂದಿನಂತೆ ಪೋಲೀಸು ಶಾಖೆಯನ್ನಿಟ್ಟುಕೊಂಡಿದ್ದಾರೆ. ಡಾ. ಸುಬ್ಬರಾಯನ್ನರ ಗುಂಪಿನವರನ್ನೂ ಸೇರಿಸಿಕೊಳ್ಳಬೇಕೆಂಬ ಪ್ರಯತ್ನ ಯಶಸ್ವಿಯಾಗಲಿಲ್ಲ. ಈ ಬದಲಾವಣೆಗಳು ಮತ್ತೇನನ್ನೂ ಸೂಚಿಸದಿದ್ದರೂ ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಕಾಮರಾಜ ನಾಡರರ "ಸಾರ್ವಭೌಮತ್ವ"ವನ್ನಂತೂ ನಿದರ್ಶನಕ್ಕೆ ತಂದಿದೆ.

ನಿಮ್ಮ ರಾಜಕೀಯ ದಿಗ್ದರ್ಶಕನಿಗೆ ಇದೀಗ ಪೂರ್ವ ಪಂಜಾಬ ಮಂತ್ರಿಮಂಡಲದಲ್ಲಾದ ಬದಲಾವಣೆಗಳ ಸುದ್ದಿ ಬಂದಿದೆ. ಅಲ್ಲಿ ಲಾಲಾ ಭೀಮಸೇನ ಸಾಚಾರರಿಗೂ ಮುಖ್ಯ ಮಂತ್ರಿ ಡಾ. ಗೋಪೀಚಂದ ಭಾರ್ಗವರಿಗೂ ಎಂದಿನಿಂದಲೂ ಸ್ಪರ್ಧೆಯಿತ್ತೇ ಇತ್ತು. ಪಂಜಾಬ ವಿಭಜನೆಯಾದಾಗ ತಾತ್ಪೂರ್ತಿಕವಾಗಿ ಅಸ್ತಂಗತವಾದ ಶ್ರೀ ಸಾಚಾರರ ಭಾಗ್ಯತಾರೆ ಪುನಃ ಉದಯಿಸಿದೆ. ಗೋಪಿಚಂದರ ಮೇಲೆ ಅವಿಶ್ವಾಸ ಗೊತ್ತುವಳಿಯನ್ನು ಮಾಡಿ ಕಾಂಗ್ರೆಸ್ ಪಕ್ಷ ಲಾಲಾ ಸಾಹೇಬರನ್ನು ಮುಖ್ಯ ಮಂತ್ರಿಯಾಗಿ ಆರಿಸಿಕೊಂಡಿದೆ. ದೇಶದಲ್ಲಿಂದು ಎಲ್ಲಕ್ಕಿಂತಲೂ ಅಸ್ಥಿರವಾದ ಪ್ರಾಂತವೆಂದರೆ ಪೂರ್ವ ಪಂಜಾಬವೆಂದು ತೋರುತ್ತದೆ. ಮಂತ್ರಿ ಮಂಡಲವನ್ನು ಅಧಿಕಾರದಲ್ಲಿ ಉಳಿಸಿಕೊಳ್ಳುವದಕ್ಕಾಗಿ ಅಳವು ಮೀರಿ ಅದನ್ನು ವಿಸ್ತರಿಸಲಾಗಿತ್ತು. ಆದರೂ ಡಾಕ್ಟರ ಸಾಹೇಬರ ಸ್ಥಾನ ಭದ್ರವಾಗಲಿಲ್ಲ.

ಮಧ್ಯಭಾರತ ಸಂಸ್ಥಾನ ಒಕ್ಕೂಟದಲ್ಲಿಯೂ ಅಧಿಕಾರ ಲಾಲಸೆಯ ತಿಕ್ಕಾಟಗಳು ಹೆಚ್ಚಿ ಮುಖ್ಯ ಮಂತ್ರಿ ಲೀಲಾಧರ ಜೋಶಿಯವರು ರಾಜೀನಾಮೆ ಕೊಟ್ಟಿದ್ದಾರೆ. ಅತ್ತ ಮತ್ಸ್ಯ ಒಕ್ಕೂಟಕ್ಕೆ ಕೊನೆಗಾಲ ಪ್ರಾಪ್ತವಾಗಿದೆ. ಅದರಲ್ಲಿನ ನಾಲ್ಕು ಸಂಸ್ಥಾನಗಳಲ್ಲಿ ಅಲವಾರ ಮತ್ತು ಕರೌಲಿ ಬೃಹತ್ ರಾಜಸ್ಥಾನದಲ್ಲಿ ಲೀನವಾಗುವವು. ಭರತಪುರ ಮತ್ತು ಧೋಲಪುರಗಳನ್ನು ಯುಕ್ತಪ್ರಾಂತದಲ್ಲಾಗಲಿ ರಾಜಸ್ಥಾನದಲ್ಲಾಗಲಿ ಲೀನಗೊಳಿಸಲಾಗುವದು. ಈ ಬಗ್ಗೆ ಜನಾಭಿಪ್ರಾಯವನ್ನರಿಯಲು ಒಂದು ಸಮಿತಿ ನೇಮಕವಾಗಿದೆ.

ಬ್ರಿಟಿಶ ಸಾಮ್ರಾಜ್ಯ ಮತ್ತು ಭಾರತ

ಮೇ ತಿಂಗಳಲ್ಲಿ ಲಂಡನ್ನಿನಲ್ಲಿ ಜರಗಲಿರುವ ಬ್ರಿಟಿಶ ಕಾಮನ್‌ವೆಲ್ತ ಮುಖ್ಯಮಂತ್ರಿಗಳ ಪರಿಷತ್ತು ಸಮೀಪ ಬಂದಂತೆ ಭಾರತಕ್ಕೂ ಸಾಮ್ರಾಜ್ಯಕ್ಕೂ ಇರಬೇಕಾದ ಸಂಬಂಧವನ್ನು ಕುರಿತು ವಿಶೇಷ ಕುತೂಹಲ ಕೆರಳಿದೆ. ಮುಖ್ಯ ಮಂತ್ರಿ ಪಂ. ನೆಹರೂ ಅವರು ಕಳೆದ ವಾರ ಹಿರಿಯೋಲಗದಲ್ಲಿ ಹೇಳಿದ ಮಾತುಗಳಿಂದಲೂ ಲಖನೌದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮುಂದೆ ಮಾಡಿದ ಭಾಷಣದಿಂದಲೂ ಈ ವಿಷಯದ ಮೇಲೆ ಹೆಚ್ಚು ಬೆಳಕು ಬಿದ್ದಿದ್ದರೂ ಲಂಡನ್ ಪರಿಷತ್ತು ಮುಗಿಯುವ ವರೆಗೂ ಸ್ಫುಟವಾದ ಚಿತ್ರ ನಮ್ಮ ಮುಂದೆ ನಿಲ್ಲಲಿಕ್ಕಿಲ್ಲವೆಂದೆನಿಸುತ್ತದೆ. ಭಾರತವು ಬ್ರಿಟಿಶ ಅರಸರ ಸಂಬಂಧವನ್ನು ಕಡಿದುಕೊಂಡು ಸಂಪೂರ್ಣ ಗಣರಾಜ್ಯ (ರಿಪಬ್ಲಿಕ್)ವಾಗಿ ರೂಪುಗೊಳ್ಳುವದೆಂಬದನ್ನು ಅವರು ತಿರುಗೊಮ್ಮೆ ಒತ್ತಿಹೇಳಿದರು. ಆದರೆ ಬ್ರಿಟಿಶ ರಾಷ್ಟ್ರಕೂಟದೊಡನೆ ಇದ್ದ ಸಂಬಂಧವನ್ನು ಹರಿದುಕೊಳ್ಳುವದು ಲಾಭಕರವಲ್ಲೆಂದು ಅವರ ಅಭಿಪ್ರಾಯವಾಗಿತ್ತು. ಸ್ವತಂತ್ರ ಸಾರ್ವಭೌಮ ಗಣರಾಜ್ಯವಾದ ಮೇಲೂ ಬ್ರಿಟಿಶ ರಾಷ್ಟ್ರಕೂಟದೊಡನೆ ಸಂಬಂಧವಿಟ್ಟುಕೊಳ್ಳುವದು ಹಿತಕರ. ಆದರೆ ಆ ಸಂಬಂಧದ ಸ್ವರೂಪ ಹೇಗಿರಬೇಕೆಂದು ನಿಶ್ಚಳವಾಗಿಲ್ಲ. ನಿಜವಾಗಿ ಜಗತ್ತಿನ ಇತಿಹಾಸದಲ್ಲಿ ಇದಕ್ಕೆ ಪೂರ್ವ ರೂಢಿಯ ಆಧಾರವಿಲ್ಲದ್ದರಿಂದ ಅನೇಕ ಕಾಯದೆ ಪ್ರಶ್ನೆಗಳನ್ನು ವಿಚಾರಿಸಬೇಕಾಗುವದು. ಅಲ್ಲದೆ, ಕೆಲ ಕಾಮನ್‌ವೆಲ್ತ ರಾಷ್ಟ್ರಗಳಲ್ಲಿ ವರ್ಣದ್ವೇಷವಿರುವದೂ ಒಂದು ಆತಂಕ. ಲಂಡನ್ ಪರಿಷತ್ತಿಗೆ ಪಂ. ನೆಹರೂ ಅವರು ಹೋಗುವರು. ಹಿಂದುಸ್ಥಾನವನ್ನು ಬ್ರಿಟಿಶ ರಾಷ್ಟ್ರಕೂಟದಲ್ಲಿ ಉಳಿಸಿಕೊಳ್ಳಲು ಸದ್ಯದ ಕೂಲಿಕಾರ ಸರಕಾರಕ್ಕಲ್ಲದೆ ವಿರೋಧಿ ಕಾನ್ಸರ್ವೇಟಿವರಿಗೂ ಆತುರವುಂಟೆಂದು ಆ ಪಕ್ಷದ ಉಪನಾಯಕ ಅಂಥನಿ ಈಡನ್ನರ ಭಾರತಸಂಚಾರದಿಂದ ವ್ಯಕ್ತವಾಗಿದೆ. ಬ್ರಿಟಿಶ ಕೂಟದೊಡನೆ ಸಂಬಂಧವಿಟ್ಟುಕೊಂಡರೂ ನಮ್ಮ ಸ್ವತಂತ್ರವಿದೇಶಧೋರಣೆಗೆ ಧಕ್ಕೆ ಬರಗೊಡುವದಿಲ್ಲೆಂಬ ದೃಢ ನಿರ್ಧಾರವನ್ನು ಪಂ. ನೆಹರೂ ಅವರು ಹಿರಿಯೋಲಗದಲ್ಲಿ ನಡೆದ ಪ್ರಶ್ನೋತ್ತರಕಾಲದಲ್ಲಿ ತಿಳಿಸಿದರು. ಅಟ್ಲಾಂಟಿಕ ಒಪ್ಪಂದವು ಭಾರತಕ್ಕೆ ಸರ್ವಥಾ ಬಂಧಕವಿಲ್ಲ, ನಾವು ಯಾವ ಗುಂಪಿನಲ್ಲೂ ಸೇರುವದಿಲ್ಲ ಮಾತ್ರವಲ್ಲ, ಶಾಂತಸಾಗರ ಒಪ್ಪಂದದಲ್ಲಿ ಸೇರುವ ವಿಚಾರ ಕೂಡ ನಮಗಿಲ್ಲವೆಂದು ಅವರು ಸ್ಪಷ್ಟಗೊಳಿಸಿದ್ದಾರೆ.

ಆರ್ಥಿಕ ಪುನರುತ್ಥಾನದ ಉಪಾಯ

ಕಳೆದವಾರ ಹಿರಿಯೋಲಗದಲ್ಲಿ ಹಣಕಾಸಿನ ಮಸೂದೆ ವಿಶೇಷ ಬದಲಾವಣೆಯಿಲ್ಲದೆ ಪಾಸಾಯಿತು. ಹಿಂದೂ ಕೂಡು ಕುಟುಂಬಗಳ ಮಟ್ಟಿಗೆ ಆದಾಯ ಕರಮುಕ್ತವಾಗುದ ಉತ್ಪನ್ನಾಂಶವನ್ನು ೫೦೦೦ಕ್ಕೇರಿಸಲು ಅರ್ಥಮಂತ್ರಿಗಳು ಒಪ್ಪಿದರು. ಆದರೆ ಕಾರ್ಡು ಕವರುಗಳ ದರವನ್ನು ಇದ್ದಕ್ಕಿದ್ದಂತೆ ಉಳಿಸಲು ಅವರೊಪ್ಪಲಿಲ್ಲ. ಪ್ರತ್ಯಕ್ಷ ಕರದ ಪರಮಾವಧಿಯನ್ನು ಈಗ ನಾವು ಮುಟ್ಟಿದ್ದು, ರಾಷ್ಟ್ರದ ಆರ್ಥಿಕ ಸ್ಥಿತಿಯನ್ನು ಕೆಡಿಸದೆ ಇನ್ನು ಹೆಚ್ಚು ಪ್ರತ್ಯಕ್ಷಕರ ಹೇರಲಾಗಲ್ಲವೆಂದು ಅವರ ಅಭಿಪ್ರಾಯವಾಗಿತು. ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಬಗ್ಗೆ ಕೈಕೊಂಡ ಕ್ರಮಗಳಲ್ಲಿ ಮೊನ್ನೆ ಮುಖ್ಯಮಂತ್ರಿ ಜವಾಹರಲಾಲರು ಹಿರಿಯೋಲಗದಲ್ಲಿ ವಿದೇಶೀ ಬಂಡವಲಗಾರರಿಗೆ ಕೊಟ್ಟ ಅಭಯವೊಂದು ದೊಡ್ಡ ಹೆಜ್ಜೆಯಾಗಿದೆ. ವಿದೇಶೀ ಬಂಡವಲಕ್ಕೆ ಭಾರತದಲ್ಲಿ ಸ್ವಾಗತವಿದೆಯೆಂದೂ ಹಿಂದೀ ಬಂಡವಲಗಾರರಿಗಿರದ ಯಾವ ನಿರ್ಬಂಧವನ್ನೂ ಅವರ ಮೇಲೆ ಹೇರುವದಿಲ್ಲೆಂದೂ ಅವರು ಸ್ಪಷ್ಟಗೊಳಿಸಿದರು. ಒಂದು ವೇಳೆ ವಿದೇಶೀಯರು ನಡೆಸುವ ಉದ್ದಿಮೆಗಳನ್ನು ವಶಪಡಿಸಿಕೊಳ್ಳಬೇಕಾಗಿ ಬಂದರೂ ಯೋಗ್ಯ ಪರಿಹಾರ ಕೊಡುವದಾಗಿ ಅವರು ಆಶ್ವಾಸನ ಕೊಟ್ಟರು. ಕೇವಲ ದೇಶೀ ಬಂಡವಲದಿಂದ ನಮ್ಮ ಆರ್ಥಿಕ ಸ್ಥಿತಿ ಸುಧಾರಿಸುವದು ಕಠಿನವಿರುವದರಿಂದ ಹೀಗೆ ಮಾಡಲ್ಬೇಕಾಗಿದೆ. ಹಿಂದೆ ವಿದೇಶಿ ಆಳಿಕೆಯಿದ್ದಾಗ ವಿದೇಶಿ ಬಂಡವಲ ನಮಗೆ ಹಾನಿಕರವಿದ್ದರೂ ಈಗ ಹಾಗಾಗದೆಂದು ಮುಖ್ಯ ಮಂತ್ರಿಗಳು ಹೇಳಿದರು.

ಹಿರಿಯೋಲಗ ಕಾರ್ಯಕಲಾಪಗಳು

ಹಿರಿಯೋಲಗದಲ್ಲಿ ಕಳೆದ ವಾರ ನಡೆದ ಇತರ ಕಾರ್ಯಕಲಾಪಗಳನ್ನು ಹೀಗೆ ಸಂಗ್ರಹಿಸಬಹುದು: ❋ ಗವರ್ನರ ಜನರಲ್ಲರ ಸಂಬಳ ತಿಂಗಳಿಗೆ ಕರಮುಕ್ತವಾಗಿ ೫೫೦೦ ಇರಬೇಕೆಂಬ ಮಸೂದೆ ಸ್ವೀಕರಿಸಲ್ಪಟ್ಟಿತು. ❋ ೧೯೪೮-೪೯ ರ ಬಗ್ಗೆ ಮಂಡಿಸಲ್ಪಟ್ಟ ವಿವಿಧ ಶಾಖೆಗಳ ಪೂರಕ ಬೇಡಿಕೆಗೆ (೧೧೮ ಕೋಟಿ) ಮನ್ನಣೆ ದೊರಕಿತು. ❋ ರೇಲ್ವೆ ಮುಂಗಡ ಪತ್ರಿಕೆಯನ್ನು ಈಗಿನಂತೆ ಪ್ರತ್ಯೇಕವಾಗಿ ಸಿದ್ಧಗೊಳಿಸಬೇಕೆ, ಸಾಮಾನ್ಯ ಮುಂಗಡ ಪತ್ರಿಕೆಯಲ್ಲೆ ಸೇರಿಸಬೇಕೆ ಎಂದು ವಿಮರ್ಶಿಸಲು ೯ ಜನರ ಸಮಿತಿ ನೇಮಿಸುವ ಗೊತ್ತುವಳಿಯಾಯಿತು. ❋ ಹಿಂದೂ ಕಾಯದೆ ಕ್ರೋಡೀಕರಣ ಮಸೂದೆಯ ಚರ್ಚೆಯನ್ನು ಈ ಅಧಿವೇಶನದಲ್ಲೆ ಮುಗಿಸದೆ ಮುಂದೆ ತಳ್ಳಲಾಯಿತು. ❋ ಬಾಲಿಕೆಯರ ವಿವಾಹದ ಕನಿಷ್ಠ ವಯಸ್ಸನ್ನು ೧೪ ರಿಂದ ೧೫ಕ್ಕೇರಿಸುವ, ಬಾಲಿಕೆಯರ ಸಮ್ಮತಿ ವಯಸ್ಸನ್ನು ೧೬ ರಿಂದ ೧೮ಕ್ಕೇರಿಸುವ (ಅಂದರೆ ಆ ವಯಸ್ಸಿನೊಳಗಿನ ಹುಡುಗಿಯನ್ನು ಓಡಿಸಿಕೊಂಡು ಹೋದರೆ ಅಪರಾಧವಾಗುವದು) ಮತ್ತು ಹಿಂದೂ ಸೀಖ ಜೈನ ಮೊದಲಾದ ಅಂತರ್ಜಾತೀಯ ವಿವಾಹಕ್ಕೆ ಮನ್ನಣೆ ಕೊಡುವ ಶ್ರೀ ಠಾಕುರದಾಸರ ಮಸೂದೆಗಳು ಪಾಸಾದವು.

ಚಿಕ್ಕಮಗಳೂರಿನ ಕಾಫೀ ಮತ್ತು ರಬ್ಬರ ಪ್ಲ್ಯಾಂಟರರಾದ ಲಚ್ಚೀ ಸೆಟ್ಟಿ ಅ್ಯಂಡ ಸನ್ಸರು ಲಾಯಸೆನ್ಸು ಕಳೆದುಕೊಂಡ ಬಗ್ಗೆ ೨೦೦೦ ರೂ. ದಂಡಕ್ಕೆ ಪಾತ್ರರಾಗಿದ್ದಾರೆ. ಸುಂಕದ ಕರವನ್ನು ಕೊಡದೆ ಸುಮಾರು ನೂರು ಸಾವಿರ ರೂಪಾಯಿ ಬೆಲೆ ಬಾಳುವ ಕಾಫಿಯನ್ನು ಚಿಕಮಗಳೂರಿನ ಶ್ರೀ ಮುನಿಸ್ವಾಮಿರಾವ ಇವರು ಸಂಗ್ರಹಿಸಿಟ್ಟಿರುವರೆಂದು ಡಿ. ಕಮೀಶನರರು ತೀರ್ಪು ಕೊಟ್ಟು ಆ ಬೆಲೆಯ ಕಾಫಿಯನ್ನು ಸರಕಾರ ಜಮಾ ಮಾಡಲು ವಿಧಿಸಿದ್ದಾರೆ.

ರಾಜಸ್ಥಾನದ ರಕ್ತರಹಿತ ಕ್ರಾಂತಿ

ರಜಪೂತರ ನಾಡಿನ ಹಿಂದು—ಇಂದು—ಮುಂದು

ಮೊನ್ನೆ ಚೈತ್ರ ಪ್ರತಿಪದೆಯ ಶುಭ ದಿನದಲ್ಲಿ ಉಪಮುಖ್ಯ ಮಂತ್ರಿ ಸರದಾರ ವಲ್ಲಭಭಾಯಿ ಪಟೇಲರ ಅಮೃತ ಹಸ್ತದಿಂದ ಬೃಹತ್ ರಾಜಸ್ಥಾನ ಒಕ್ಕೂಟದ ಪ್ರಾರಂಭೋತ್ಸವ ನಡೆದಾಗ, ಶತಮಾನಗಳಷ್ಟು ಹಳೆಯದಾದ ಕನಸೊಂದು ನನಸಾದಂತಾಯಿತು. ರಾಣಾ ಪ್ರತಾಪಸಿಂಹನಂಥ ಶೂರ ನೃಪತಿಗಳಿಗೆ ಕೈಗೂಡದ ಈ ಮಹತ್ಕಾರ್ಯವನ್ನು ಸರದಾರರು ಕೇವಲ ಸಾತ್ವಿಕ ಒತ್ತಾಯದಿಂದ ಸಾಧಿಸಿದರು. ರಜಪೂತಸ್ಥಾನದ ಪ್ರಮುಖ ಸಂಸ್ಥಾನಗಳಾದ ಜಯಪುರ, ಜೋಧಪುರ, ಬಿಕಾನೇರ ಮತ್ತು ಜಯಸಾಲ್ಮೇರ ಸಂಸ್ಥಾನಗಳು "ರಜಪುತಾನದ ಸಂಯುಕ್ತ ಸಂಸ್ಥಾನಗಳ"ಲ್ಲಿ ಒಂದುಗೂಡಿದವು ಮತ್ತು ಭಾರತದಲ್ಲೆ ಅತ್ಯಂತ ವಿಶಾಲವಾದ ಘಟಕ ಸ್ಥಾಪಿತವಾಯಿತು.

ಮುಸ್ಲಿಮ್ ದಾಳಿಗಾರರು ಭಾರತದಲ್ಲಿ ತಮ್ಮ ಸತ್ತೆಯನ್ನು ಸ್ಥಾಪಿಸುವ ಮೊದಲು ಉತ್ತರ ಭಾರತದ ಅರಸುಗಳಾಗಿದ್ದ ರಜಪೂತರ ನೆಲೆನಾಡು ರಜಪುತಾನಾ ಅಥವಾ ರಾಜಸ್ಥಾನ. ಭಾರತದ ಮಧ್ಯಯುಗೀನ ಇತಿಹಾಸದ ಸಾಮಾನ್ಯ ಲಕ್ಷಣವಾದ ಅಂತರಿಕ ಕಲಹಗಳೂ ಯುದ್ಧಕಲೆಯ ತೀರ ಗತಾನುಗತಿಕ ಕಲ್ಪನೆಯೂ ಶೂರತನದ ಮೂರ್ತಿಗಳಂತಿದ್ದ ರಜಪೂತರ ರಾಜ್ಯಾಪಹಾರಕ್ಕೆ ಕಾರಣವಾದವು. ರಾಮಾಯಣ--ಮಹಾಭಾರತ ಕಾಲಗಳ ಧರ್ಮಯುದ್ಧದ ನೀತಿಯನ್ನೇ ಅವಲಂಬಿಸಿ ಸೋಲು ತಿಂದರೂ ಮೊಗಲ ರಾಜ್ಯದ ಕೊನೆಗಳಿಗೆಯ ವರೆಗೂ ರಾಜಸ್ಥಾನದ ಒಬ್ಬನಲ್ಲ ಒಬ್ಬ ನರೇಶನು ರಜಪೂತರ ಅದಮ್ಯ ಸ್ವಾತಂತ್ರ್ಯಪ್ರಿಯತೆಯ ಧ್ವಜವನ್ನು ಎತ್ತರಿಸಿ ಹಿಡಿದು ಛಲದಿರಿದ ಹೋರಾಡಿ ಅತ್ಯಂತ ಕಠೋರವಾದ ಸಂಕಷ್ಟಗಳನ್ನು ಆನಂದದಿಂದ ಸಹಿಸಿದ ಕತೆ ರಜಪೂತರಿಗೆ ಮಾತ್ರವಲ್ಲ, ಭಾರತಕ್ಕೇ ಅಭಿಮಾನಾಸ್ಪದವಾಗಿದೆ.

ಆದರೂ ಜಗತ್ತಿನ ಇತಿಹಾಸದ ಎಷ್ಟೋ ಉದಾತ್ತ ಸಾಹಸಗಳಂತೆ ರಜಪೂತ ಶೂರರ ಈ "ಛಲದಂಕ"ತನವೂ ಸೋಲಿನ ಕತೆಯೇ ಆಗಿತ್ತು. ದಿಲ್ಲಿಯನ್ನು ಗೆದ್ದವನೇ ಭಾರತವನ್ನು ನಿಯಂತ್ರಿಸುವನೆಂಬ ಮಾತು ಭಾರತೀಯ ಇತಿಹಾಸದ ಸೂತ್ರವಾಕ್ಯ ಈಗಲಾದರೂ ಭಾರತೀಯ ರಾಷ್ಟ್ರೀಯತೆಯ ಪ್ರವಾಹಕ್ಕೆ ಎದುರು ನಿಲ್ಲಲಾರದೆ ರಾಜಸ್ಥಾನವು ದಿಲ್ಲಿಯ ಅಧೀನತೆಯನ್ನೊಪ್ಪಿಕೊಂಡು, ಅಕಬರನ ಕಾಲದಿಂದ ಬ್ರಿಟಿಶರ ಕಾಲದ ವರೆಗೂ ನಡೆದು ಬಂದ ಪರಂಪರೆಯನ್ನೆ ಪುನಃ ಅವಲಂಬಿಸಿತೆಂದು ಹೇಳಬಹುದು. ಅಕಬರನ ಕಾಲದಲ್ಲೆ, ರಾಣಾ ಪ್ರತಾಪಸಿಂಗನ ಮೇವಾಡವೊಂದನ್ನುಳಿದು, ರಾಜಸ್ಥಾನವೆಲ್ಲವೂ ದಿಲ್ಲಿಯ ಮಾಂಡಲಿಕತ್ವವನ್ನು ಅಂಗೀಕರಿಸಿತ್ತು. ನಿರ್ಭಯಯೋಧರಾದ ರಜಪೂತರು ಇಂದು ಮತ್ತೆ ದಿಲ್ಲಿಗೆ ನೇರವಾಗಿ ಅಂಕಿತರಾಗಿರಲೊಪ್ಪಿದ್ದಾರೆ. ರಾಜಸ್ಥಾನದ ಮಹಾರಾಜರು ಪ್ರಜಾನಾಯಕರ ಕೈಯಲ್ಲಿ ಹೋರಾಟವಿಲ್ಲದೆ ಅಧಿಕಾರವನ್ನೊಪ್ಪಿಸಿದ್ದು ರಕ್ತರಹಿತ ಕ್ರಾಂತಿಯೇ ಸರಿ. ಈ ಕ್ರಾಂತಿಯಲ್ಲಿಯೂ ರಾಜಸ್ಥಾನ ತನ್ನದೇ ವೈಶಿಷ್ಟ್ಯವನ್ನು ಇಟ್ಟುಕೊಂಡಿದೆ. ಉಳಿದ ಎಲ್ಲ ಸಂಸ್ಥಾನ ಒಕ್ಕೂಟಗಳಿಗೆ ತಮ್ಮದೇ ಶಾಸನ ಸಭೆಗಳಿವೆ. ಆದರೆ ರಾಜಸ್ಥಾನದ ಒಕ್ಕೂಟ ದಿಲ್ಲಿಗೇ ನೇರವಾಗಿ ಹೊಣೆಯಾಗಿದೆ.

ಕನ್ನಡ ಕವಿಯೊಬ್ಬ ದಿಲ್ಲಿಯನ್ನು ವರ್ಣಿಸುತ್ತ ಹಾಡಿದ್ದಾನೆ.

"ಪೌರಾಣಿಕ ಜನನೇತ್ರಾ ದಿಲ್ಲಿ
ಯಾರಾ ಹೆಸರನು ಕೇಳದರಿಲ್ಲಿ?
ಸಾವಿರ ವಂಶಗಳಾಳಿದ ನಗರ
ಸಾವಿರ ವಂಶದ ನೆತ್ತರ ಕೊಲ್ಲಿ!"

ಆ ದಿಲ್ಲಿ ನಗರದ ಮಾಟವೇ ಹಾಗಿದೆ.

ರಜಪೂತ ವೈಶಿಷ್ಟ್ಯಗಳು

ಉತ್ತರ ಭಾರತದ ಇತಿಹಾಸದ ರಂಗಭೂಮಿಯೆ ರಾಜಸ್ಥಾನವಾಗಿತ್ತು. ರಾಣಾ ಸಂಗನ ನೇತೃತ್ವದಲ್ಲಿ ರಜಪೂತ ಮಹಾಕೂಟದ ಸೈನ್ಯಗಳು ಬಾಬರನ ಸೈನ್ಯಗಳ ಮುಂದಲಗಳನ್ನು ಗತಿಗಾಣಿಸಿದ ರಂಗವದು. ತನಗೆ ಒದಗಬಹುದಾದ ಸೋಲಿಗಂಜಿ ಬಾಬರನು ಅಂದಿನಿಂದ ಮದ್ಯಪಾನ ಮಾಡುವದಿಲ್ಲೆಂದು ಕುರಾಣದ ಸಾಕ್ಷಿಯಾಗಿ ಪ್ರತಿಜ್ಞೆ ಮಾಡಬೇಕಾಗಿ ಬಂತು. ರಾಣೀ ಪದ್ಮಿನಿಯಂಥ ಸುರಸುಂದರಿಯರು ಭಾರತನಾರಿಯರ ಆತ್ಮಗೌರವದ ರಕ್ಷಣೆಗಾಗಿ ಹೂವಿನ ಹಾಸಿಗೆಯನ್ನೇರಿದಂತೆ ಚಿತೆಯನ್ನೇರಿದ ವಿಧಿಯ ನಾಟ್ಯರಂಗವದು. ಅಕಬರನ ರಾಜ್ಯವಿಸ್ತರಣ ಧೋರಣೆಯನ್ನು ಕೊನೆಯ ವರೆಗೆ ಎದುರಿಸಿ ಹೋರಿದ ಪ್ರತಾಪ ಸಿಂಗನ ರಣರಂಗಭೂಮಿಯದು. ಕಾಬೂಲಿನಿಂದ ಗೋಲ್ಕೊಂಡದ ವರೆಗೆ ಅಕಬರನ ರಾಜ್ಯವನ್ನು ವಿಸ್ತರಿಸಿದ ರಾಜಾ ಮಾನಸಿಂಗನನ್ನು ಹಡೆದ ರಾಜ್ಯವೂ ಅದೇ. ಮೀರಾಬಾಯಿಯಂಥ ಭಕ್ತಿಪರವಶ ಕವಯಿತ್ರಿಯನ್ನು ಹೆತ್ತ ನಾಡೂ ರಾಜಸ್ಥಾನವೇ.

ರಜಪೂತ ಕ್ಷತ್ರಿಯರು ರಾಜಸ್ಥಾನದ ಜನಸಂಖ್ಯೆಯಲ್ಲಿ ಕೇವಲ ನೂರಕ್ಕೈದು ಜನರಿದ್ದರೂ ಇಡಿ ದೇಶದ ಜನಜೀವನದಲ್ಲಿ ರಜಪೂತತ್ವವೇ ಹಾಸುಹೊಕ್ಕಾಗಿ ಹೆಣೆದಿದೆ. "ರಾಜಸ್ಥಾನಿ" ಭಾಷೆಯ ಜಾನಪದ ಗೀತಗಳಲ್ಲಾದರೂ ರಜಪೂತ ವೀರರ ಶೌರ್ಯದ ಸಂಗೀತವೇ ರಣರಣಿಸುತ್ತಿದೆ. ಜನರ ಉಡಿಗೆತೊಡಿಗೆಗಳು ರಜಪೂತ ರಾಜರ ಆಸ್ಥಾನದ ಪರಂಪರೆಯನ್ನೆ ಅನುಸರಿಸುತ್ತವೆ. ಮೀರಾಬಾಯಿಯಂಥ ಆಸೇತುಹಿಮಾಚಲ ಕೀರ್ತಿಯನ್ನು ಸಂಪಾದಿಸಿದ ಕವಿಕವಯಿತ್ರಿಯರು ಕೂಡ ರಜಪೂತರೇ.

ಸುಂದರ ನಾರಿಯರು

ರಾಜಸ್ಥಾನದ ನಾರಿಯರ ಸೌಂದರ್ಯವಂತೂ ಮನೆಮಾತಾಗಿಬಿಟ್ಟಿದೆ. ಚುರುಕು ಚುರುಕಾದ ಮುಖಲಕ್ಷಣವುಳ್ಳ ಈ ನಾರಿಯರ ವೇಷಭೂಷೆಗಳಲ್ಲೂ ಒಂದು ವೈಶಿಷ್ಟ್ಯವುಂಟು ನಿರಿ ನಿರಿಯಾದ ವಸನ, ಜರಿಯ ಚುಕ್ಕಿಗಳಿಂದ ರಾತ್ರಿಯ ಆಕಾಶದಂತೆ ಚಕಚಕಿಸುವ 'ಚೋಲಿ' (ಕುಪ್ಪಸ)ಗಳು ಅವರ ನಡಿಗೆಗೆ ಒಂದು ನಾಟ್ಯಭಂಗಿಯ ಮೋಹಕತೆಯನ್ನು ಕೊಡುತ್ತವೆ. ಆಲ್ಡಸ್ ಹಕ್ಸ್ಲೆಯಂಥ ಯೌರೋಪ್ಯ ಪ್ರವಾಸಿಗಳು ರಾಜಸ್ಥಾನದ ನಾರಿಯರ ಸೌಂದರ್ಯಕ್ಕೆ ಮೆಚ್ಚಿ ಅಲ್ಲಿಯ ನಾರಿಯರು "ಮಸ್ತಕದಲ್ಲಿ ಬುಟ್ಟಿಗಳನ್ನೊ ಕೊಡಗಳನ್ನೊ ಇಟ್ಟು ನಡೆಯುವಾಗ ಇವರು ಆಜೀವನ ರಾಣಿಯರ ಭಾವ ಭಂಗಿಗಳನ್ನು ಅಭ್ಯಸಿಸಿದವರಂತೆ ಕಾಣುತ್ತಾರೆ" ಎಂದಿದ್ದಾರೆ.

ಉಚ್ಚವರ್ಗದ ರಾಜಸ್ಥಾನಿ ನಾರಿಯರು ಅಂತಃಪುರದಿಂದ ಹೊರಬಾರದ ಗೋಷಾನಾರಿಯರಾಗಿಯೆ ಇದ್ದಾರೆ. ಆದರೆ ಇದು ರಾಜಸ್ಥಾನದ ಪ್ರಾಚೀನಪರಂಪರೆ, ನಾರಿಯ ಗೌರವವನ್ನು ಕಾಪಾಡಲು ಈ ನಾಡು ಸಾವಿರಾರು ಪ್ರಾಣಗಳನ್ನು ಬಲಿಕೊಟ್ಟು ನೂರಾರು ಯುದ್ಧಗಳನ್ನು ಹೋರಿ ರಾಜ್ಯರಾಜ್ಯಗಳನ್ನೆ ಕಳೆದುಕೊಳ್ಳಲು ಹಿಂಜರಿದಿಲ್ಲ.

ನಾರೀಮಾನಕ್ಕೆ ಈ ನಾಡು ಕೊಡುವ ಪ್ರಾಶಸ್ತ್ಯ ಅದರ "ತೀಜ" ಹಬ್ಬದಲ್ಲಿ ಮೂರ್ತವಾಗಿದೆ. ಶ್ರಾವಣ ಮಾಸದಲ್ಲಿ "ಸುಹಾಗ್" (ಸೌಭಾಗ್ಯ) ದೇವತೆಯಾದ ಗೌರಿಯ ಪೂಜೆಯನ್ನು ಅಖಿಲ ರಾಜಸ್ಥಾನದಲ್ಲಿ ಸಮಸ್ತ ಸ್ತ್ರೀಯರು ಆಚರಿಸುತ್ತಾರೆ. ರಾಜನ ಅಂತಃಪುರದಲ್ಲಿ ನಾರಿಯರು ಪೂಜಿಸಿದ ಗೌರಿಯ ಮೃಣ್ಮಯ ಮೂರ್ತಿಯನ್ನು ಮೆರವಣಿಗೆ ಹೊರಡಿಸಿದಾಗ ಸರಕಾರದ ವಾದ್ಯ ವಾದಕರೂ ರಾಜಸೈನ್ಯವೂ ಅರಮನೆಯ ಅಧಿಕಾರಿಗಳೂ ಇತರ ಪರಿವಾರ ಜನರೂ ಅತ್ಯಂತ ವೈಭವಪೂರ್ಣವಾಗಿ ಆ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಬಿಕಾನೇರದಂಥ ಕೆಲ ಸಂಸ್ಥಾನಗಳಲ್ಲಂತೂ ಸ್ವತಃ ರಾಜನೇ ಆನೆಯ ಮೇಲೇರಿ ಮೆರವಣಿಗೆಯ ಮುಂದಾಳಾಗುವದು ರೂಢಿ. ಹೆಂಗಸರ ಹಬ್ಬದಲ್ಲಿ ಗಂಡಸರು ಭಾಗವಹಿಸಿ ಅವರ ಪೂಜಾಮೂರ್ತಿಯನ್ನು ಮೆರವಣಿಗೆಯಲ್ಲಿ ಒಯ್ಯುವ ಈ ಹಬ್ಬದ ಮೂಲಕ ಪುರುಷರು ತಮ್ಮ ನಾರಿಯರ ಮೇಲಿರುವ ಆದರ ಗೌರವಗಳನ್ನು ಪ್ರದರ್ಶಿಸುವ ಈ ಉದಾಹರಣೆ ಅದ್ವಿತೀಯವಾಗಿದೆ.

ಕಲೆಯಲ್ಲಿ ಮೇಲ್ಗೈ

ಶೌರ್ಯಕ್ಕೆ ಹೆಸರಾದ ಈ ನಾಡು ಕಲೆಗಳಲ್ಲೂ ಅಷ್ಟೇ ಮೇಲ್ಮೆಯನ್ನು ತೋರಿಸಿದೆ. ರಾಜಸ್ಥಾನದ ಚಿತ್ರಕಲೆ ತನ್ನದೇ ಒಂದು ವಿಶಿಷ್ಟ ಪದ್ಧತಿಯನ್ನು ರೂಪಿಸಿಕೊಂಡಿದೆ. ರಾಧಾಕೃಷ್ಣ ಲೀಲಾ ವಿನೋದಗಳನ್ನು ಚಿತ್ರಾರ್ಪಿತವಾಗಿ ಮಾಡಿದ್ದಲ್ಲದೆ, ಸಂಗೀತದ ರಾಗ-ರಾಗಿಣಿಗಳನ್ನು ವರ್ಣಶಿಲ್ಪದಲ್ಲಿ ಮೂರ್ತಗೊಳಿಸಿದ ರಾಜಸ್ಥಾನಿ ಚಿತ್ರಕಾರರ ಪ್ರೌಢಿ ಅಪೂರ್ವವಾದುದು. ದಿಲ್ಲಿಯ ಚಿತ್ರಮಂದಿರದಲ್ಲಿ ರಾಜಸ್ಥಾನಿ ಪದ್ಧತಿಯ ಚಿತ್ರಗಳಿಗಾಗಿ ಪ್ರತ್ಯೇಕ ಶ್ರೇಣಿಯೊಂದು ಏರ್ಪಟ್ಟಿರುವದು ಈ ಪದ್ಧತಿಯ ಮಹತ್ವಕ್ಕೆ ಸಾಕ್ಷಿಯಾಗಿದೆ.

ರಜಪೂತ ಶಿಲ್ಪಕಲೆಯೂ ಚೈತನ್ಯಪೂರ್ಣವಾಗಿದೆಯೆಂದು ಶಿಲ್ಪತಜ್ಞ ಫಾರ್ಗ್ಯೂಸನ್ ಹೇಳಿದ್ದಾನೆ. ರಾಜಸ್ಥಾನದ ಅರಮನೆಗಳು ಮಾತ್ರವಲ್ಲ, ಸಾಮಾನ್ಯ ಮನೆಗಳೂ ಶಿಲ್ಪಕೌಶಲದ ಮಾದರಿಗಳೇ ಆಗಿವೆ. ರಾಜಸ್ಥಾನದ ವಾಸ್ತುಶಿಲ್ಪಿಗಳು ಇತರ ಪ್ರಾಂತಗಳಿಂದ ಬಂದವರಿಗಿಂತ ಕುಶಲರಾಗಿರುವದು ಅನುಭವದ ಮಾತು.

ಹಿಂದುಳಿದ ನಾಡು

ಇಂಥ ವೈಭವಪೂರ್ಣ ಇತಿಹಾಸ, ಕಲೆಗಳ ರಂಗಭೂಮಿಯಾದ ರಾಜಸ್ಥಾನವಿಂದು ಹಿಂದುಳಿದ ನಾಡು, ಜನತೆಯ ದೀನವಾಗಿದೆ. ವಿಸ್ತಾರವಾದ ಮರಳು ಕಾಡು ಸಸ್ಯಹೀನ ಪರ್ವತ ಪ್ರದೇಶಗಳು ಅಧಿಕ. ನಿಸರ್ಗದ ದೃಷ್ಟಿಯಿಂದ ತೀರ ನಿಕೃಷ್ಟವಾಗಿದೆ. ಈ ನಾಡ ಜನರಿಗೆ ಪ್ರಕೃತಿ ದೇವಿ ಕಿಂಚಿತ್ ಮುನಿದಿದ್ದಾಳೆ. ಉದ್ದಿಮೆಗಳನ್ನು ಬೆಳೆಸಿ ಸಮೃದ್ಧಿಯನ್ನು ಹೆಚ್ಚಿಸುವದಂತೂ ದೂರ ಉಳಿದು ಸದಾ ಬರಗಾಲದ ಭಯವನ್ನು ಎದುರಿಸಿ ಜನರಿಗೆ ಜೀವನಕ್ಕೆ ಬೇಕಾದಷ್ಟು ಸಾಧನ ಉತ್ಪಾದಿಸಿದರೇ ಸಾಕಾಗಿದೆ. ಭಾರತದ ವ್ಯಾಪಾರೋದ್ಯಮಗಳಲ್ಲಿ ಎಲ್ಲೆಲ್ಲೂ ತಾನೇ ತಾನಾಗಿರುವ ಬಿರ್ಲಾ, ದಾಲ್ಮಿಯಾ, ಸೆಕ್ಸೇರಿಯಾ, ಪೋದ್ದಾರ, ಗೋಯಂಕಾಗಳಿಗೆ ಜನ್ಮವಿತ್ತ ರಾಜಸ್ಥಾನವೇ ಇಂದು ಹೀಗೆ ಹಿಂದುಳಿಯಲು ಈ ನಿಸರ್ಗ ವೈಪರೀತ್ಯವೇ ಕಾರಣ.

ಆದರೆ ನೀರಾವರಿಗಳ ಮೂಲಕ ಈ ಬಂಜರು ಚೌಳು ಭೂಮಿಯಿಂದ ಆದಷ್ಟು ಫಲ ಪಡೆಯಲು ಹಲವು ಪ್ರಮುಖ ಸಂಸ್ಥಾನಗಳಲ್ಲಿ ಪ್ರಯತ್ನಗಳಾಗಿವೆ. ಬಿಕಾನೇರ ಸಂಸ್ಥಾನದಲ್ಲಿ ಮೂರು ಕೋಟಿ ರೂಪಾಯಿ ವೆಚ್ಚದಿಂದ ಸತ್ಲಜ ನದಿಯಿಂದ ತಂದ "ಗಂಗಾ" ಕಾಲುವೆ ೧೦೦೦ ಚೌ. ಮೈಲು ಭೂಮಿಗೆ ನೀರುಣಿಸುತ್ತದೆ. ಅದರ ಪಾರ್ಶ್ವದಲ್ಲಿ ಎರಡೂ ಕಡೆ ಒಕ್ಕಲಿಗ ಕುಟುಂಬಗಳು ಪ್ರವರ್ಧಮಾನವಾಗಿವೆ– ಇದಲ್ಲದೆ ಎಂಟುಕೋಟಿ ರೂಪಾಯಿ ವೆಚ್ಚದಿಂದ ಭಕರಾ ಅಣೆಕಟ್ಟು ಕಟ್ಟಿ ೨೦೦೦ ಚೌ. ಮೈಲು ಭೂಮಿಯನ್ನು ಕೃಷಿಯೋಗ್ಯವಾಗಿ ಮಾಡುವ ಇನ್ನೊಂದು ಯೋಜನೆಯೂ ನಡೆದಿದೆ. ಜಯಪುರ ಜೋಧಪುರಗಳಲ್ಲಿಯೂ ಅಣೆಕಟ್ಟುಗಳ ಮೂಲಕ ನೀರಾವರಿ ಸಾಕಷ್ಟಿದೆ.

ದೊಡ್ಡ ಉದ್ದಿಮೆಗಳಿಲ್ಲದಿದ್ದರೂ ರಾಜಸ್ಥಾನದಲ್ಲಿ ಹಿತ್ತಾಳಿ, ದಂತ, ಗಂಧ, ಕಾಗದ ಮೊದಲಾದವುಗಳ ಮನೆ ಕೈಗಾರಿಕೆಗಳು ಸಮೃದ್ಧವಾಗಿವೆ.

ಶಿಕ್ಷಣದಲ್ಲಿ ಹಿಂದೆ

ಶಿಕ್ಷಣದಲ್ಲಿ ರಾಜಸ್ಥಾನ ತೀರ ಹಿಂದುಳಿದಿದೆ. ಪ್ರತಿಯೊಂದು ದೊಡ್ಡ ಸಂಸ್ಥಾನದಲ್ಲಿ ಕಾಲೇಜುಗಳಿದ್ದು ಬಿರ್ಲಾ ಶಿಕ್ಷಣ ನಿಧಿಯೇ ಮೊದಲಾದ ಧರ್ಮ ಸಂಸ್ಥೆಗಳೂ ಶಿಕ್ಷಣಕ್ಕಾಗಿ ದುಡಿಯುತ್ತಿದ್ದರೂ ಸರಕಾರಗಳು ಒಮ್ಮನಸ್ಸಿನಿಂದ ಪ್ರಯತ್ನ ಮಾಡದ್ದರಿಂದಲೂ ಜನರ ಸ್ವಾಭಾವಿಕ ಔದಾಸೀನ್ಯದಿಂದಲೂ ಶಿಕ್ಷಣ ಸಾಕಷ್ಟು ಪ್ರಗತಿ ಹೊಂದಿಲ್ಲ. ಹೊಸ ಒಕ್ಕೂಟದಲ್ಲಿ ಇವು ಸಮ್ಮಿಲಿತವಾಗಿರುವದರಿಂದ. ಇನ್ನು ಈ ಬಗ್ಗೆ ತೀವ್ರ ಉಪಾಯಗಳಾಗದಿರವು.

ಅಲ್ಲಿನ ವ್ಯಾಪಾರಿಗಳ ಉದ್ಯಮಪ್ರಿಯತೆ, ಮನೆತನಗಳ ಆಡಳಿತೆಯ ಅನುಭವಗಳಿಗೆ ಜನಪ್ರಿಯ ನಾಯಕರ ಸಹಾಯವೂ ದೊರೆತರೆ ರಾಜಸ್ಥಾನದ ಐತಿಹಾಸಿಕ ವೈಭವಕ್ಕೆ ಸರಿದೂಗುವ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಯಾಗಲು ಬಹಳ ದಿನ ಹಿಡಿಯದು.

..ಪ್ಯಾರೇ

ರೂಪರಂಗ

ನಟರಾಜ ಚಂದ್ರಮೋಹನ

...ರಾಜ ಚಂದ್ರಮೋಹನನ ಮರಣದ ...ದೃಶ್ಯಕಾವ್ಯಪ್ರಿಯರಿಗೆ ಹೃದಯವಿದ್ರಾವಕ ...ವಿರದು. ಕಳೆದ ತಾ ೩೧ ನೆಯ ಆದಿತ್ಯ ...ಬೆಳಿಗ್ಗೆ ಚಂದ್ರಮೋಹನನು ಇಹ ...ಾರವನ್ನು ತ್ಯಜಿಸಿದನು. ಅತನ ದಿವಂ ...ನದಿಂದ ಭಾರತೀಯ ಚಲಚ್ಚಿತ್ರ ಪ್ರಪಂಚ ...ಅತ್ಯುತ್ತಮ ತಾರಾರತ್ನವನ್ನು ಕಳೆದು ...ತ ನಷ್ಟಕ್ಕೀಡಾಯಿತು. ಅವನ ಮರ ...ಹೃದಯವಿಕಾರವೇ ಕಾರಣವೆಂದು ಹೇಳ ...ದೆ. ಅವನ ವಯಸ್ಸು ೪೪ ವರ್ಷಗಳು. ...ುವ ಮೊದಲು ೨ ವಾರಗಳಿಂದ ಕಾಹಿಲೆ ...ಲಿ ಎಂದು ನರಳುತ್ತಿದ್ದನು.

...ನನ ೧೫ ವರ್ಷಗಳ ಅಭಿನಯಕಲೆಯಲ್ಲಿ ...ು ಚಿರಸ್ಮರಣೀಯರಾದ ಅನೇಕ ಪಾತ್ರ ...ನ್ನು ಮನೋಮೋಹಕವಾಗಿ ಅಭಿನಯಿಸಿ ...ಚಿತ್ರಪ್ರೇಕ್ಷಕರು ಅವನನ್ನೆಂದೂ ...ಮರೆಯಲಾರರು. ಅವನ ಕಟಾಕ್ಷವೀಕ್ಷಣ, ...ಘನಗಂಭೀರವ್ಯಕ್ತಿತ್ವ ಇವನ್ನು ಒಮ್ಮೆ ...ವರು ಎಂದೂ ಮರೆಯಲಾರರು.

...ಮಾರು ೨೦ ವರ್ಷಗಳ ಹಿಂದೆ ಸ್ಫುರ ...ತಿಯ ತಾರುಣ್ಯವೆತ್ತ, ನೀಲನಯನದಿಂದ ...ತನ್ನು ದೆಸೆದೆಸೆಗೆಸೆವ, ಅಧಿಕಾರಗಾಂಭೀ ...ತುಂಬುದನಿಯ ಗುಮಾಸ್ತ ಚಂದ್ರ ...ಹನನು ದಿಲ್ಲಿಯಲ್ಲಿಯ ಚಿತ್ರವಿತರಣದತನ್ನ ...ರ್ಯಾಲಯದಿಂದ ಕೊಲ್ಹಾಪುರಕ್ಕೆ ಹೋದ ...ಕೊಲ್ಹಾಪುರಕ್ಕೆ ಹೋದಾಗ ಸಂಜೆದಿಗ್ದರ್ಶಕ ...ಶಾಂತಾರಾಮರು ಅತನನ್ನು ಕಂಡು ತಾರೆಯಾ ...ನಿಮಂತ್ರಿಸಿಬಿಟ್ಟರು. ಆದರೆ ಅವನು ...ಸಮ್ಮತಿಸದೆ ತನ್ನ ಕೆಲಸದಲ್ಲೇ ಉಳಿದು ...ದನು. ಕೆಲ ವರ್ಷಗಳ ಬಳಿಕ ಕೊಲ್ಹಾ ...ದಿಂದ ಶಾಂತಾರಾಮರ ಕಾರ್ಯಾಲಯ ...ಗೆ ವರ್ಗಾಯಿಸಲ್ಪಟ್ಟಿತು. ಆಗ ...ರ್ಯಾಂತರಕ್ಕಾಗಿ ಅಲ್ಲಿಗೆ ಬಂದಿದ್ದ ಚಂದ್ರ ...ಹನನಿಗೆ "ಅಮೃತಮಂಥನ"ದಲ್ಲಿ ಅಪೂರ್ವ ...ಒಂದು ಪಾತ್ರವನ್ನು ಕೊಡಲಾಯಿತು. ...ು ಅದನ್ನು ಅಷ್ಟು ಚೆನ್ನಾಗಿ ನಿರ್ವಹಿಸಿದ್ದ ...ಆಗಿಂದಾಗ ಅವನು ಪ್ರಸಿದ್ಧ ತಾರೆ ...ಗಿ ಸಮಸ್ತ ಸ್ತ್ರೀಪುರುಷ ಪ್ರೇಕ್ಷಕರ ...ನಗಳನ್ನು ಸೂರೆಗೊಂಡನು.

...'ಅಮರಜ್ಯೋತಿ'ಯಲ್ಲಿ ೨ ನೆಯ ಸಲ ...ದ್ರಮೋಹನನ ಕೀರ್ತಿ ಸ್ಫುಟವಾಯಿತು. ...ೃತಮಂಥನದಲ್ಲಿ ಅವನು ಮೋಘನಾದ ...ಡಬಲ್ಲವನಾಗಿ ಮೆರೆದರೆ ಇದರಲ್ಲಿ ಗುಂಜಾ ...ಮಾಡಬಲ್ಲವನೆಂದೂ ನಿರ್ದರ್ಶಿಸಿದನು. ...ದಲ್ಲಿ ಸಂದಿನಿಯನ್ನು ಪ್ರೀತಿಸುವ ಪ್ರಕರಣ ...ಚಂದ್ರಮೋಹನನು ಅಕ್ಷರಶಃ ಚಂದ್ರ ...ಹನನೆನಿಸಿದನು, ಅದ್ವಿತೀಯ ನಟನೆ ...ನ್ನು ಪ್ರದರ್ಶಿಸಿದನು.

...ಪ್ರಭಾತ' ಕಂಪನಿಯನ್ನು ಬಿಟ್ಟ ನಂತರ ...ನು 'ಪುಕಾರ'ನಲ್ಲಿ ಅಭಿನಯಿಸಿದನು. ಮೊಗಲ ಚಕ್ರವರ್ತಿ ಜಹಾಂಗೀರನ ಪಾತ್ರವನ್ನು ವಹಿಸಿದ ಅವನ ಅಭಿನಯಕೌಶಲ ಅದ್ಭುತವನ್ನುವೆನಿಸಿತು. ೬೦ ರೂಪಾಯಿ ಸಂಬಳದ ಗುಮಾಸ್ತನಾದವನು ನಟರಾಜನಾಗಿ ಹೋದನು! ಅವನ ಸಂಪಾದನೆಗೆ ಮಿತಿಯಿಲ್ಲದಾಯಿತು.

'ಮಧುಕರ್' ಚಿತ್ರಾಲಯದ "ಬಜಾರ್" ಚಿತ್ರದಲ್ಲಿ ಶ್ಯಾಮ, ನಿಗರ್‌ಸುಲ್ತಾನಾ ಮತ್ತು ಯಾಕೂಬ್.

ದುಂದುಗಾರಿಕೆ, ಕೆಲ ಚಿತ್ರಗಳಲ್ಲಾದ ಅಪಜಯ, ಯುದ್ಧಪರಿಸ್ಥಿತಿ ಮುಂತಾದವುಗಳಿಂದ ಕೊನೆಗೆ ಆನಂದಸುಂದರ ಬ್ರಹ್ಮಚಾರಿಯಾದ ಚಂದ್ರಮೋಹನ ಸಂಕಟಗ್ರಸ್ತನಾದನು. ಆದರೆ ಆ ಸಂಕಟವೇ ಅವನಿಗೊಂದು ವರವಾಗಿ ಪರಿಣಮಿಸಿತು. ಆ ಕಾಲದಲ್ಲಿ ಅವನು ತತ್ವಗ್ರಂಥಾವಲೋಕನದಲ್ಲಿ ಆಸಕ್ತನಾಗಿ ಕರ್ಮಯೋಗವನ್ನು ಚೆನ್ನಾಗಿ ಅಭ್ಯಾಸಮಾಡಿ ಮನಃಶಾಂತಿಯನ್ನು ಪಡೆಯಲು ಶಕ್ತನಾದನು. ಅನಂತರ "ಶಾಹೀದ್" ಮತ್ತು "ರಾಮಬಾಣ"ಗಳಲ್ಲಿ ಪಾತ್ರವಹಿಸುವ ಸಂದರ್ಭ ಪೊದಗಿಬಂದು ಪುನಃ ಅವನು ಮೊದಲಿನ ಸುಸ್ಥಿತಿಯನ್ನು ಕಂಡನು. ಆದರೂ ಅವನ ಪ್ರಥಮದ ಕಲಾಕೀರ್ತಿಯ ಮಟ್ಟಕ್ಕೆ ಪುನಃ ಏರಲು ಅವನಿಗೆ ಸಾಕಷ್ಟು ಅವಧಿ ಸಿಗಲಿಲ್ಲ. ಅಷ್ಟರಲ್ಲಿಯೇ ಅವನನ್ನು ಕಾಲಪಾಶಕೊಂಡೊಯ್ದಿತು. ಖಾಸಗಿ ಜೀವನದಲ್ಲಿ ಸ್ನೇಹಪರನೂ ಉಲ್ಲಾಸಿಯೂ ಉದಾರಿಯೂ ಆಗಿದ್ದು, ನಟನಾಕ್ಷೇತ್ರದಲ್ಲಿ ಗಂಡುಗಾಡಿಯಿಂದ, ಭಾವವರ್ಣ ವೈಚಿತ್ರ್ಯ ವೈವಿಧ್ಯಗಳಿಂದ ತುಂಬಿದ ಆಳಾಗಿ ಅಧಿಕಾರಗಾಂಭೀರ್ಯ ಮತ್ತು ವ್ಯಕ್ತಿತ್ವ ಸೌಂದರ್ಯಗಳಿಂದ ಶೋಭಿಸುವ ಅವನಂಥ ಮತ್ತೊಬ್ಬ ನಟನು ಸಿಕ್ಕುವುದು ದುರ್ಲಭವೇ ಸೈ. ಅತನ ಆತ್ಮ ಪುನಃ ಭಾರತದಲ್ಲಿ ಜನ್ಮತಳೆದು ತನ್ನ ಕಲಾವಂತಿಕೆಯಿಂದ ಜಗತ್ತಿನ ಹೃದಯವನ್ನು ಪವಿತ್ರಗೊಳಿಸಲು ಅವಕಾಶ ಸಿಗಲಿ ಎಂದು ಪ್ರಾರ್ಥಿಸದವನಾರು?

— ತಾರಾನಾಥ

...ನೆ ಮಾತುಗಳು

...ರಡು ಭಂಗಿಗಳನ್ನು ಒಂದರ ಹಿಂದೊಂದು ...ಸುವದರಲ್ಲೆ ನನ್ನ ಜನ್ಮ ಸವೆದುಹೋ... ...: ಏಕಾಕಿಯಾಗಿರಲು ಭಯಪಟ್ಟು ...ನ್ನು ಆಕರ್ಷಿಸುವ ಭಂಗಿಯೊಂದು, ...ೀಸಾಕಾಗಿ ಅವರನ್ನು ದೂರೀಕರಿಸಲು ...ಕ್ಷಿಸುವ ಭಂಗಿ ಇನ್ನೊಂದು.

–ಡಾ. ಸಿ. ಇ. ಎಂ. ಜೋಡ
(ಪಾಶ್ಚಾತ್ಯ ವಿದ್ವಾಂಸ)

*

...ಮಗೆ ಜಡ್ಡಾದಾಗ ವೈದ್ಯನೆಂದರೆ ದೇವರು, ...ವಾದ ಮೇಲೆ ವೈದ್ಯನು ಮಾನವ, ಅವನ ...ಬಂದಾಗ ವೈದ್ಯನೆಂದರೆ ರಾಕ್ಷಸ.

–ಡಾ. ಡಿ. ಡಿ. ಗಿಲ್ಡರ
(ಮುಂಬಯಿ ಆರೋಗ್ಯಮಂತ್ರಿ)

*

...ರಾಯಿಯ ಬದಲು ಚಹಾದ ಪ್ರಚಾರ ...ಗುವದೆಂದು ಪಾನ ನಿರೋಧಕರೂ ...ಪಾನದಿಂದ ಬೇನೆ ಬೇಸರಿಕೆಗಳು ಕಡಿಮೆ ...ಗಿ ತಮ್ಮ ವೃತ್ತಿಗೆ ಧಕ್ಕೆಯಾಗುವದೆಂದು ...ವೈದ್ಯರೂ ಚಹಾಪಾನವನ್ನು ವಿರೋ... ...ತ್ತಾರೆ!

—ರೋಹಿಣಿ ಕುಮಾರ ಚೌಧುರಿ
(ಘಟನಾ ಸಮಿತಿ ಸದಸ್ಯರು)

ಪ್ರಸಂಗದ
ಜೇಕೆಂಬದು.
ಸಾಧ್ಯ
ಪ್ರಾಯು.

ಕೌಮಾರ್ಯ ವಿಮೆ!

ಡೆನ್ಮಾರ್ಕಿನಲ್ಲಿ ವಿವಾಹ ವಿಮೆಯೆಂಬ ಹೊಸ ವಿಮಾ ವ್ಯವಹಾರ ಪ್ರಾರಂಭವಾಗಿದೆ. ಅದನ್ನು ಪ್ರಾರಂಭಿಸಿದ ಕಂಪನಿಯ ಹೆಸರು, "ಬ್ರಹ್ಮಚರ್ಯ ವಿರುದ್ಧ ವಿಮಾಸಂಘ", ಎಂದು. ಅದು ಕುಮಾರಿಯರನ್ನು ಮಾತ್ರ ವಿಮೆ ಮಾಡುತ್ತದೆ. ಮದುವೆಯಾಗದೆ ಬ್ರಹ್ಮಚರ್ಯೆಯಲ್ಲಿ ಉಳಿದು ಹೋಗುವ ಗಂಡಾಂತರದ ವಿರುದ್ಧ ವಿಮೆ ಅದು.

ಇತರ ವಿಮಾ ಪದ್ಧತಿಗಳಂತೆ ಇದೂ ಅಂಕಿ ಸಂಖ್ಯೆಗಳ ಆಧಾರವನ್ನೆ ಅವಲಂಬಿಸಿದೆ.

ಜೀವವಿಮೆಯಲ್ಲಿ, ನೀವು ಸತ್ತರೆ ಇಲ್ಲವೆ ಒಂದು ವಿಶಿಷ್ಟ ಅವಧಿಯ ವರೆಗೆ ಬದುಕಿದ್ದು ಕಂತುಗಳನ್ನು ಕೊಡುತ್ತ ಬಂದರೆ ನಿಮಗೆ ವಿಶಿಷ್ಟ ಮೊತ್ತ ದೊರೆಯುತ್ತದೆ. ನಿಮ್ಮ ವಯಸ್ಸು ಹೆಚ್ಚಾದಂತೆ ಕಂತಿನ ಮೊತ್ತವೂ ಹೆಚ್ಚಾಗುತ್ತ ಹೋಗುತ್ತದೆ. ಹಾಗೆಯೆ ಕೌಮಾರ್ಯವಿಮೆಯಲ್ಲಿ ನೀವು ಪ್ರತಿವರ್ಷ ನಿರ್ದಿಷ್ಟ ಕಂತುಗಳನ್ನು ತುಂಬುತ್ತ ಹೋಗುವಿರಿ. ಅವಧಿಯೊಳಗೆ ನಿಮಗೆ ಗಂಡದೊರೆಯದಿದ್ದರೆ ಒಂದೇ ಗಂಟಿನಲ್ಲಾಗಲಿ, ವಾರ್ಷಿಕ ಕಂತುಗಳಲ್ಲಾಗಲಿ "ಪರಿಹಾರ" ದೊರಕುವದು. ಗಂಡನೇ ದುರ್ಲಭವಾಗಿರುವ ದೇಶಗಳು ಇದನ್ನು ಅನುಕರಿಸಬಹುದೇನೋ!

ವಿಶೇಷ ಲೇಖ

ಚಿಕ್ಕಮ...

ಅವುಗಳ ...
ಅವನ್ನು ...

ಬಾಬಾ ಬುಡಣನ ಗುಹೆಯ ದೃಶ್ಯ

ಚಿಕ್ಕಮಗಳೂರಿನ ಪಕ್ಕದಲ್ಲಿಯೇ ಒಂದು ಉನ್ನತವಾದ ಗುಡ್ಡವಿರುವದು. ಬುಡದಲ್ಲಿ ಹಸುರು, ಮಧ್ಯದಲ್ಲಿ ಕಪ್ಪು ಅಥವಾ ಕಾಫಿ ಬಣ್ಣ, ತುದಿಯಲ್ಲಿ ಬಂಗಾರದ ಬಣ್ಣ, ಹೀಗೆ ಮೂರು ಬಣ್ಣಗಳಿಂದ ಆ ಗಿರಿಯು ನೋಡಲು ಅತಿ ಸುಂದರವಾಗಿ ಕಾಣುವದು. ಅದರ ಶಿಖರದ ಮೇಲೆ ಒಂದು ಗುಹೆಯಲ್ಲಿ ಬಾಬಾ ಬುಡಣನಸಮಾಧಿ ಇರುವದರಿಂದ ಇದನ್ನು 'ಬಾಬಾ ಬುಡಣನ ಗಿರಿ'ಯೆಂದು ಸಾಮಾನ್ಯವಾಗಿ ಕರೆಯುತ್ತಾರೆ. ಅದೇ ಸಮಾಧಿಗೆ ಹಿಂದುಗಳು ದತ್ತಪೀಠವೆಂದು ಕರೆಯುತ್ತಾರೆ. ಅಲ್ಲಿ ದತ್ತಾತ್ರೇಯ ಸ್ವಾಮಿಗಳು ತಪಶ್ಚರ್ಯಕ್ಕಾಗಿ ಇರುತ್ತಿದ್ದರೆಂದು ಹೇಳುತ್ತಾರೆ. ಅಂತೂ ಆ ಗುಹೆಯು ಹಿಂದೂ ಮುಸ್ಲಿಮರಿಬ್ಬರಿಗೂ ಅಷ್ಟೇ ಮಹತ್ವದ ಯಾತ್ರಾಸ್ಥಳವಾಗಿದೆ. ವರ್ಷಕ್ಕೊಮ್ಮೆ ಅಲ್ಲಿ ದೊಡ್ಡ ಉತ್ಸವವಾಗಿ ಅಸಂಖ್ಯ ಹಿಂದು ಮುಸ್ಲಿಮ ಭಕ್ತರ ಸಮ್ಮೇಲನವು ನೆರೆಯುತ್ತದೆ. ಅದರ ಪೂಜಾರಿಯು ಮಾತ್ರ ಒಬ್ಬ ಕಾಜಿಗಳೇ ಇದ್ದಾರೆ.

ಈ ಗಿರಿಯು ಸಮುದ್ರ ಪಾತಳಿಯಿಂದ ಸುಮಾರು ೭೫೦೦ ಅಡಿ ಎತ್ತರವಿದೆಯೆಂದು ಹೇಳುತ್ತಾರೆ. ಗುಡ್ಡದ ಅರ್ಧಕ್ಕಿಂತ ಹೆಚ್ಚು ಭಾಗವು ಕಾಫಿ ತೋಟಗಳಿಂದ ತುಂಬಿರುತ್ತದೆ.

ಸಿಲ್ವರ ಮರಗಳ ಕೆಳಗೆ

ಈ ಕಾಫಿ ತೋಟಗಳಲ್ಲಿ, ಮೊದಲಿಗೆ ಕಾಣುವದೆಂದರೆ ಎತ್ತರವಾದ ಕೊಡೆ ಆಕಾರದ ಗಿಡಗಳು. ಅವನ್ನು ಸಿಲ್ವರ ಮರಗಳೆಂದು ಕರೆಯುತ್ತಾರೆ. ಇವುಗಳ ಅಡಿಯಲ್ಲಿ, ಕಾಫಿ ಬಳ್ಳಿಗಳು ಹಬ್ಬಿಕೊಂಡಿರುತ್ತವೆ. ಕಾಣಲಿಕ್ಕೆ ಈ ಬಳ್ಳಿಗಳು ಆಡುಸಾಲದ ಬಳ್ಳಿಗಳಂತೆ ತೋರುತ್ತವೆ. ಈ ಕಾಫಿ ಬಳ್ಳಿಗಳ ಒಂದು ವಿಶೇಷ ಲಕ್ಷಣವೆಂದರೆ, ಇವುಗಳಿಗೆ ಬೆಳವಣಿಗೆಗೆ ತಕ್ಕಂತೆ ನೆರಳು ಬಿಸಿಲು ಕೊಡಬೇಕಾಗುತ್ತದೆ. ಮಳೆ ಸುಮಾರು ೭೫ ರಿಂದ ೧೦೦ ಇಂಚಿನ ವರೆಗೆ ಇರಬೇಕು. ಇವುಗಳ ಜೊತೆಗೆ ತೋಟಿಗರು, ಯಾಲಕ್ಕಿ, ಮೆಣಸು, ಹಾಗು ಬಾಳೆಯನ್ನು ಬೆಳೆಯುತ್ತಾರೆ. ಒಂದೊಂದು ತೋಟವು ೫ ಎಕರೆಯಿಂದ ೫೦೦ ಎಕರೆಯ ವರೆಗೂ ವಿಶಾಲವಾಗಿರುತ್ತದೆ. ಕೆಲವು ೧೦೦೦ ಎಕರೆಯ ವರೆಗೂ ಇರುತ್ತವೆ.

ಕಾಫಿ ಬಳ್ಳಿಗಳಲ್ಲಿ ಮುಖ್ಯವಾಗಿ ಎರಡು ತರದ ಬಳ್ಳಿಗಳಿರುತ್ತವೆ. ಒಂದಕ್ಕೆ 'ರೊಬಸ್ಟಾ' ಇನ್ನೊಂದಕ್ಕೆ 'ಅರೇಬಿಕಾ' ಎಂದು ಹೆಸರು. ರೊಬಸ್ಟಾದ ಎಲೆಗಳು ಹೆಸರಿಗೆ ತಕ್ಕಂತೆ ಹೆಚ್ಚಿಗೆ ದೊಡ್ಡವಿದ್ದು ಅದರ ಉತ್ಪನ್ನವೂ ಹೆಚ್ಚು. ಆದರೆ ತೋಟಗಳಲ್ಲಿ ವಿಶೇಷವಾಗಿ ಅರೇಬಿಕಾ ಕಾಫಿ ಬಳ್ಳಿಗಳೇ ಕಂಡು ಬರುತ್ತವೆ.

ಶಾಶ್ವತ ಕೆಲಸಗಾರರು

ಸಾಮಾನ್ಯವಾಗಿ ಕಾಫಿ ಕೋಟದಲ್ಲಿ ಕೆಲಸ ಮಾಡುವ ಜನರು ಯಾವಾಗಲೂ ಅಲ್ಲಿಯೇ ಇರಬೇಕಾಗುತ್ತದೆ. ಇವರಿಗೆ ವಸತಿ ಹಾಗೂ ಆಹಾರ ಧಾನ್ಯದ ವ್ಯವಸ್ಥೆಯನ್ನು ಆಯಾ ತೋಟದ ಮಾಲಕರೇ ಮಾಡಿಕೊಡುತ್ತಾರೆ. ಈ ತೋಟಗಳಲ್ಲಿ ಮುಖ್ಯವಾಗಿ ಆದಿ ಕರ್ನಾಟಕರೆಂಬ ವರ್ಗದ ಜನರೇ ಕೆಲಸ ಮಾಡುತ್ತಾರೆ. ಇವರು ಬಹಳ ದಾರಿದ್ರ್ಯ, ಅಜ್ಞಾನ, ಹಾಗೂ ಮೂಢ ಭಾವನೆಗಳ ವಶದಲ್ಲಿದ್ದಾರೆ. ಉಳಿದ ಎಲ್ಲ ವರ್ಗಗಳ ಕಾರ್ಮಿಕರಿಗಿಂತಲೂ ಇವರು ಹಿಂದುಳಿದವರೆಂದು ತೋರುತ್ತದೆ ೧೦×೧೨ ಫೂಟಿನ ಒಂದು ಕೋಣೆಯಲ್ಲಿ ೬-೮ ಜನ ಇರುತ್ತಾರೆ. ಮಳೆಗಾಲದಲ್ಲಿ ಈ ಕಾಫಿ ತೋಟಗಳಲ್ಲಿ ಚಳಿಜ್ವರದ ಉಪದ್ರವ ಬಹಳ. ನೂರಕ್ಕೆ ೮೦-೯೦ ರಷ್ಟು ಜನರಿಗೆ ಅದರ ಸೆಕ ತಾಕುತ್ತದೆ. ಶಹರುಗಳ ವಸತಿ ಬಿಟ್ಟು ಈ ತೋಟಗಳು ಅತ್ಯಂತ ದುರ್ಗಮವಾದ ಅಂತರದ ಮೇಲೆ ಇರುವದರಿಂದ ಇವರಿಗೆ ಸಕಾಲಕ್ಕೆ ಔಷಧೋಪಚಾರಗಳ ಸೌಕರ್ಯವನ್ನು ಒದಗಿಸುವದು ಕಠಿಣವಾಗುತ್ತದೆ. ಇವರ ನಿತ್ಯ ಆಹಾರವು ಮುಖ್ಯವಾಗಿ ಅಕ್ಕಿ ಗಂಜಿ ಅದೇ ಆ ಹವೆಗೆ ಒಗ್ಗುವದೆಂದು ಅವರ ಭಾವನೆ

ಕಾಫೀ ತೋಟದ ಕೂಲಿಕಾರರ ಮನೆಗಳ ಮಾದರಿ

ಒಂದು ಎಕರೆ ತೋಟಕ್ಕೆ ಸಾಧಾರಣವಾಗಿ ಒಬ್ಬ ಕೂಲಿಯವನಂತೆ ಇವರು ಕೆಲಸ ಮಾಡುತ್ತಾರೆ. ಇವರ ಮೇಲೆ ಒಬ್ಬ ಮೇಸ್ತ್ರಿ ಇರುತ್ತಾನೆ. ಅವರಿಗೆ 'ರಾಯಟರ' ಎಂದು ಕರೆಯುತ್ತಾರೆ. ತೋಟದ ಮಾಲಕರಿಗೂ ಕೆಲಸಗಾರರಿಗೂ ಪ್ರತ್ಯಕ್ಷ ಸಂಬಂಧ ಬರುವದೇ ಕಡಿಮೆ. ಈ ರಾಯಟರರೆ ಎಲ್ಲವನ್ನೂ ನೋಡಿಕೊಂಡು ಹೋಗುತ್ತಾರೆ. ಕೂಲಿಯವರಿಗೆ ವಸತಿ ಹಾಗೂ ರೇಶನ ಕೊಟ್ಟು ೬ ಆಣೆಯಿಂದ ೧೦ ಆಣೆಯ ವರೆಗೆ ಕೂಲಿ ಸಿಗುತ್ತದೆಂದು ತಿಳಿಯುತ್ತದೆ. ರಾಯಟರನಿಗೆ ಅವನ ಕೈಕೆಳಗಿನ ಕೂಲಿಯವರು ಮಾಡಿದ ಕೆಲಸದ ಮೇಲೆ ೧೦% ವರೆಗೆ ಕಮಿಶನ ಸಿಗುತ್ತದೆ. ಕೂಲಿಯವರು ಕಡಿಮೆ ಬಿದ್ದರೆ, ಅವರನ್ನು ಸಂಪಾದಿಸಿಕೊಂಡು ಬರುವದೂ ಇವನದೇ ಕೆಲಸ. ಆ ಕಾಲಕ್ಕೆ ಅವರು ಒಬ್ಬೊಬ್ಬ ಕೂಲಿಯವನಿಗೆ ೧೦೦—೨೦೦ ರೂಪಾಯಿ ಸಾಲ ಕೊಟ್ಟು ಅವರನ್ನು ತಮ್ಮ ಕಡೆಗೆ ಎಳೆದುಕೊಳ್ಳುತ್ತಾರೆ. ಆ ಸಾಲವನ್ನು ಮುಂದೆ ಅವರ ಕೂಲಿಯಲ್ಲಿ ಮುರಿದುಕೊಳ್ಳುವರು.

ಈ ಕೂಲಿಯವರ ಮೇಲೆ ಅನೇಕ ಪ್ರಕಾರದ ಅತ್ಯಾಚಾರಗಳೂ ಅನ್ಯಾಯಗಳೂ ಆಗುತ್ತವೆಂದು ಎಷ್ಟೋ ಜನರು ಹೇಳುತ್ತಾರೆ. ಇವರಿಗೆ ಸಾಲ ಕೊಡುವ ಪದ್ಧತಿ, ಅದರ ಮೇಲೆ ಹೇರುವ ಬಡ್ಡಿ, ಅವರನ್ನು ದುಡಿಸಿಕೊಳ್ಳುವ ರೀತಿ ಮುಂತಾದವುಗಳ ಮೇಲೆ ಎಷ್ಟೋ ತಕರಾರುಗಳಾಗಿವೆ. ತತ್ಪರಿಣಾಮವಾಗಿ ಮೊನ್ನೆ ಮೊನ್ನೆ ಹಿಂದುಸ್ತಾನ...

ಹಾಗೂ ಮೈ... ವಿಶೇಷ ಅ... ಪರಿಸ್ಥಿತಿಯನ್ನು ... ಗಳಿಗೆ ಯೋಗ್ಯ ... ಚಿಕ್ಕಮಗಳೂರಿಗೆ ... ಬಂದಿದ್ದರು. ಇ... ಜನರ ಪರಿಸ್ಥಿತಿಯ... ಆಶಿಸುವಾ.

ಒಡೆಯರ ಸ್ಥಿ...

ಇನ್ನು ಕಾ... ಪರಿಸ್ಥಿತಿಯ... ಬಹುಶಃ ... ಯುರೋಪಿ... ಒಬ್ಬೊಬ್ಬರು ... ತೋಟಗಳ... ರಿಗೆ ... ಕೊಳ್ಳಲು ... ಕೊಳ್ಳಲು ... ಬಡ್ಡಿದರದ...

ಸಾಲವನ್ನು ... ಸಣ್ಣ ಸಣ್ಣ ... ಒಂದೊಂದು ... ಪಡೆದುಕೊಂ... ಅಕಸ್ಮಾತ್ ... ತಮ್ಮ ... ದ್ದರು. ಮೇಲ... ರಿಗೆ ಕೆಲವು ...

ಆದರೆ ಇತ್ತಿ... ಪಿಯನ ತೋ... ಹಿಂದೀಯರಿಗೆ ... ದ್ದಾರೆ. ಹಿಂದಿ... ದ್ದಷ್ಟು ಅಚ್ಚು... ಮೇಲಾಗಿ ಪ... ಇವರಿಗೆ ಸುಲ... ಬ್ಯಾಂಕುಗಳು ... ನಷ್ಟು ದೊಡ್ಡ ... ಅವದ ಉದ್ದೇ... ಸಾಗಿಲ್ಲ.

ಮುನ್ನೂರು ...

ಕಾಫಿ ಬೆ... ದೊಡ್ಡ 'ಸ್ಟ... ಮಳೆ ಸರಿ... ಬೇಕು, ಸ... ಬೆಳೆಯೂ ಸರಿ... ಮಳೆ, ಗಾಳಿ, ... ಬಿಡುವದು ರೊ... ಕಾಪಾಡುವದು... ಮಾತ್ರ ಇಡೀ...

ಲೇಖಕರು
ಶ್ರೀ ಮಾಧವ ಕೌಜಲಗಿ

…ಳ್ಳೂರಿನ ಕಾಫಿ ತೋಟಗಳು

…ಕ ಮತ್ತು ಕೂಲಿಕಾರ ಸಮಸ್ಯೆಗಳು— ಸರಕಾರವೇ …ಬಲ್ಲದು

…ಗಳ ವತಿಯಿಂದ … ಕೂಲಿ ಜನರ … ತಮ್ಮ ಸರಕಾರ … ಮಾಡಲು … ಹೋದಾಗ್ಗೆ …ಯಾದರೂ ಈ …ರಿಸಬಹುದೆಂದು

…ಟಗಳ ಮಾಲಕರ …ವಾ. ಹಿಂದಕ್ಕೆ …ಗಳ ಮಾಲಕರು … ಹೆಚ್ಚಾಗಿದ್ದರು. … ಸಾವಿರ ಎಕರೆ …ಂಡಿದ್ದರು. ಅವ …ನ್ನು ಕೊಂಡು …ಪೈರು ತೆಗೆದು … ಅತಿ ಕಡಿಮೆ … ಬ್ಯಾಂಕುಗಳು

ವನ್ನು ಅವಲಂಬಿಸಿರುವದು. ಇವೆಲ್ಲ ಕುತ್ತುಗಳೊಳಗಿಂದ ಪಾರಾಗಿ ಕಾಫಿಯ ಉತ್ಪನ್ನವು ಕೈಗೆ ಸಿಗುವ ವರೆಗೆ, ತೋಟದ ಮಾಲಕನು ಕೂಲಿಯವರ ಮೇಲೆ ದಿನಾಲು ಖರ್ಚು ಮಾಡುತ್ತ ಕೂಡಬೇಕು. ಅವನ ಮನೆ ಮಠ ಸಂಸಾರ ಎಲ್ಲವನ್ನು ನಡೆಸಬೇಕು. ಹೀಗಾಗಿ ಉಳಿದ ಯಾವದೇ ಉದ್ಯೋಗ ಧಂದೆಯವರಿಗಿಂತ ಇಂಥ ತೋಟಿಗರ ಹೊಣೆ (risk) ಹೆಚ್ಚಾಗಿರುತ್ತದೆಂದು ಹೇಳಬಹುದು. ಕಳೆದ ೪-೬ ವರ್ಷಗಳಿಂದ ರೇಶನ ಬಂದಿದ್ದರಿಂದ, ಕೂಲಿಜನರಿಗೆ ಸಕಾಲಕ್ಕೆ ರೇಶನ ಒದಗಿಸಿಕೊಡುವದು ದುಸ್ತರವಾಗಿ ತೋಟದ ಮಾಲಕರಿಗೆ ಹಾಗೂ ಕೂಲಿಯವರಿಗೆ ಕೂಡಿಯೇ ಅದರಿಂದ ತೊಂದರೆಯಾಗಿದೆ. ಹೊರಗಿನವರಿಗೆ ಒಮ್ಮೆಲೆ ಈ ತೋಟಿಗರೆಂದರೆ ಎಲ್ಲರೂ ಬಹು ಕ್ರೂರರು, ಬಂಡವಲಶಾಹಿಗಳು, ಕೂಲಿ ಜನರನ್ನು ಗೋಳಾಡಿಸುವವರು ಎಂದು ಕಲ್ಪನೆಯಾಗುತ್ತದೆ. ಆದರೆ, ಅದರಲ್ಲಿ ಸ್ವಲ್ಪ ಸತ್ಯಾಂಶ ವಿದ್ದರೂ ಅದು ಪೂರ್ಣಸತ್ಯವಲ್ಲ. ಸತ್ಯ ಶೋಧಕರು ಎರಡೂ ಪಕ್ಷಗಳ ಸ್ಥಿತಿಗತಿಗಳನ್ನು ಅಭ್ಯಸಿಸಿ ನಂತರ ತಮ್ಮ ನಿರ್ಣಯಕ್ಕೆ ಬರಬೇಕು.

ಕಾಫಿ ತೋಟದ ಕೂಲಿಕಾರರು

… ಅವರಲ್ಲಿಯ … ಕೂಡಿಕೊಂಡು … ಕಂಪನಿಗಳನ್ನು …ತವಾಗಿ ಅಥವಾ … ಹಾನಿಯಿಂದ ಕಾಪಾಡಿಕೊಳ್ಳುತ್ತಿ…ನ ಸರಕಾರವು ಅವ…ಗಳನ್ನು ಕೊಟ್ಟಿತ್ತು … ಅನೇಕ ಯುರೋ…ದ್ದು ತೋಟಗಳನ್ನು …ಮ್ಮ ದೇಶಕ್ಕೆ ತೆರಳಿ …ಟಿಗರಲ್ಲಿ ಅವರಲ್ಲಿ … ಕಂಡುಬರುವದಿಲ್ಲ. … ಬ್ಯಾಂಕುಗಳಂತೆ …ಲ್ಲಿ ಸಾಲ ಕೊಡುವ …. ಹೀಗಾಗಿ ಮೊದಲಿ…ರು ಈಗ್ಗೆ ಉಳಿದಿಲ್ಲ. …ಸಾಕಷ್ಟು ಚನ್ನಾಗಿ

ಕಾಫಿ ತೋಟದ ಉತ್ಪನ್ನವನ್ನು ನೋಡಿದರೆ ಸುಮಾರು ಎಕರೆಗೆ ೫ ರಿಂದ ೨೫ ಮಣ ಕಾಫಿ ಬರುತ್ತದೆ. ಸರಾಸರಿ ೧೫ ಮಣ ಹಿಡಿಯಲಿಕ್ಕೆ ಅಡ್ಡಿ ಇಲ್ಲ. ಒಂದು ಮಣಕ್ಕೆ ಈಗಿನ ಧಾರಣೆ ೨೬ ರೂಪಾಯಿ ಇರುತ್ತದೆ. ೧೫ ಮಣಕ್ಕೆ ೩೯೦ ರೂಪಾಯಿಯಾಯಿತು. ಇದರ ವೆಚ್ಚವನ್ನು ನೋಡಿದರೆ, ಎಕರೆಗೆ ಸಾಧಾರಣವಾಗಿ ಒಬ್ಬ ಕೂಲಿಯವನನ್ನಂತೂ ಇಡಬೇಕಾಗುತ್ತದೆ. ಅವನನ್ನು ೧೨ ತಿಂಗಳೂ ಇಟ್ಟುಕೊಂಡಿರುವದಾದರೆ, ಅವನಿಗೆ ರೇಶನ ಬಟ್ಟೆ, ಮೇಲೆ ಕೂಲಿ, ಎಲ್ಲವೂ ಕೂಡಿ ದಿನಕ್ಕೆ ಒಂದು ರೂಪಾಯಿಯಂತೂ ಆಗುತ್ತದೆ. ಹೀಗಾಗಿ ೩೯೦ ರೂಪಾಯಿಯ ಉತ್ಪನ್ನದಲ್ಲಿ ೩೬೫ ರೂಪಾಯಿ ಕೂಲಿಯೇ ಹೋಗಿ ತೋಟದ ಮಾಲಕನಿಗೆ ಎಕರೆಗೆ ವರ್ಷಕ್ಕೆ ಸುಮಾರು ೨೫ ರೂಪಾಯಿ ಉಳಿಯಬಹುದು. ಇದರಲ್ಲಿ ಆ ರಾಯಟರನ ಪಗಾರ, ಗೊಬ್ಬರದ ಖರ್ಚು ಹಾಗೂ ಇತರ ಖರ್ಚನ್ನು ನೋಡಿಕೊಳ್ಳಬೇಕು. ಆದ್ದರಿಂದ ಸಾವಿರ ಐನೂರು ಎಕರೆ ತೋಟಗಳ ಮಾಲಕರನ್ನು ಬಿಟ್ಟರೆ ಉಳಿದವರ ಪರಿಸ್ಥಿತಿಯು ಅಷ್ಟೇನು ಸಮಾಧಾನಕಾರಕವಿಲ್ಲ. ಸದ್ಯಕ್ಕೆ ಇಂಥ ಚಿಕ್ಕ ತೋಟಿಗರ ಸಂಖ್ಯೆಯೇ ಹೆಚ್ಚಾಗಿದೆ! ಅವರಲ್ಲಿ ಕೆಲವರು ತಮ್ಮ ತೋಟದ ಬೆಲೆಯ ಮೇಲೆ, ತಮಗೆ ೧೨% ದರ ಬಡ್ಡಿ ಕೊಟ್ಟರೆ, ತಮ್ಮ ತೋಟಗಳನ್ನು ಬಿಟ್ಟುಬಿಡುವ ವಿಚಾರ ಸಹ ವ್ಯಕ್ತಪಡಿಸುತ್ತಿದ್ದಾರೆ. ಒಂದು ಎಕರೆ ತೋಟಕ್ಕೆ ಈಗ್ಗೆ ಸುಮಾರು ೮೦೦ ರಿಂದ ೧೦೦೦ ರೂಪಾಯಿಯ ವರೆಗೆ ಬೆಲೆ ಇದೆ.

ಕೆಲವು ಸೂಚನೆಗಳು

ಅಂತೂ ಇಲ್ಲಿ ಕಾಫಿ ತೋಟದ ಕೂಲಿಯವರ ಸ್ಥಿತಿ ಚೆನ್ನಾಗಿಲ್ಲ. ಅತ್ತ ತೋಟದ ಮಾಲಿಕರ ಸ್ಥಿತಿ ಸರಿಯಾಗಿಲ್ಲ. ಸರಕಾರದವರು ಇಂಡಿಯನ್ ಕಾಫಿ ಬೋರ್ಡ ಮಾಡಿ ಮಾಲಕರನ್ನು ಬೆಲೆಗಳ ವಿಪರೀತ ಏರಿಳಿತಗಳಿಂದ ಉಳಿಸುವ ಯತ್ನಮಾಡಿದ್ದಾರೆ. ಆದರೆ ಅಷ್ಟಕ್ಕೆ ಈ ಸಮಸ್ಯೆಯು ಬಗೆ ಹರಿಯುವಂತಿಲ್ಲ. ತೋಟಿಗರ ಪರಿಸ್ಥಿತಿಯನ್ನು ಚನ್ನಾಗಿ ಅಭ್ಯಸಿಸಿ, ಪುನಃ ಬೆಲೆಯ ನಿಯಂತ್ರಣ ಮಾಡಬೇಕಾದೀತು. ಅದಲ್ಲದೆ ಅವರಿಗೆ ವರ್ಷದ ಕೆಲಸ ಸಾಗಿಸಿಕೊಂಡು ಹೋಗಲು ಪಾಶ್ಚಿಮಾತ್ಯ ಬ್ಯಾಂಕುಗಳಂತೆ ಯೋಗ್ಯದರಕ್ಕೆ ಬಂಡವಲು ಸಿಗುವ ಸೌಕರ್ಯ ಒದಗಿಸಬೇಕು. ಅವರ ಕೂಲಿಯವರಿಗೆ ರೇಶನ, ಬಟ್ಟೆ ಔಷಧಿ ಇತ್ಯಾದಿ ಅವಶ್ಯಕ ಸಲಕರಣೆಗಳು ಸಕಾಲಕ್ಕೆ ಒದಗುವಂತೆ ವ್ಯವಸ್ಥೆ ಮಾಡಿಕೊಡಬೇಕು.

ಅದರಂತೆ ಅಲ್ಲಿಯ ಕೂಲಿ ಜನರ ಸ್ಥಿತಿಗತಿಗಳನ್ನು ವಿಚಾರಿಸಿ ಅವರಿಗೆ ಔಷಧ, ಶಿಕ್ಷಣ ಹಾಗೂ ಉತ್ತಮ ವಸತಿಗೃಹಗಳ ಅನುಕೂಲತೆಗಳನ್ನು ಮಾಡಿ ಕೊಡಬೇಕು. ಇದರ ಭಾರವನ್ನೆಲ್ಲ ತೋಟದ ಮಾಲಿಕರೇ ಹೊರಬಹುದೆಂದು ಅನಿಸುವದಿಲ್ಲ. ಆದಕ್ಕಾಗಿ ಸರಕಾರದವರು ಅದರಲ್ಲಿ ಆಸ್ಥೆ ವಹಿಸಿ ತಕ್ಕ ಸಹಾಯವನ್ನು ನೀಡಬೇಕು.

ಈ ಕೂಲಿ ಜನರಿಗೆ ವಿರಾಮದ ವೇಳೆಯಲ್ಲಿ, ಕೆಲವು ಕೈಗಾರಿಕೆಗಳನ್ನು ನೂಲುವದು, ಹೆಣೆಯುವದು ಇತ್ಯಾದಿ ಉಪ ಧಂದೆಗಳನ್ನು ಕಲ್ಪಿಸಿ ಕೊಟ್ಟರೆ ಅವರಿಗೆ ಹೆಚ್ಚಿನ ಉತ್ಪನ್ನದ ದಾರಿ ತೋರಿಸಿ ಕೊಟ್ಟಂತಾಗಬಹುದು. ಅವರ ಮೂಢ ಭಾವನೆಗಳನ್ನು ತೆಗೆದು ಹಾಕಲು, ಛಾಯಾ ಚಿತ್ರಗಳ ಮುಖಾಂತರವಾಗಲಿ ಅಥವಾ ಇತರ ಶೈಕ್ಷಣಿಕ ರೀತಿಯಿಂದಾಗಲಿ ಪ್ರಯತ್ನಿಸುವದು ಅತ್ಯವಶ್ಯವಿದೆ.

…ನ್ನವು ಒಂದು …ಂತೆ. ಅದಕ್ಕೆ … ಸರಿಯಾಗಿ …ಬೇಕು. ಮೇಲೆ …ಬೇಕು. ಇವುಗಳಲ್ಲಿ …ನವಾದವು. ನೆರಳು …ಗೂ ಕ್ರಿಮಿಗಳಿಂದ …ರರದು. ಬೆಲೆಯು …ದ ಕಾಫಿ ಉತ್ಪನ್ನ

★

ಕಾಫಿ ತೋಟಗಳ ದೂರ ದರ್ಶನ

…ಚಸಿ ಸ್ವ… …ಏಟಗೆ ಭಂಗಿಗ… ಒಂದು ಉದಾತ್ತಕೃತಿಯ ಮಟ್ಟಕ್ಕೇರಿಸಿ ಬಹಳ ಹಿಂದೆಯೇ ಅದಕ್ಕೆ ಸಿಗಬೇಕಾಗಿದ್ದ ಸ್ಥಾನಕ್ಕೆ ಅದನ್ನು ಏರಿಸಿದಂತಾಗುತ್ತದೆ."
"ಆದರೆ," ಎನ್ನುತ್ತಾನೆ ವಾಲ್ಮೀಕಿಯ ಮಗ, ಇದರಲ್ಲಿ ಗಾಂಧಿಯವರು ನಮಗೊಂದು ಬುದ್ಧಿ

ಮೂಲೆ ಮೂಲೆಗಳಿಂದ

ಅಫಗಾಣಿಸ್ತಾನ ಮತ್ತು ಪಾಕಿಸ್ತಾನಗಳ ನಡುವಣ ಸಂಬಂಧವು ಅಫಗಾಣಿಸ್ತಾನದ ವಿದೇಶ ಮಂತ್ರಿ ಅಬ್ದುಲ್ ಹಮೀದ್ ಮಹಮೂದರು ಕರಾಚಿಯಲ್ಲಿ ನಿರ್ಗಮನಾರ್ಥ ಸಮಾರಂಭ ನಡೆಸಿದಾಗ ಮತ್ತಷ್ಟು ಕೆಡುತ್ತ ಹೋದುದು ಕಂಡು ಬಂದಿತು.

ಅಟ್ಲಾಂಟಿಕ್ ಒಪ್ಪಂದವು ಪಾಶ್ಚಾತ್ಯರೊಡನೆ ತಾನು ಎಲ್ಲ ಸಂಬಂಧ ಕಡಿದುಕೊಳ್ಳಬೇಕಾಗುವಂತೆ ಮಾಡಿದೆ ಎಂಬರ್ಥದ ೨೦೦೦ ಶಬ್ದಗಳ ಒಂದು ಹೇಳಿಕೆಯ ಬಾಂಬನ್ನು ರಶಿಯ ಒಪ್ಪಂದ ಮಾಡಿಕೊಂಡ ರಾಷ್ಟ್ರಗಳಿಗೆ ತೂರಿತು. ಅದು ಸಂ. ರಾ. ಸಂಘದ ತಾವುಪಟಕ್ಕೆ ವಿರುದ್ಧವಾಗಿದೆಯೆಂದೂ ಅದರ ಶಕ್ತಿಯನ್ನು ಹ್ರಾಸಗೊಳಿಸುತ್ತದೆಯೆಂದೂ ಅದರಲ್ಲಿ ಆಪಾದಿಸಲಾಗಿದೆ.

೧೦೦೦ ಶಬ್ದಗಳ ಅಟ್ಲಾಂಟಿಕ್ ಒಪ್ಪಂದದ ಬಗ್ಗೆ ಕೊನೆಯ ಚರ್ಚೆ ನಡೆಸಲು ವಾಶಿಂಗ್ಟನ್ನಿನಲ್ಲಿ ಸಂಬಂಧಪಟ್ಟ ೧೨ ರಾಷ್ಟ್ರಗಳ ವಿದೇಶ ಮಂತ್ರಿಗಳು ಸೇರಿದ್ದಾರೆ. ಪೋರ್ತುಗಾಲ್, ಇಟಲಿ ಮತ್ತು ಡೆನ್ಮಾರ್ಕ್‌ಗಳು ೧೨ ರಲ್ಲಿ ೩.

ಅಣುಬಾಂಬು ಅಮೇರಿಕದ ಕೈಯಲ್ಲಿಲ್ಲವಾಗಿದ್ದರೆ ಇಡೀ ಯುರೋಪು ಕಮ್ಯುನಿಜಮ್ಮಿಗೆ ತುತ್ತಾಗುತ್ತಿತ್ತೆಂದೂ ಲಂಡನ್ನು ಇಷ್ಟರೊಳಗೆ ದಾಳಿಗೆ ಸಿಕ್ಕಿ ಸುಟ್ಟು ಹೋಗುತ್ತಿತ್ತೆಂದೂ ಶ್ರೀ ವಿನ್‌ಸ್ಟನ್ ಚರ್ಚಿಲ್ಲರು ಬೋಸ್ಟನ್ನಿನಲ್ಲಿ ಭಾಷಣ ಮಾಡುವಾಗ ಹೇಳಿದ್ದಕ್ಕೆ ವ್ಯಾಖ್ಯಾನ ಮಾಡುವ ಅವಶ್ಯಕತೆಯಿಲ್ಲ.

ಬ್ರಿಟನ್ನಿನ ನಾನಾ ವಿಧವಾದ ಸಾಮಾಜಿಕ ಕ್ರಾಂತಿಗಳಲ್ಲಿ ರಾಷ್ಟ್ರೀಯ ಆರೋಗ್ಯ ಶಾಖೆ ಅಲ್ಲಿಯ ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಗುವಿಗೂ ಪುಕ್ಕಟೆಯಾಗಿ ಔಷಧೋಪಚಾರದ ಸೌಕರ್ಯವನ್ನು ಒದಗಿಸಿ ಕೊಟ್ಟಿರುವುದು ಬಹಳ ಮಹತ್ವದ್ದಾಗಿದೆ.

ಜರ್ಮನ್ ಸಮಸ್ಯೆಯನ್ನು ಬಗೆಹರಿಸಲು ಅಮೇರಿಕ, ಬ್ರಿಟನ್ ಮತ್ತು ಫ್ರಾನ್ಸುಗಳು ವಿಶೇಷ ಪ್ರಯತ್ನ ಮಾಡುವುದರ ಸಲುವಾಗಿ ಬಂದಾದ ಮೇಲೊಂದರಂತೆ ರಾಜತಾಂತ್ರಿಕ ಪರಿಷತ್ತುಗಳನ್ನು ವಾಶಿಂಗ್‌ಟನ್ನಿನಲ್ಲಿ ಕರೆಯಲಾಗಿದೆ.

ಸ್ಪೇನಿಗೆ ಪಾಕ್ಷಿಕ ಮನ್ನಣೆಯನ್ನು ಕೊಡಬೇಕೆಂಬುದರ ಬಗ್ಗೆ ಸಂ. ರಾ. ಸಂಘ ಅನುಕೂಲಾಭಿಪ್ರಾಯ ತಾಳಬಹುದೆಂದೂ ಆದರೆ ಆಗ ಅತ್ಯಂತ ಉಗ್ರವಾದ ಚರ್ಚೆ ನಡೆಯಬಹುದೆಂದೂ ರಾಜಕಾರಣಿಗಳೆನ್ನುತ್ತಿದ್ದಾರೆ.

ನ್ಯೂಫೌಂಡ್‌ಲೆಂಡ್ ಬ್ರಿಟನ್ನಿನ ಅತಿ ಪ್ರಾಚೀನ ಉಪನಿವೇಶವಾಗಿದ್ದು, ಅದೀಗ ಕೆನ… ಸೇರಿದ ಬಳಿಕ ತತ್ಪರಿಣಾಮವಾಗಿ ಆದ ಕೆನಡದ ಮಂತ್ರಿಮಂಡಲದಲ್ಲಿಯ ಬದಲಾವಣೆಗಳನ್ನು ಮುಖ್ಯ ಮಂತ್ರಿ ಲೂಯಿ ಸೇಂಟ್ ಲಾರೆಂಟರು ಪ್ರಕಟಪಡಿಸಿದರು.

ಭಾರತ ಮತ್ತು ಏಶಿಯಗಳ ಜನರೊಡನೆ ಇರುವ ಬ್ರಿಟನ್ನಿನ ಮಿತ್ರತ್ವವು ಜಗತ್ತನ್ನು ಸರ್ವಾಧಿಕಾರಿತ್ವದಿಂದ ಉಳಿಸಿದೆಯೆಂದು ಬ್ರಿ. ವಿದೇಶ ಮಂತ್ರಿ ಶ್ರೀ ಅರ್ನೆಸ್ಟ್ ಬೆವಿನ್ನರು ವಾಶಿಂಗ್‌ಟನ್ನಿನಲ್ಲಿ ಸಾರಿದರು.

ಇಸ್ರೇಲಿಗೆ ಎಚ್ಚರಿಕೆ ಕೊಟ್ಟ ಸಂಯುಕ್ತ ರಾಷ್ಟ್ರಸಂಘದ ಅನುಸಂಧಾನ ಸಮಿತಿಯು … ಸರಕಾರೀ ಶಾಖೆಗಳ ಕಾರ್ಯಾಲಯ… ಜೆರೂಸಲೇಮಿಗೆ ಸಾಗಿಸಬಾರದೆಂದು … ವಿತ್ತಿರುವುದಾಗಿ ಅಧಿಕೃತ ವರ್ಗದ… ಲಾಗುತ್ತಿದೆ.

ಚೀನದ ಸರಕಾರೀ ಮತ್ತು … ನಿಸ್ಟ ದಲಗಳ ನಡುವೆ ಶ್ಯಾನ… ಪಶ್ಚಿಮದಲ್ಲಿ ಘನಘೋರ ಸಂಗ್ರಾಮ … ತ್ತಿದೆ. ನಿರಾಶ್ರಿತರು ಗಾಬರಿಗೇಡಾಗಿ … ನಿಂದ ದಿಕ್ಕೆಟ್ಟು ಓಡುತ್ತಿದ್ದಾರೆ.

ಸರಕಾರದ ೬ ಸದಸ್ಯರ ಸಂಧಾನ … ಪೀಪಿಂಗಿಗೆ ತಲುಪಿತು. ಆದರೆ ಕಮ್ಯು… ಪ್ರತಿನಿಧಿಗಳು ಯುದ್ಧ ನಿಲ್ಲಿಸಿ … ಈಗ ಅವರನ್ನು ಭೆಟ್ಟಿಯಾಗು… ನಿರ್ದಿಷ್ಟವಾಗಿದೆ.

ಸರ್ ರಾಮಸ್ವಾಮಿ ಮೊದಲಿ… ಬೋಸ್ಟನ್ನಿನಲ್ಲಿ ಜಗತ್ತಿನ ಹಿಂದುಳಿದ… ಪರವಾಗಿ ಅರಿಕೆಮಾಡಿಕೊಂಡಾಗ … ಸಾವಿರದಷ್ಟು ವಿಶ್ವವಿದ್ಯಾನಿಲಯಗಳ … ಅವರಿಗೆ ಹಾರ್ದಿಕ ಬೆಂಬಲವನ್ನು ವ್ಯ…ದರು.

ಕಮ್ಯುನಿಜಮ್ಮನ್ನು ಹೊಡೆ…ಸಲು ಏಶಿಯದ "ಮಾರ್ಶ… ಯೋಜನೆ"ಯ ಮೂಲಕ ನೂರು … ಡಾಲರುಗಳನ್ನು ಕೊಡಬೇಕೆಂದು ಕಳೆ… ಅಧ್ಯಕ್ಷ ಚುನಾವಣೆಗೆ ನಿಂತಿದ್ದ ರಿ… ಹುರಿಯಾಳಾದ ಶ್ರೀ ಹೆರಾಲ್ಡ ಸ್ಟಾ… ವಿನಂತಿಸಿದರು.

ದಕ್ಷಿಣ ಆಫ್ರಿಕದ ಶಾಸನಸಭೆ… ವಿರೋಧಿ ಪಕ್ಷದ ಮುಖಂಡರಾದ … ಮಾರ್ಶಲ್ ಸ್ಮಟ್ಸರು ಮುಂದಿಟ್ಟ … ಆಫ್ರಿಕದ ಪ್ರತಿನಿಧಿಗಳಿಗೆ ಸಮಾನಪಕ್ಷ… ಕೊಡಬೇಕೆಂಬ ತಿದ್ದುಪಡಿ ಅಂಗೀ…ಯಿತು.

ಏಶಿಯ ಮತ್ತು ಶಾಂತಿಸಾಗರ … **ಅಂತಾರಾಷ್ಟ್ರೀಯ ಅರಣ್ಯ… ಕಟ್ಟಿಗೆ ಬಳಕೆಯ ಪರಿಷತ್ತು** … ನಲ್ಲಿ ಶ್ರೀ ಟಿ. ವಿಜಯರಾಘವಾ… ಅಧ್ಯಕ್ಷತೆಯಲ್ಲಿ ಮಾರ್ಚ ೩ರಲ್ಲಿ ಸೇರಿ…

ಇಂಡೊನೇಶಿಯದಲ್ಲಿಯ ಸಂ… ಸಂಘದ ಸುದ್ದಿಗಾರನ ಪ್ರಕಾರ ಪರಿಸ್ಥಿ…ತೆಯೇ ಇದೆಯೆಂದೂ ಪ್ರಜಾರಾ… ಕಊಟಯುದ್ಧವು ಯಥಾವತ್ತಾಗಿ ಸಾಗಿದೆ… ತಿಳಿದುಬರುತ್ತದೆ.

ಸಿರಿಯದಲ್ಲಿ ರಾಷ್ಟ್ರೀಯವಾದಿ … ಹುಸ್ನಿ ಜೈಮನು ೪೮ ಗಂಟೆಗಳಲ್ಲಿ ಅಧಿ… ಸೆರೆಹಿಡಿದು ರಕ್ತಪಾತವಿಲ್ಲದೆ ಅಧಿಕಾ… ಕೈಗೆ ತೆಗೆದುಕೊಂಡನು. ಆವನು ನ… ಳಲ್ಲಿ ಚುನಾವಣೆ ನಡೆಸಿ "ಪ್ರಜಾಸ… ಸಂಮಿಶ್ರ ಸರಕಾರ"ವನ್ನು ಸ್ಥಾಪಿಸು… ರಾಜಕೀಯ ವರ್ಗಗಳಲ್ಲಿ ಹೇಳಲಾಗ…

ಭಾರತದ ವಿದೇಶಶಾಖೆಯ ಉ… ಗಳಾದ **ಡಾ. ಬಿ. ವಿ. ಕೇಸ್ಕರರು** … ದಿನಗಳಲ್ಲಿ ರಂಗೂನ್, ಸಿಂಗಾಪುರ, … ಕಾಕ್ ಮತ್ತು ಸೈಗಾನುಗಳಿಗೆ ಭೆಟ್ಟಿ … ರೆಂದು ತಿಳಿಯುತ್ತದೆ.

ಅನುಕರಣೀಯ ಪಾತಿವ್ರತ್ಯ

೧೯೩೯ ರಲ್ಲಿ ಲೆಸ್ಲಿ ಮತ್ತು ಮೇರಿ ಎಂಬಿಬ್ಬರು ಪ್ರಣಯಿಗಳು ಮದುವೆಯಾಗಲು ಸಿದ್ಧತೆ ನಡೆಸುತ್ತಿರುವಾಗ ಮದುವೆಗೆಂದು ನಿಶ್ಚಯಿಸಿದ ಮುಂಚಿನ ದಿನ ಲೆಸ್ಲಿಗೆ ಅಕಸ್ಮಾತ್ತಾಗಿ ಮೂರ್ಛಾರೋಗ ಪ್ರಾಪ್ತಿಯಾಯಿತು. ಲೆಸ್ಲಿಯು ಆಸ್ಪತ್ರೆಗೆ ಹೋದನು. ಸ್ವಲ್ಪ ಮಟ್ಟಿಗೆ ಗುಣ ಹೊಂದಿ ಮನೆಗೆ ಬಂದರೂ ಕೈಕಾಲುಗಳನ್ನು ಆಡಿಸಲು ಅವನಿಗೆ ಬರುತ್ತಿದ್ದಿಲ್ಲ. ಆದರೂ ಆ ಸುಂದರನ ಪ್ರೀತಿ ಪೂರ್ಣವಾದ ಮಂದಸ್ಮಿತಕ್ಕೆ ಕುಂದು ಬಂದಿರಲಿಲ್ಲ. ಅವನ ಬಗ್ಗೆ ಅನೇಕ ಗೆಳೆಯ ಗೆಳತಿಯರು ಅನುಕಂಪ ತೋರಿ ನೆರವಾಗುತ್ತಿದ್ದರು.

ಹೀಗೆ ೯ ವರ್ಷಗಳು ಕಳೆದವು. ಮೇರಿ ಅವನ ಆರೈಕೆಯನ್ನು ಸ್ವತಃ ಕೈಕೊಂಡ… ಅವಳ ತಪಸ್ಸಿನ ಫಲವಾಗಿಯೋ ಇಂದಿನ … ಬೀಗ … ಶಿಬಿರದ ಕೆಲ ನಿರಾಶ್ರಿತರು ತೋಲಿಗಂಜದಲ್ಲಿನ ಕೆಲ ಪಡಭೂಮಿಗಳನ್ನು ಆಕ್ರಮಿಸಿ, ಅಲ್ಲಿ ಸರಕಾರದ ಅಥವಾ ಆ ಭೂಮಿಯ ಒಡೆಯರ ತಿಳಿವಳಿಕೆಯಾಗಲಿ ಒಪ್ಪಿಗೆಯಾಗಲಿ ಇಲ್ಲದೆ ಗುಡಿಸಲುಗಳನ್ನು ಕಟ್ಟಿಕೊಂಡು, ಈ ನ್ಯಾಯ

ಸುಳ್ಳುಗಾರ್ತಿಯರು

ಇಂಗ್ಲೆಂಡಿನ ಸಾಮರ್‌ಸೆಟ್ … ವ್ಯಾಕರಣ ಶಾಲೆಯ ಮುಖ್ಯಾ… ಕುಮಾರಿ ಜಿನಿಕಲ್ಸಳು ಶಾಲೆಯ ವಾ…ತ್ಸವದ ದಿನ ಭಾಷಣ ಮಾಡುತ್ತ ನ…ರಲ್ಲಿ ಸುಳ್ಳುಗಾರ್ತಿಯರಿಂದು ಬಹಳ…ತ್ತಿದ್ದಾರೆ, ಅತಿ ಚಿಕ್ಕ ಚಿಕ್ಕ ಸಂಗ… ಸುಳ್ಳು ಹೇಳಿಯೇ ತಪ್ಪಿಸಿಕೊಳ್ಳು… ಇದು ದಿನೇ ದಿನೇ ವೃದ್ಧಿಯಾಗುತ್ತಿ… ಶಿಕ್ಷಾದಕರ— ಎಂದಳು. … ಪಾಲಕ … ಮುಚ್ಚಿಕೊಳ್ಳ… ಎಂದು … ಬೇಕಲ್ಲದೆ ಸ್ವಾ… ಈ ಅಕ್ರಮಣವನ್ನು ನಿವಾ…ಬೇಕು. ಹೀಗೆ ಮಾಡುವದರಿಂದ ಗಾ…ಜಿಯ ಭಸ್ಮಕ್ಕೆ ಅಪಮಾನವಾಗಲಾರದು. …ಲಿಗೆ ಅವರ ಇಚ್ಛೆಯನ್ನೆ ಪಾಲಿಸಿದಂತಾ…ಲ್ಲದೆ ಜನರಿಗೊಂದು ಬಗೆಯ ಶಿಕ್ಷಣವೂ …ಸೀತು. ಇದು ಪ್ರತಿಷ್ಠೆಯಲ್ಲ, ನಂದಿರವ… ಭ್ರಷ್ಟಗೊಳಿಸುವನು.

..ಪ್ರಾರ್ಥೀ…

ಗ್ರಹಗಳ ಮುನ್ನೋಟ

ಎಪ್ರಿಲ ೧೧ ರಿಂದ ೧೭ ರ ವರೆಗೆ

ಜ್ಯೋತಿಷಿ :—ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ಈ ವಾರದಲ್ಲಿ ನಿಮ್ಮ ಗ್ರಹಗತಿ ಹೆಚ್ಚು ಕಡಿಮೆ ಕಳೆದ ವಾರದಂತೆಯೆ ಕ್ಲೇಶಕರ ವಾಗಿರುತ್ತದೆ. ಈಯೊಂದು ವಾರವನ್ನು ಧೈರ್ಯ ದಿಂದ ದಾಟಿದರೆಂದರೆ ಮುಂದೆ ಕೆಲ ಕೆಲವು ಅಂಶಗಳು ಸುಧಾರಿಸುವವು. ಸದ್ಯಕ್ಕಂತೂ ನಿಮ್ಮಿಬ್ಬರ ಪ್ರಕೃತಿಯೂ ಅಷ್ಟಕ್ಕಷ್ಟೆ. ಮಕ್ಕಳು, ಬಂಧುಗಳು ನೆರೆಹೊರೆಯವರೆಲ್ಲರೂ ನಿಮ್ಮನ್ನು ಚಿಟ್ಟಿ ಸತೆ-ಸುಡಿಗಳಿಂದ ಕಾಡುವ ವರು. ಉದ್ಯೋಗದಲ್ಲಿ ತುಂಬ ಲಾಭ ಬಂದರೂ ಜಿತ್ತದ ಬುಟ್ಟಿಯಲ್ಲಿ ನೀವು ತುಂಬುವ ಪ್ರಯತ್ನದಂತೆ ನಿಮ್ಮ ಆರ್ಥಿಕ ಸ್ಥಿತಿಯಾಗು ವದು. ವಾದ ಸ್ಪರ್ಧೆಗಳಲ್ಲಿಯೂ ಮಧ್ಯಮವೇ. ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಪತ್ರ ವ್ಯವಹಾರ ನಿಷ್ಪ್ರಯೋಜಕ. ಅಶ್ವಿನಿ ಮತ್ತು ಭರಣಿಗಳ ೩, ೪ ನೇ ಪಾದಗಳಲ್ಲಿ ಹುಟ್ಟಿದ ವರಿಗೆ ಅದೃಷ್ಟದಲ್ಲೆ ತುಸು ಸೌಖ್ಯ. ತಾ. ೧೩, ೧೪, ೧೫ ಅನುಕೂಲ.

ವೃಷಭ

ಈ ವಾರದ ಸದುಪಯೋಗವನ್ನು ಚನ್ನಾಗಿ ಮಾಡಿಕೊಳ್ಳಿರಿ. ಮುಂದಿನ ವಾರದಿಂದ ನಿಮ್ಮ ಮೇಲೆ ಗ್ರಹದ ಪ್ರೀತಿ ಇಷ್ಟು ಉಳಿಯಲಿಕ್ಕಿಲ್ಲ. ಈ ವಾರ ಪ್ರಕೃತಿ, ಪ್ರಾಪಂಚಿಕ ಸುಖ, ಲಾಭ ಎಲ್ಲವೂ ಬಯಸಿದಂತಿರುವದು. ಆದ ನೆಚ್ಚ ಗಳು ಸತ್ಕಾರ್ಯ, ಧರ್ಮ ಕಾರ್ಯಗಳಿಗಾಗಿ. ವ್ಯಾಪಾರದಲ್ಲಿ ಅನುಕೂಲ ಮಾತುಕತೆ. ಕೋರ್ಟು ಕಚೇರಿ ಸ್ಪರ್ಧೆಗಳೇ ಮೊದಲಾದ ಕೆಲಸಗಳನ್ನು ಸಾಧ್ಯವಿದ್ದರೆ ಈ ವಾರವೇ ಮುಗಿಸಿರಿ. ಪ್ರವಾಸ ಒಳಿತಲ್ಲ, ಪತ್ರವ್ಯವ ಹಾರ ಅನುಕೂಲ. ರೋಹಿಣಿಯ ಕೊನೆಯ ೩ ಮತ್ತು ಮೃಗಶಿರದ ೧ ನೇ ಚರಣಗಳಿಗೆ ತುಂಬ ಉನ್ನತಿ ಕಾಲ. ತಾ. ೧೧, ೧೨, ೧೬ ಹಿತ.

ಮಿಥುನ

ಕಳೆದ ವಾರಗಳಂತೆ ಈ ವಾರವೂ ನಿಮಗೆ ಮಧ್ಯಮ ಫಲಗಳು. ಹೆಂಡತಿ ಮಕ್ಕಳಿಗೆ ಸ್ವಲ್ಪ ಅಸ್ವಸ್ಥವಾಗಬಹುದು. ನಿಮಗೆ ಮಾತ್ರ ಪೂರ್ಣಾರೋಗ್ಯ. ಪ್ರಾಪಂಚಿಕ ಸುಖ ಚನ್ನಾ ಗಿದೆಯೆನ್ನಲಡ್ಡಿಯಿಲ್ಲ. ಉದ್ಯೋಗದಲ್ಲಿ ಪ್ರಗತಿ ಉತ್ತಮವು, ಲಾಭ ಮಧ್ಯಮ. ನೌಕರರಾಗಿದ್ದ ವರಿಗೆ ತ್ರಾಸವೆ. ಸ್ವತಂತ್ರ ವೃತ್ತಿಯವರಿಗೆ ಯಾವ ತೊಂದರೆಯಿಲ್ಲ. ವಾದ, ಸ್ಪರ್ಧೆ ಗಳಲ್ಲಿ ಮಧ್ಯಮಾವಸ್ಥೆ. ಪ್ರವಾಸ ಹಿತಕರ ವಾಗುವದು. ಭೆಟ್ಟಿ ಮತ್ತು ಪತ್ರವ್ಯವ ಹಾರಕ್ಕೆ ಅನುಕೂಲ ಕಾಲವಲ್ಲ. ಆರ್ದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೆ ಚರಣಗಳಿಗೆ ಅನಿಷ್ಟ ಫಲಗಳ ಬಾಧೆ ಕಡಿಮೆ. ತಾ. ೧೩, ೧೪, ೧೫ ಅನುಕೂಲ.

ಕರ್ಕ

ಹೆಂಡತಿಯ ಪ್ರಕೃತಿಗೆ ತುಸು ಕ್ಲೇಶವಿರುವ ದನ್ನು ಬಿಟ್ಟರೆ ನಿಮಗೆ ಈ ವಾರ ತುಂಬ ಅನು ಕೂಲವೆ. ಮಕ್ಕಳಲ್ಲೊಬ್ಬನ ಉನ್ನತಿ. ಉದ್ಯೋಗದಲ್ಲಿ ಲಾಭ, ಪ್ರತಿಷ್ಠೆಯೆರಡೂ ಯತ್ತೇಷ್ಟವಾಗಿ ಲಭಿಸುವದಲ್ಲದೆ ಆಕಸ್ಮಾತ್ ಲಾಭಗಳೂ ಆಗಬಹುದು. ವಾದ ಸ್ಪರ್ಧೆ ಗಳಲ್ಲಿ ಈ ವಾರ ನಿಮ್ಮ ಕೈಹಿಡಿಯುವವರಿಲ್ಲ. ಇಷ್ಟು ಒಳ್ಳೆ ಕಾಲ ಮುಂದೆ ದುರ್ಲಭ ವಾದೀತು. ಪ್ರವಾಸ, ಭೆಟ್ಟಿ ಅನುಕೂಲ. ಪತ್ರ ವ್ಯವಹಾರದಿಂದ ಲಾಭವಿಲ್ಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷೆಯ ೧ ನೆ ಚರಣಗಳಿಗಂತೂ ಯಾವ ತೊಂದರೆಯೂ ಇಲ್ಲ. ತಾ. ೧೧, ೧೨, ... ೧೭ ಅನುಕೂಲ.

ಸಿಂಹ

... ಸಮ... ನಿಮ್ಮ ಮುಂದಿನ ವಾರ ಪ್ರಸ... ಅನುಕೂಲ. ನಿಮ್ಮ ಬೇಕೆಂ... ಸಾ... ಪ್ರ... ಒಂದ... ಅದಕಕೆಯ ವ್ಯವ... ಬೇಕಾಗುವದೆಂದು ನಮ್ಮ ಕಡೆ ತಕ್ಷಣ...

ಕೆಲಸಗಳಿಗೆ ಒಳ್ಳೆ ಸಮಯವಲ್ಲ. ಮಖೆ ಮತ್ತು ಪೂರ್ವೆಗಳ ೩ ನೆ ಮತ್ತು ೪ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೧, ೧೩, ೧೬, ೧೪ ಅನುಕೂಲ.

ಕನ್ಯಾ

ನಿಮ್ಮ ಮತ್ತು ಪತ್ನಿಯ ಪ್ರಕೃತಿ ಚನ್ನಾಗಿ ದ್ದರೂ ಮಕ್ಕಳಲ್ಲೊಬ್ಬರದು ಕೆಡಬಹುದು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆ ಇಳಿಮುಖ. ಕೊಡುವಕೊಳ್ಳುವ ವ್ಯವಹಾರದಲ್ಲಿ ದುರ್ಲಾಭ ಮಾಡಿಕೊಳ್ಳುವ ಪ್ರವೃತ್ತಿ. ವಾದ ಸ್ಪರ್ಧೆಗಳಲ್ಲಿ ಈ ವಾರದಲ್ಲಿದ್ದಷ್ಟು ಮುಂದಿನ ವಾರ ಅನುಕೂಲತೆಯಿರದು. ಸುಖ ಪ್ರವಾಸ. ಭೆಟ್ಟಿ, ಪತ್ರವ್ಯವಹ್ಹಾರ ಅಷ್ಟಕ್ಕಷ್ಟೆ. ಹಸ್ತದ ಕೊನೆಯ ೩ ಮತ್ತು ಚಿತ್ರೆಯ ೧ ನೆ ಚರಣ ಗಳಿಗೆ ಅನಿಷ್ಟ ಕಡಿಮೆ. ತಾ. ೧೧, ೧೩, ೧೬, ೧೭ ಅನುಕೂಲ.

ತುಲಾ

ನಿಮ್ಮ ಅದೃಷ್ಟ ಸ್ಪಷ್ಟವಾಗಿ ಸುಧಾರಿಸಲು ಇನ್ನೂ ಕೆಲದಿನ ಬೇಕು. ಸದ್ಯಕ್ಕಂತೂ ಪ್ರಕೃತಿ ಸುಖವೂ ಅಷ್ಟೇ. ಪ್ರಾಪಂಚಿಕ ತಾಪ ತ್ರಯಗಳು ಹೆಚ್ಚುತ್ತಲೇ ಹೋಗುವವು. ಉದ್ಯೋಗದಲ್ಲಿ ಹಿಂದೇಟು. ಅಪ್ರತಿಷ್ಠೆಯ ಭಯ. ಲಾಭದ ಬದಲಿಗೆ ನಷ್ಟವನ್ನು ಲೆಕ್ಕ ಮಾಡುವ ಅವಸ್ಥೆ. ವಾದ ಸ್ಪರ್ಧೆಗಳಲ್ಲಿ ಯಥಾಸ್ಥಿತಿ. ಮಿತ್ರರೂ ಶತ್ರುಗಳಂತಾಗು ವರು. ಸುಳ್ಳು ಸುದ್ದಿಗಳನ್ನು ನಂಬಿ ಗಾಬರಿ ಯಾಗಬೇಡಿರಿ. ಪ್ರವಾಸಾದಿ ಕಾರ್ಯಗಳಿಗೆ ಕೈ ಹಾಕದಿದ್ದರೇ ಕ್ಷೇಮ. ಸ್ವಾತಿಯ ಕೊನೆಯ ೩ ಮತ್ತು ವಿಶಾಖೆಯ ೧ ನೇ ಚರಣಗಳಿಗೆ ಅಷ್ಟು ಕಾಟವಿಲ್ಲ. ತಾ. ೧೪, ೧೫, ೧೬ ಅನು ಕೂಲ.

ವೃಶ್ಚಿಕ

ಮನೆಯಲ್ಲಿ ಎಲ್ಲರ ಪ್ರಕೃತಿಯೂ ಚನ್ನಾ ಗಿದ್ದರೂ ಪರವೂರಿನಲ್ಲಿರುವ ಬಂಧುಗಳ ಅನಾ ರೋಗ್ಯದಿಂದ ಚಿಂತೆ. ಉಳಿದೆ ಪ್ರಾಪಂಚಿಕ ಸುಖ ಚನ್ನಾಗಿದೆ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಗೆ ಕಲಂಕ ಬಂದೀತು. ವಾದ ಸ್ಪರ್ಧೆಗಳ ನಿರ್ಣಯವನ್ನು ಮುಂದೆ ತಳ್ಳಗೊಡಬೇಡಿರಿ. ಈಗಲೇ ನಿಮಗೆ ಅನು ಕೂಲ. ಭೆಟ್ಟಿ ಬೇಡ, ಪತ್ರವ್ಯವಹಾರವೇ ಸಾಕು. ಪ್ರವಾಸ ಸುಖಕರ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠೆಯ ೧ ನೆ ಚರಣ ಗಳು ಅಷ್ಟು ಚಿಂತಿಸುವ ಕಾರಣವಿಲ್ಲ. ತಾ. ೧೧, ೧೩, ೧೬, ೧೭ ಅನುಕೂಲ.

ಧನು

ತೋಟಿ ಸಿಂಗಾರ ಒಳಗೆ ಗೋಳೀಸೊಪ್ಪು ಎಂಬಂತೆ ಹೊರಗೆ ಎಲ್ಲವೂ ಚನ್ನಾಗಿದ್ದರೂ ಮನಃಕ್ಲೇಶಗಳು ನಿಮ್ಮನ್ನು ಕೊರೆಯುವವು. ಮಕ್ಕಳದೆಸೆಯಿಂದ ಲೋಕಾಪವಾದ ಬರ ಬಹುದು. ಉದ್ಯೋಗದಲ್ಲಿ ಲಾಭ ಮತ್ತು ಪ್ರತಿಷ್ಠೆ ಚನ್ನಾಗಿದ್ದರೂ ನಿಮ್ಮ ವಿರುದ್ಧ ತಂತ್ರ ಗಳು ನಡೆಯಬಹುದು. ವಾದ ಸ್ಪರ್ಧೆಗಳಲ್ಲಿ ಯಶ ದೊರೆಯಬೇಕಾದರೆ ತುಂಬ ಖರ್ಚು ಮಾಡಬೇಕಾಗುವದು. ಮಿತ್ರರು ದುರುದ್ದೇಶ ದಿಂದ ವರ್ತಿಸುವರು. ಪ್ರವಾಸ ಕಷ್ಟದ್ದು. ಭೆಟ್ಟಿ ಪತ್ರವ್ಯವಹಾರಗಳೆರಡೂ ಅನುಕೂಲ. ಮೂಲ ಮತ್ತು ಪೂರ್ವಾಷಾಢಗಳ ೩ ಮತ್ತು ೪ ನೆ ಚರಣಗಳಿಗೆ ಅನಿಷ್ಟ ಕಡಿಮೆ. ತಾ. ೧೧, ೧೩, ೧೬, ೧೪ ಅನುಕೂಲ.

ಮಕರ

ಕೆಲ ದಿನಗಳ ವರೆಗೆ ನಿಮ್ಮ ಗ್ರಹಗತಿ ಹೆಚ್ಚು ಕಡಿವೆ... ಶುಕ್ರನ ದಿಂದಲ... ಗಳು ನಿಮಗೆ ... ಗಿಂತ ... ಮತ್ತು ಮಕ್ಕಳ ಪ್ರಕೃತಿ ... ಬೇಕು. ಹೆಂಡತಿಯದು ಸರಿಯಾಗಿರುವದು. ... ಪ್ರಾಪಂ...

ತುರ್ಕಿಯ ಹೆಂಗಸರು

ತುರ್ಕಿಯ ಆಧುನಿಕ ಇತಿಹಾಸದಲ್ಲಿ ಮೊದಲ ಸಲ ಅಲ್ಲಿಯ ಹೆಂಗಸರು ಬಂದೂಕು ಹಿಡಿದು ಯುದ್ಧ ಮಾಡಲು ಕಲಿತಿದ್ದಾರೆ. ಶುಶ್ರೂಷಾ ವಿದ್ಯೆಯಿಂದ ಪ್ರಾರಂಭಿಸಿ ಸರಕಾರ ಅವರಿಗೆ ಯುದ್ಧವಿದ್ಯೆಯ ವರೆಗೆ ಕಲಿಸಿ ಸ್ವದೇಶ ರಕ್ಷ ಣೆಗೆ ಸಿದ್ಧರನ್ನಾಗಿ ಮಾಡಿದೆ.

ಇಸ್ತಾಂಬೂಲು, ಅಂಕಾರ ಮತ್ತು ಇಜ್ಮೀ ರಿನ ೭೦೦ ವಿಶ್ವವಿದ್ಯಾಸಿಲಯದ ವಿದ್ಯಾರ್ಥಿನಿ ಯರನ್ನು ದೇಶರಕ್ಷಣೆಯ ಸಿದ್ಧತೆಗಾಗಿ ಸೈನ್ಯಕ್ಕೆ ಸೇರಿಸಿಕೊಳ್ಳಲಾಯಿತು. ಹೀಗೆ ಮಾಡಲು ತುರ್ಕಿ ಸರಕಾರಕ್ಕೆ ಕಳೆದ ಮಹಾಯುದ್ಧದಲ್ಲಿ ಇಂಗ್ಲೆಂಡ್, ಮತ್ತು ಅಮೇರಿಕಗಳು ಹೆಂಗಸ ರನ್ನು ದೇಶರಕ್ಷಣೆಗೆ ಸೈನ್ಯ ಸಹಾಯದ ರೂಪ ವಾಗಿ ಬಳಸಿಕೊಂಡದ್ದೇ ಉದಾಹರಣೆ ಯಾಯಿತು. ಸೈನಿಕ ಯುವತಿಯರೀಗ ವಿಮಾನ ವಿರೋಧಕ ಕಾರ್ಯ, ರಾಡರ್ ಚಟು ವಟಿಕೆ, ಸಂಪರ್ಕ, ಸಾರಿಗೆ ಮತ್ತು ಪೂರಯಿಕೆ ಗಳಲ್ಲಿ ತರಬೇತು ಪಡೆದಿದ್ದಾರೆ.

ಹಿಂದುಸ್ತಾನದ ಪಟ್ಟಣಸ್ಥ ನಿರುದ್ಯೋಗಿಗ ಳಿಗೆ ಮೇಲಿನದೊಂದು ಅತ್ಯುತ್ತಮ ಉದಾಹರ ಣೆಯಾಗಿದೆ. ಸದ್ಯಃ ಹಿಂದೀ ಸರಕಾರ ಮುಖ್ಯ ಸೈನ್ಯವಲ್ಲದೆ ಪ್ರಾಂತಗಳಲ್ಲಿ ಒಳ ಸೈನ್ಯವನ್ನು ಕಟ್ಟುವ ಆಲೋಚನೆಯನ್ನು ಮಾಡುತ್ತಿರುವ ಸುದ್ದಿ ಬಂದಿದೆ. ಗಂಡಸರೊಡನೆ ಸಮತೆ ತಮ ಗಿಲ್ಲವೆಂಬ ಅಧ್ಯಾಸಕ್ಕೊಳಗಾದ ದೇಶಸೇವಾ ಸಕ್ತ ನಿರುದ್ಯೋಗಿ ಯುವತಿಯರಿಗೆ ಯುದ್ಧ ವಿದ್ಯೆಯಲ್ಲಿ ತರಬೇತು ಹೊಂದುವದು ಮತ್ತು ಶುಶ್ರೂಷಾಸಂಸ್ಥೆಗಳಲ್ಲಿ ಕೆಲಸ ಮಾಡುವುದು ನಾಗರಿಕ ಮತ್ತು ಮರ್ಯಾದೆಯ ಕೆಲಸ ವಲ್ಲವೆ?

ಬ್ರಿಟಿಶರು ಮತ್ತು ಸಾಮ್ರಾಜ್ಯ

ಬ್ರಿಟಿಶ ಜನಸಾಮಾನ್ಯರಿಗೆ ತಮ್ಮ ವಸಾ ಹತುಗಳು ಮತ್ತು ಸಾಮ್ರಾಜ್ಯದ ಬಗ್ಗೆ ಇರುವ ಅಗಾಧ ಅಜ್ಞಾನಕ್ಕೆ ಬ್ರಿಟಿಶ ವಸಾ ಹತು ಉಪಮಂತ್ರಿ ಡಿ. ಆರ್. ರೀಸ್ ವಿಲಿ ಯಮ್ಸರ ಈ ವಾಕ್ಯವೇ ಸಾಕ್ಷಿ: "ಈ ದೇಶ ದಲ್ಲಿ ಇನ್ನೂ ಉಳಿದಿರುವ ಅನೇಕ ಅಭಾವಗಳಲ್ಲಿ ವಸಾಹತುಗಳ ಬಗ್ಗೆ ಇರುವ ಅಗಾಧ ಜ್ಞಾನಾ ಭಾವವೂ ಒಂದಾಗಿದೆ." ಈಚೆಗೆ ನಡೆಸಿದ ಒಂದು ಪರಿಶೀಲನೆಯಿಂದ ಬ್ರಿಟಿಶ ಜನರಲ್ಲಿ ನೂರಕ್ಕೆ ಮೂವರು, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು ಇನ್ನೂ ಬ್ರಿಟಿಶರ ಅಧೀನವಾ ಗಿಯೆ ಇವೆಯೆಂದು ನಂಬಿದ್ದಾರಂತೆ. ಸಂಸ್ಥಾನ ಗಳು ಸ್ವತಂತ್ರವಾಗಿ ೧೫೦ ವರ್ಷಗಳಾಗಿ ದ್ದರೂ ಆ ಸುದ್ದಿ ಇವರಿಗೆ ಗೊತ್ತಿಲ್ಲ!

ಹೆರಿಗೆಗೆ ಅನುಕೂಲ

ಪ್ರಸವ ವೇದನೆ ಅಸಹ್ಯಕ ಎಂದು ಪ್ರತೀತಿ ಯಿದೆ. ಹಿಂದಿಗಿಂತ ಇಂದು ವೈದ್ಯಶಾಸ್ತ್ರ ಬಹಳ ಮುಂಬರಿದಿದೆ ಎಂದು ಹೇಳಿಕೊಳ್ಳ ಲಾಗುತ್ತಿದ್ದರೂ ಪ್ರಸವದಲ್ಲಿ ಹಾನಿ ಹೊಂದುವ ಮಹಿಳೆಯರ ಸಂಖ್ಯೆ ಮೊದಲಿಗಿಂತ ಹೆಚ್ಚೆನ್ನ ಬೇಕಲ್ಲದೆ ಕಡಿಮೆಯೆನ್ನಲಳವಲ್ಲ. ಇದನ್ನು ಕಂಡು ಅಮೇರಿಕದ ಸಂಯುಕ್ತ ಸಂಸ್ಥಾನದ ಮಿಚಿಗನ್ ಆಸ್ಪತ್ರೆ Caudal Anaesthesia ಎಂಬ ದ್ರವ್ಯದ ಬಳಕೆಯಿಂದ ನೂರರಲ್ಲಿ ೮೦ ಜನರಿಗೆ ಹೆರಿಗೆ ಏನೂ ನೋವಿಲ್ಲದೆ ಆಗುವಂತೆ ಮಾಡಿದೆ.

ಕುಂಭ

ಎಲ್ಲರೂ ಸೌಖ್ಯವಾಗಿದ್ದರೂ ಸುಮ್ಮನೆ ಅಂತಃಕಲಹದಿಂದ ಮನಸು ಕೆಡಿಸಿಕೊಳ್ಳುವಿರಿ. ಪ್ರಿಯ-ಅಪ್ರಿಯ ಅತಿಥಿಗಳು ಬಂದು ಮನೆಯಲ್ಲಿ ಸೇರಿ ತುಂಬ ಭಜೀತಿಪಡುವಿರಿ. ಉದ್ಯೋಗದಲ್ಲಿ ಲಾಭಕ್ಕಿಂತ ಪ್ರತಿಷ್ಠೆ ಹೆಚ್ಚು. ಸ್ಥಾವರದಲ್ಲಿ ಅನುಕೂಲ ಮಾತುಗಳು ಘಟಿಸುವವು. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಪ್ರವಾಸಾದಿ ಕಾರ್ಯ ಗಳು ಯಶಸ್ವಿಯಾಗುವವು. ತಾ. ೧೪, ೧೫, ೧೬, ೧೭ ಹಿತ.

ಮೀನ

... ಅನುಕೂಲ ದೈವ ಇನ್ನೂ ಕೆಲ ದಿನ ... ಪ್ರಾಪಂ... ನಿಶ್ಚಿಂತರಾಗಿರಿ. ಮಕ್ಕಳ ... ಗುಣ ಹೊ... ಬಹುದಾದರೂ ಉಳಿದವರು ... ಮದುವೆಯಾದನು. ಆ ದಂಪತಿ ... ಗದಲ್ಲಿ ಚನ್ನಾಗಿ ಗೆಳೆಯ ಗೆಳತಿಯರಿಂದು ಒಂದ ... ಮೇಲಿ ... ಮಾಡುವಿರಿ. ರಂತೆ ವಿವಾಹಕಾರಿತೋಷಸ್ಸು ... ಶ್ರವಣ... ಣಾಮವಾಗಿ ... ಪ್ರವಾ ... ತ್ತಿದ್ದಾರೆ! ... ಒಲೆ ... ನೆ ಚರಣ... ಪ್ರದ ... ವಾಸಾದಿ ೧೩, ೧೬, ೧... ಚರಣ ... ೧೬,

ಬ್ರಹ್ಮೀ ಸರಕಾರದ ಸಂಕಟ

ಬಿಳಿಪಟ್ಟಿಯ ಜನತಾಸ್ವಯಂಸೇವಕ ಸಂಘವು ರಂಗೂನಿಗೆ ಇದಿರಾಗಿರುವ ಇರಾವ ತಿಯ ಉತ್ತರತೀರದ ಇಡೀ ಪ್ರದೇಶವನ್ನು ವಶಪಡಿಸಿಕೊಂಡಿದೆ. ಸರಕಾರೀ ಪೋಲೀಸರು ಹಿಂದೆ ಸರಿದ ಬಳಿಕ ನದಿಯಾಚೆಯ ದಗ್ಗಾ ಮೊದಲಾದ ಹಳ್ಳಿಗಳಲ್ಲಿ ಬಿಳಿಪಟ್ಟಿಯ ಶಿಪಾ ಯಿಗಳು ಕಾವಲಿಗೆ ಬಂದಿದ್ದಾರೆ. ದಗ್ಗಾ ಪೋಲೀಸು ಸಿಲ್ದಾಣದ ಹಳ್ಳಿಯಲ್ಲಿ ಸುಮಾರು ೩೦೦ ದಂಗೆಗಾರರು ಸ್ವಯಂಚಲ ಆಯುಧ ಗಳಿಂದ ಸರಕಾರೀ ಕಾವಲುಗಾರರನ್ನು ಜಯ ಪ್ರದವಾಗಿ ಪ್ರತಿಭಟಿಸಿದರು.

ದಂಗೆಗಾರರ ವಿಜಯವೊಂದು ಕಡೆ ಸರಕಾ ರದ ತಲೆತಿನ್ನುತ್ತಿದ್ದರೆ ಮತ್ತೊಂದೆಡೆ ಮಂತ್ರಿ ಮಂಡಲದಲ್ಲಿ ಬಿಕ್ಕಟ್ಟು ಉಂಟಾಗಿದೆ. ಅಧಿ ಕೃತ ಸುದ್ದಿಯಂತೆ ೬ ಮಂತ್ರಿಗಳು ರಾಜೀ ನಾಮೆಯಿತ್ತಿರುವರೆಂದೂ ಅದನ್ನು ಮುಖ್ಯ ಮಂತ್ರಿ ಥಾಕಿನ್ ನೂ ಅವರು ಸ್ವೀಕರಿ ಸಿದರೆಂದೂ ತಿಳಿಯುತ್ತದೆ. ರಾಜೀನಾಮೆ ಯಿತ್ತವರಲ್ಲಿ ನಾಲ್ಕುಜನರು ಸೋಶಲಿಸ್ಟರು, ಮತ್ತಿಬ್ಬರು ಹಳದಿಪಟ್ಟಿಯ ಜನತಾಸ್ವಯಂ ಸೇವಕ ಸಂಘಕ್ಕೆ ಸೇರಿದವರು. ಈ ಸಂಘವು ಸೋಶಲಿಸ್ಟ್ ಪಕ್ಷಕ್ಕೆ ಅನುಕೂಲವಾಗಿ ನಡೆ ಯತಕ್ಕ ಹಿಂಬಾಲವೇ ಆಗಿದೆ.

ಮೂಲತಃ ಜನತಾಸ್ವಯಂಸೇವಕಸಂಘ ವೊಂದೇ ಫ್ಯಾಸಿಸ್ಟ್‌ವಿರೋಧಿ ಜನತಾ ಸ್ವಾತಂತ್ರ್ಯ ಸಂಘದ ಸೈನ್ಯಬಲವಾಗಿತ್ತು. ಅದಕ್ಕೆ ಥಾಕಿನ್‌ನೂ ಅವರೇ ಅಧ್ಯಕ್ಷರು. ಆದರದು ಕಳೆದ ಬೇಸಿಗೆಯಲ್ಲಿ ಇಬ್ಭಾಗವಾಗಿ ಒಡೆಯಿತು. ಬಹುಸಂಖ್ಯವಿದ್ದ ಅವುಗಳಲ್ಲಿ ರುವ ಒಂದು ಭಾಗ ಬಿಳಿಯ ಪಟ್ಟಿಯನ್ನು ಧರಿಸಿ ಶ್ವೇತಕೇತುಗಳಾದ ಕಮ್ಯುನಿಸ್ಟರೊಡನೆ ಸೇರಿ ನೂ ಅವರ ಸರಕಾರದ ವಿರುದ್ಧ ದಂಗೆ ಯೆದ್ದಿತು. ಉಳಿದ ಅಲ್ಪಸಂಖ್ಯರುಳ್ಳ ಭಾಗವು ಹಳದಿಪಟ್ಟಿ ಧರಿಸಿ ಮೂಲ ಸಂಘಕ್ಕೂ ಸರ ಕಾರಕ್ಕೂ ವಿಧೇಯವಾಗಿ ಉಳಿಯಿತು. ಈಗಿನ ರಾಜೀನಾಮೆಯಿಂದ ಮಂತ್ರಿಮಂಡಲ ದಲ್ಲಿ ಕೇವಲ ೧೧ ಸದಸ್ಯರು ಉಳಿಯುವಂತಾ ಯಿತು.

೧೯೪೮ ರ ಜನವರಿಯಲ್ಲಿ ಥಾಕಿನ್‌ನೂ ಅವರು ಮಂತ್ರಿಮಂಡಲವನ್ನು ರಚಿಸಿದರು. ಸೆಪ್ಟಂಬರಿನ ಪುನರ್ವ್ಯವಸ್ಥೆಯಲ್ಲಿ ವಿದೇಶ ಮಂತ್ರಿಗಳಾಗಿ ಕ್ಯಾನೀನರು ಸೇರಿದರು. ಅನಂತರ ಬೇರೆ ಬೇರೆ ಅವಧಿಗಳಲ್ಲಿ ಬೇರೆಬೇರೆ ಮಂತ್ರಿಗಳು ರಾಜೀನಾಮೆಯಿತ್ತರು, ಅವರ ಸ್ಥಳಗಳಿಗೆ ಬೇರೆಯವರು ನಿಯಮಿಸಲ್ಪ ಟ್ಟರು. ಸ್ವತಃ ಥಾಕಿನ್‌ನೂ ಅವರೇ ಮಂತ್ರಿ ಮಂಡಲದ ರಾಜೀನಾಮೆ ಸಲ್ಲಿಸಿ ತಾವೊಬ್ಬರೇ ಅಧಿಕಾರದಲ್ಲಿ ಉಳಿದು ವಿರೋಧಿ ಮುಖಂಡ ರೊಡನೆ ಕಾರೆನ್ನರ, ಬಿಳಿಪಟ್ಟಿ ಜನತಾ ಸ್ವಯಂ ಸೇವಕರ ಮತ್ತು ಇತರರ ದಂಗೆಯ ವಿಷಯ ವಾಗಿ ಚರ್ಚೆ ನಡೆಸಿದ್ದರು.

ಮಂಡಾಲೆ ನಗರವನ್ನು ಸರಕಾರಿ ಸೈನಿಕರು ತಿರುಗಿ ವಶಪಡಿಸಿಕೊಂಡ ಸುದ್ದಿ ಬಂದ ೪೮ ತಾಸುಗಳಲ್ಲೆ ಕೆರೆನ್ ಬಂಡುಗಾರರು ಶರಣು ಬಂದರೆಂದು ವಾರ್ತೆ ಬಂದಿದೆ. ಈಗ ಸಂಧಾನ ಪ್ರಾರಂಭವಾಗಲಿದೆ. ಆದರೆ ವಿವಿಧ ಕಮ್ಯು ನಿಸ್ಟ್ ಸೈನ್ಯಗಳ ಚಟುವಟಿಕೆ ಮಾತ್ರ ನಿಲ್ಲುವ ದೆಂದೆನ್ನ ಬರುವದಿಲ್ಲ.

ಅಗ್ರಲೇಖ

ಭಂಗಿಗಳ ಧರ್ಮಸಂಕಟ

ಬಗೆಹರಿಸಬೇಕೆಂದು ನನ್ನೆಡೆಗೆ ಅನೇಕ ದರ್ಜೆಯ ಸಮಸ್ಯೆಗಳನ್ನು ಕಾರ್ಯಕರ್ತರೂ ಪತ್ರಕರ್ತರೂ ಕಳಿಸುತ್ತಿದ್ದಾರೆ. ಭಂಗಿಗಳ ಧರ್ಮಸಂಕಟ ಅದರಲ್ಲೊಂದು. ಅವರು ಸಮಾಜಕ್ಕೆ ಬಹಳ ಸೂಕ್ಷ್ಮವೂ ಅನಿವಾರ್ಯವೂ ಆದ ಸೇವೆಯನ್ನು ಸಲ್ಲಿಸುತ್ತಾರೆ. ನಮ್ಮ ನಗರ ಮತ್ತು ಪಟ್ಟಣಗಳಲ್ಲಿಯ ಗುಡಿಸುವ ಪರಿಸ್ಥಿತಿ ಬಹಳ ಜುಗುಪ್ಸಾಜನಕವಾಗಿದೆ. ಆದುದರಿಂದ ಈಗ ಕೊಡುವುದರ ಮೂರುಪಟ್ಟು ಹೆಚ್ಚು ಸಂಬಳ ಕೊಟ್ಟರೂ ತಮಗೆ ಹಿತವೆಂದು ತಿಳಿದು ಆ ಕೆಲಸವನ್ನು ರೂಢಿಯಾಗಿ ಇಟ್ಟುಕೊಂಡವರಲ್ಲದೆ ಮಿಕ್ಕವರಾರೂ ಅದನ್ನು ಮಾಡಲು ಮನಸ್ಸು ಮಾಡರು. ಅದರೂ ಮುಂಬಯಿ, ಅಹಮ್ಮದಾಬಾದು ಮೊದಲಾದ ದೊಡ್ಡ ನಗರಗಳಲ್ಲಲ್ಲದೆ, ಮಿಕ್ಕೆಡೆಗಳಲ್ಲಿ ಅದು ಅತಿ ಕಡಿಮೆ ಸಂಬಳದ ಕೆಲಸವೆನಿಸಿದೆ. ಕೂಲಿ ಕೆಲಸದ ಇತರ ಕ್ಷೇತ್ರಗಳಲ್ಲಿ ಕೂಲಿ ಹೆಚ್ಚಿದರೂ ಇದರ ಸ್ಥಿತಿ ಮಾತ್ರ ಇದ್ದ ಹಾಗೇ ಇದೆ.

ಅವರೇನು ಮಾಡಬೇಕು? ೧೯೪೬ ರಲ್ಲಿ ಮುಂಬಯಿಯ ಭಂಗಿಗಳು ಒಂದು ದೊಡ್ಡ ಸಂಪನ್ನು ಸಂಘಟಿಸಿದರು. ಅದಕ್ಕೆ ಸಂಬಂಧಿಸಿ ಗಾಂಧಿಯವರು ೧೯೪೬ ನೆಯ ಎಪ್ರಿಲ್ ೨೧ ರಲ್ಲಿ "ಹರಿಜನ"ದಲ್ಲಿ ಹೀಗೆ ಬರೆದರು:

"ಕೆಲ ಸಂದರ್ಭಗಳಲ್ಲಿ ಸಂಪು ಅನ್ಯಾಯವಾಗುವುದು. ಭಂಗಿಗಳ ದೂರುಗಳು ಈ ಜಾತಿಗೆ ಸೇರಿದವು."

"ನಿಮ್ಮ ಮತ್ತು ನಿಮ್ಮ ನಗರದ ಚರಂಡಿಗಳನ್ನು ಚೊಕ್ಕ ಮಾಡುವುದನ್ನು ನೀವು ಕಲಿಯಿರಿ. ಅಂಥ ಸಂದರ್ಭ ಬಂದರೆ (ಭಂಗಿಗಳು ಸಂಪು ಹೂಡಿದರೆ) ನೀವು ಗಾಬರಿಗೆಡಬೇಕಾಗಿಲ್ಲ; ತಾತ್ಕಾಲಿಕವಾಗಿ ಅವಶ್ಯಕ ಸೇವೆಸಲ್ಲಿಸಬಹುದು. ಅವರ ಮೇಲೆ ಬಲಾತ್ಕಾರ ಬರದಂತಾಗುವುದು. ಅಂಥ ಒತ್ತಡದ ಸಂದರ್ಭದಲ್ಲಿ ಈ ಕೆಲಸ ಬಲ್ಲ ಸೈನಿಕರನ್ನು ಬಳಸಿಕೊಳ್ಳಬೇಕೆಂದು ಕೂಡ ನಾನು ಹೇಳುವೆ" ಎಂದು ಗಾಂಧಿಯವರು ಪಟ್ಟಣಿಗರಿಗೆ ಬುದ್ಧಿವಾದ ಹೇಳಿದರು.

ಈ ಬುದ್ಧಿವಾದದ ಜೊತೆಗೇ ಅವರು ಪಟ್ಟಣಿಗರಿಗೆ ಹೇಳಿದರು:

"ಭಂಗಿಗಳಿಗೆ ಸಹಾಯ ಹಸ್ತವನ್ನು ನೀಡುವುದು ಪ್ರತಿಯೊಬ್ಬನ ಕರ್ತವ್ಯ. ಅವರಿಗೆ ವಿದ್ಯಾಭ್ಯಾಸ ಮಾಡಿಸಿರಿ. ಅವರು ಸರಿಯಾದ ಮನೆಗಳಲ್ಲಿ ವಾಸಿಸುವಂತೆ ನೋಡಿಕೊಳ್ಳಿರಿ. ಅವರಿಗೆ ಬೇಕಾದಲ್ಲಿ ವಾಸ ಮಾಡಲು ಬಿಡಿರಿ. ನ್ಯಾಯವಾದ ಕೂಲಿ ಅವರಿಗೆ ಸಿಕ್ಕುವಂತೆ ಮಾಡಿರಿ, ಅವರು ಕೇಳಬೇಕಾದ ಪ್ರಸಂಗ ಬರುವ ಮೊದಲೇ ಅವರಿಗೆ ನೀವು ನ್ಯಾಯವನ್ನು ದೊರಕಿಸಿ ಕೊಡಲು ಜಾಗ್ರತೆ ವಹಿಸಿರಿ."

ಕೊನೆಯ ಭಾಗಕ್ಕೆ ಸಂಬಂಧಿಸಿ ಅವರು ೧೯೪೬ ರ ಮೇ ೧೨ ರಲ್ಲಿ ಬರೆದರು:

"ಭಂಗಿಗಳಿಗೆ ಎಲ್ಲ ವಿಧದ ಅನ್ಯಾಯವನ್ನೂ ಮಾಡಲಾಗುತ್ತಿದೆಯೆಂದು ನಾನು ಪದೇ ಪದೇ ಹೇಳಿದ್ದೇನೆ. ಅವರ ಬಗ್ಗೆ ತೀರಿಸಬೇಕಾದ ಋಣವನ್ನು ನಗರಸ್ಥರು ತೀರಿಸುವರೆಂಬುದರಲ್ಲಿ ನನಗೇನೂ ಸಂಶಯವಿಲ್ಲ. ಹೀಗೆ, ಹರಿಜನರ ವಸತಿಗಳು ಚೆನ್ನಾಗಿ ಕಟ್ಟಲ್ಪಡಬೇಕು, ಗುಡಿಸುವ ಸಾಧನಗಳು ಯೋಗ್ಯವಿರಬೇಕು, ಅವರಿಗೆ ಬೇರೆಯಾದ ಕೆಲಸದ ಸಮವಸ್ತ್ರ ಕೊಡಬೇಕು, ಅವರಿಗೂ ಅವರ ಮಕ್ಕಳಿಗೂ ವಿದ್ಯಾಭ್ಯಾಸದ ಸೌಕರ್ಯವಿರಬೇಕು ಇತ್ಯಾದಿಗಳನ್ನು ನೋಡಿಕೊಳ್ಳುವುದು ಅವರ ಕರ್ತವ್ಯ. ಈ ಮತ್ತು ಇತರ ಸಮಸ್ಯೆಗಳನ್ನು ವಿಲಂಬ ಮಾಡದೆ ಬಗೆಹರಿಸಬೇಕು."

"ಈ ಸೌಕರ್ಯಗಳು ದೊರೆತಿಲ್ಲವೆಂದು ಭಂಗಿಗಳು ಸಂಪು ಹೂಡಬಾರದು; ಆದರೆ ಅವರ ಪರವಾಗಿ ಮಾತಾಡುವದು ಎಲ್ಲ ನಗರಸ್ಥರ ಕರ್ತವ್ಯ."

ಗಾಂಧಿಯವರ ನಿರ್ಣಯದ ಮೊದಲ ಭಾಗವಾದ ಭಂಗಿಗಳಂತಹ ಕೆಲಸಗಾರರು ಸಂಪು ಹೂಡುವುದು ತಪ್ಪೆಂಬುದನ್ನು ಪಟ್ಟಣಿಗರು ಹೃತ್ಪೂರ್ವಕ ಸ್ವಾಗತಿಸುತ್ತಾರೆ. ಅದೆಂದರೆ ಅವರಿಗೆ ವಿಕ್ರಮಾದಿತ್ಯನ ನ್ಯಾಯವೇ ಸೈ. ಅವರನ್ನು ಬಲಾತ್ಕಾರಕ್ಕೊಳಪಡಿಸಕೂಡದು, ತಾವೇ ಗುಡಿಸಬೇಕು ಎಂಬ ಎರಡನೆಯ ಬುದ್ಧಿವಾದವು ಕೆಲಮಟ್ಟಿಗೆ ಅವರಿಗೆ ಮನದಟ್ಟಾಗಿದೆ; ಮತ್ತು ಅವಶ್ಯ ಬಿದ್ದರೆ ಭಂಗಿಗಳ ಸಂಪನ್ನು ತಡೆಯಲು ಸಿದ್ಧತೆ ನಡೆಸಿದ್ದಾರೆ. ಕೆಲಪಟ್ಟಣಗಳಲ್ಲಿ ಸಂಪನ್ನು ಯಶಸ್ವಿಯಾಗಿ ಮುರಿದು ಹಾಕಿದ್ದಕ್ಕೆ ಆಗಲೇ ಎಷ್ಟೋ ಉದಾಹರಣೆಗಳಿವೆ.

ಆದರೆ ಬುದ್ಧಿವಾದದ ೪ ನೆಯ ಭಾಗವನ್ನು ನಡೆಸುವವರಾರು? ಭಂಗಿಗಳಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಗಾಂಧಿಯವರು ಎಲ್ಲರಿಗೂ ಹೇಳಿದ್ದರು. ಅದರದು ಒಂದು ಆದರ್ಶ ಬುದ್ಧಿವಾದ; ಮತ್ತು ಅದರ ನಿಯಮವೆಂದರೆ "ಎಲ್ಲರ ಕೆಲಸವು ಯಾರ ಕೆಲಸವೂ ಅಲ್ಲ" ಎಂಬುದು. ಆ ಭಾಗಕ್ಕೆ ಇದನ್ನು ಸಾಮಾನ್ಯವಾಗಿ ಅನ್ವಯಿಸಿ ಬಿಡುತ್ತಾರೆ. ಬುದ್ಧಿವಾದದ ಆ ಭಾಗವನ್ನು ನಿರ್ವಹಿಸಲು ತಾವು ನಗರಸಭಾಸಮಿತಿಯನ್ನು ಆಯ್ದು ಇಟ್ಟಿರುವುದರಿಂದ ತಾವೇನೂ ಆ ಬಗ್ಗೆ ಲಕ್ಷ್ಯ ಕೊಡಬೇಕಾಗಿಲ್ಲವೆಂದು ಪಟ್ಟಣಿಗರು ತಿಳಿದಂತೆ ತೋರುತ್ತದೆ.

ಇನ್ನು ಆ ಬಡ ನಗರ ಸಭೆಗಳೋ! ಅವುಗಳ ಆದಾಯ ಅಲ್ಪ, ಅವಶ್ಯಕತೆಗಳು ಬಹಳ. ಗುಡಿಸುವುದು ಪಟ್ಟಣದ ಅತ್ಯಂತ ಮುಖ್ಯ ಸೇವೆಯೆಂಬುದೇನೋ ದಿಟ. ಆದರೆ ಒಬ್ಬ ಮುಖ್ಯಾಧಿಕಾರಿ, ಮೇಲ್ವಿಚಾರಕರು ಕಾರಕೂನರು ಮುಂತಾದವರಿಲ್ಲದೆ ನಗರ ಸಭೆ ನಡೆಯಲಾರದು. ಒಳ್ಳೆಯ ಒಂದು ಕಟ್ಟಡ ಮತ್ತು ಸಭಾಗೃಹ ಇಲ್ಲದಿದ್ದರೂ ಸಾಧ್ಯವಿಲ್ಲ. ಇವರಿಗೆಲ್ಲ ಸಂಬಳ ಕೊಡಬೇಕು, ಕಟ್ಟಡಗಳನ್ನು ಆಧುನಿಕ ಮಟ್ಟಕ್ಕೆ ತಕ್ಕಂತೆ ಕಟ್ಟಬೇಕು. ಆದುದರಿಂದ ಇದಕ್ಕೆಲ್ಲ ಧನವ್ಯಯ ಮಾಡಿದ ಮೇಲೆ ಭಂಗಿಗಳಲ್ಲಿ ಹಂಚಲು ಬಹಳ ಹಣ ನಿಗುವುದಿಲ್ಲ. ಅವರ ಸಂಖ್ಯೆ ಬಹಳವಿರುವುದರಿಂದ ಪ್ರತಿಯೊಬ್ಬನಿಗೂ ಕೊಡುವ ಭಡತಿ ಬಹಳವಾಗಲಾರದು. ಆದುದರಿಂದ ಅವರಿಗೆ ವಿದ್ಯಾಭ್ಯಾಸ ಮಾಡಿಸುವ, ಮನೆ ಕಟ್ಟಿಸಿ ಕೊಡುವ ಮತ್ತು ಅವರಿಗೆ ಯೋಗ್ಯ ಕೂಲಿ ಕೊಡುವ ಕೆಲಸ ಮುಂತಾದವೆಲ್ಲ ಹೆಚ್ಚೆಂದರೆ ದೂರದ ಆದರ್ಶಗಳೆಂದು ತಿಳಿಯಬೇಕಾಯಿತು!

ಗುಡಿಸುವಂಥ ಮುಖ್ಯ ಸೇವಾಶಾಖೆಯ ಸದಸ್ಯರು ಸಂಪು ಹೂಡಬಾರದೆಂದು ಗಾಂಧಿಯವರು ನಿಯಮಿಸಿದ್ದರೂ ಕೆಲಸದ ಪರಿಸ್ಥಿತಿ ಸುಧಾರಿಸದಿದ್ದರೆ ಆ ಬಡ ಭಂಗಿ ಏನು ಮಾಡಬೇಕು? "ಭಂಗಿಯು ಹೊಲೆ ಹೊಲಸುಗಳಲ್ಲಿ ವಾಸಿಸುತ್ತ ಅರೆಹೊಟ್ಟೆಯ ಕೂಲಿ ತೆಗೆದುಕೊಂಡು ಹಾಗೇ ಬದುಕುತ್ತಿರಬೇಕೆ?" ಎಂದು ಒಬ್ಬರು ಕೇಳಿದ್ದಕ್ಕೆ— ೧೯೪೬ ರ ಜೂನ್ ೨೩ ನೆಯ 'ಹರಿಜನ' ದಲ್ಲಿ ಗಾಂಧಿಯವರು ಈ ಕೆಳಗಿನಂತೆ ಉತ್ತರ ಕೊಟ್ಟರು:

"ಪ್ರಶ್ನೆ ಯುಕ್ತವಾಗಿದೆ. ಅಂಥ ಸಂದರ್ಭಗಳಲ್ಲಿ ಸಂಪು ಯೋಗ್ಯ ಮದ್ದಲ್ಲ. ಜನತೆಗೂ ವಿಶೇಷತಃ ನಿಯಮಿಸಿಕೊಂಡ ನಗರ ಸಭೆಗೂ ಅರಹೊಟ್ಟೆಯ ವ ಮತ್ತು ತಜ್ಜನ್ಯ ಕಷ್ಟಪರಂಪರೆಯ ಜೀವನಕ್ಕೆನೂಕುವಸಂಮಾರ್ಜನಸೇವೆಯನ್ನು ತಾವು ಬಿಟ್ಟು ಬಿಡುವೆವೆಂದು ಸಾರ್ವಜನಿಕವಾಗಿ ತಿಳಿಸಿ ಬಿಡಬೇಕು. ಸಂಪಿಗೂ ಸಂಪೂರ್ಣ ಸೇವಾತ್ಯಾಗಕ್ಕೂ (ಅಲ್ಪಕಾಲಿಕ ನಿಲಿಕೆಗಲ್ಲ) ಬಹಳ ದೊಡ್ಡ ವ್ಯತ್ಯಾಸವಿದೆ. ಸಂಪು ಬೇಡಿಕೆಗಳನ್ನು ಪಡೆಯುವ ನಿರೀಕ್ಷೆಯಿಂದ ಕೈಕೊಳ್ಳುವ ಒಂದು ತಾತ್ಕಾಲಿಕ ಕ್ರಮ. ಸೇವಾತ್ಯಾಗವೆಂದರೆ ಬೇಡಿಕೆ ಸಿಗಲಾರದೆಂಬ ನಿರೀಕ್ಷೆಯಿಂದ ಒಂದು ವಿಶಿಷ್ಟ ಕೆಲಸವನ್ನು ಬಿಟ್ಟುಬಿಡುವುದು. ನ್ಯಾಯವಾದ ಸೇವಾತ್ಯಾಗಕ್ಕೆ ಪೂರ್ವದಲ್ಲಿ ಸರಿಯಾದ ಮುನ್ನೆಚ್ಚರಿಕೆ ಕೊಡುವುದೂ ಬೇರೆ ಕಡೆ ಹೆಚ್ಚು ಕೂಲಿ ಸಿಗುವ ಸಂಭವ ಮತ್ತು ಹೊಲೆ ಹೊಲಸುಗಳಿಂದ ಮುಕ್ತವಾಗುವುದೂ ಇರಬೇಕು. ಇದು ಲಜ್ಜಾಸ್ಪದವಾದ ಹುಂಬನಿದ್ದೆಯಿಂದ ಸಮಾಜವನ್ನು ಎಚ್ಚರಿಸಿ ಸಾಮಾಜಿಕರ ಮನಃಸಾಕ್ಷಿಯನ್ನು ಮುಚ್ಚಿಕೊಂಡಿರುವ ಹೊಲಸನ್ನು ಚೆನ್ನಾಗಿ ಗುಡಿಸಿ ಸ್ವಚ್ಛ ಮಾಡುತ್ತದೆ. ಆಗ ಒಂದೇ ಏಟಿಗೆ ಭಂಗಿಗಳು ಸಮ್ಮಾರ್ಜನವನ್ನು ಒಂದು ಉದಾತ್ತಕೃತಿಯ ಮಟ್ಟಕ್ಕೇರಿಸಿ ಬಹಳ ಹಿಂದೆಯೇ ಅದಕ್ಕೆ ಸಿಗಬೇಕಾಗಿದ್ದ ಸ್ಥಾನಕ್ಕೆ ಅದನ್ನು ಏರಿಸಿದಂತಾಗುತ್ತದೆ."

"ಆದರೆ," ಎನ್ನುತ್ತಾನೆ ವಾಲ್ಮೀಕಿಯ ಮಗ, ಇದರಲ್ಲಿ ಗಾಂಧಿಯವರು ನಮಗೊಂದು ಬುದ್ಧಿವಾದ ಕೊಡುತ್ತಾರೆ, ಅದರಂತೆ ನಡೆಯುವುದು ಹೇಗೆಂಬುದನ್ನು ನಾವರಿಯೆವು. ಶೌಚಕೂಪಗಳು, ಚರಂಡಿಗಳು ಮತ್ತು ರಸ್ತೆಗಳು— ಪುಸ್ತಕ ಭಾಂಡಾರ, ಪ್ರವಾಹ ಮತ್ತು ತೋಟಗದಾರಿಗಳಂತೆ ಕಾಣುವ ಚಿತ್ರವನ್ನು ಅವರು ನಮ್ಮೆದುರು ಬರೆದಿಟ್ಟಿದ್ದಾರೆ. ಅದಿಲ್ಲವಾದರೆ ಆ ಕೆಲಸದಿಂದ ನಾವು ಮುಕ್ತರಾಗಿ ಬೇರೆ ಏನನ್ನಾದರೂ ಮಾಡಬೇಕು. ಶ್ರೀ ವಿನೋಬಾ ಅವರ ಬೆಂಬಲ ಪಡೆದ ಮಾನ್ಯ ಶ್ರೀ ಜಗಜೀವನ ರಾಮರು ಪೂರ್ವೋಕ್ತ ಸಂದರ್ಭ ಸದ್ಯದಲ್ಲಂತೂ ಉಂಟಾಗುವ ನಂಬಿಗೆಯಿಲ್ಲವೆಂದು ಕೊಂಡು ಉತ್ತರೋಕ್ತವಾದುದನ್ನೇ ಮಾತಾಡಿ ಈ ಅಯೋಗ್ಯವಾದ ಕೆಲಸವನ್ನು ಬಿಟ್ಟು ಬೇರೆ ಯಾವುದಾದರೊಂದು ಕೆಲಸ ಹಿಡಿಯಿರೆಂದು ನಮಗೆ ಬುದ್ಧಿ ಹೇಳಿದ್ದಾರೆ. ಅದರಿಂದೂ, ನಿಮ್ಮ ಬಗ್ಗೆ ಕರುಣೆ ತೋರುವಂಥದಿದ್ದರೂ, ನಮಗೆ ದಾರಿ ತೋರದಾಗಿದೆ, ಇದರ ಬದಲು ನಾವೇನು ಮಾಡೋಣ? ಯಾರು ನಮ್ಮನ್ನು ಕೆಲಸಕ್ಕೆ ನಿಯಮಿಸಿಕೊಳ್ಳುವರು? ಯಾವ ಉದ್ಯೋಗಿಗಳು ತಮ್ಮೊಡನೆ ಕೆಲಸ ಮಾಡಲು ನಮ್ಮನ್ನು ಸೇರಿಸಿಕೊಳುತ್ತಾರೆ? ನಿಮ್ಮಲ್ಲಿ ಒಬ್ಬಿಬ್ಬರು ನಮ್ಮಲ್ಲಿಯ ಚುರುಕು ಹುಡುಗನೊಬ್ಬನತ್ತ ಮನಸ್ಸು ಮಾಡಿ ಅವನಿಗೆ ಹೆಚ್ಚಿನ ಕೆಲಸ ಕೊಡಿಸಬಹುದು. ಆದರೆ ನಮ್ಮಲ್ಲಿಯ ಬಹುಸಂಖ್ಯರು ಇದ್ದ ಹಾಗೇ ಇರುತ್ತೇವೆ, ನಾವು ಮನುಷ್ಯರೋ ಅರ್ಧ ಮನುಷ್ಯರೋ ಹೇಳಲಾದೀತೆ? ನಾವು ಹೇಗೆ ಹೇಗೋ ಮಹಾತ್ಮನಾದ ವಾಲ್ಮೀಕಿಗೆ ಸಂಬಂಧಿಸಿದವರೆಂದು ಕಲ್ಪಿಸಲಾಗಿದೆ. ಅವನಿಗೆ ರಾಮ ರಾಮ ಎಂದು ಹೇಳಲುಬರುತ್ತಿಲ್ಲವಾದುದರಿಂದ ಮರಾ ಮರಾ (ಸಾಯಿ ಸಾಯಿ) ಎನ್ನುತ್ತಿದ್ದನೆಂದು ಹೇಳಿಕೆಯುಂಟು. ಉದ್ಧಾರವಾಗುವ ಮೊದಲೇ ನಮ್ಮ ಜಾತಿ ನಿರ್ನಾಮವಾಗುವುದೆಂದು [illegible] ... ಒಳ್ಳೆಯ [illegible] ... ಸೇವೆ [illegible] ... ಒಳ್ಳೆಯ ನಡತೆಗಳು [illegible] ... ಯಾಗಿದೆ, [illegible] ... ಮತ್ತು [illegible] ... ಆಶ್ಚರ್ಯಪಡಬೇಕಾದದ್ದೇನಿದೆ [illegible] ... ನಾವು ಈಗಲೇ ಸ್ವೀಕರಿಸಬಹುದಾದ [illegible] ... ರಿಂದನ್ನು ನೀವು ಕೊಡಬಲ್ಲಿರಾ?"

ನನ್ನ ವಾತಿನಲ್ಲಿ ಈ ಪ್ರಕರಣವನ್ನು [illegible] ಮುಂದಿಟ್ಟಿದ್ದೇನೆ. ಸಮಸ್ಯೆಯು ಈ [illegible] ನನ್ನನ್ನು ಕೆಲ ತಿಂಗಳುಗಳಿಂದ ಕಾಡಿಸುತ್ತಿ[illegible] ಭಂಗಿಗಳದೊಂದೇ ಅಲ್ಲ. ಅವರಂತೆಯೇ ಪ್ರಾಥಮಿಕ ಶಾಲಾ ಶಿಕ್ಷಕರು, ಭೂಮಿಯಿಲ್ಲ[illegible] ಒಕ್ಕಲಿಗರು, ಗದ್ದೆಕೂಲಿಗೆಲಸದವರು [illegible] ಶ್ರಿತರ ಒಂದು ಭಾಗ ಮತ್ತು ಇತರರ ಸಮಸ್ಯೆಯೂ ನನ್ನ ತಲೆತಿನ್ನಹತ್ತಿದೆ. ಪರಿಣಾಮಕಾರಿಯಾದ ಅಹಿಂಸಾತ್ಮಕ ಕ್ರಮವನ್ನು [illegible] ಸಮಸ್ಯೆಯನ್ನು ಅವರು ಬಗೆಹರಿಸಿಕೊಳ್ಳ[illegible] ದಿದ್ದರೆ, ಕಮ್ಯುನಿಸ್ಟ ಮತ್ತು ಜಾತೀಯ[illegible] ವಾದಿಗಳಹಿಂಸಾಚಾರದಕರೆಗೆ ಬಲಿಬೀಳದಿರ[illegible] ಕಷ್ಟವಾದೀತು. ಅವರನ್ನು ಉದ್ಧರಿಸಲು ಅಥ[illegible] ಅಹಿಂಸಾತ್ಮಕ ರೀತಿಯಿಂದ ಸಂಘಟಿಸಲ[illegible] ಏನು ಮಾಡಲಾದೀತು? ಒಂದು ದಿನ [illegible] ಬಿನ ಮಾತುಗಳಲ್ಲಿ, "ಅಪ್ಪನ ರಾಜ್ಯವು ಒಬ್ಬ[illegible] ಸಹಾಯಕೊಡುವುದರಲ್ಲಿ ತಪ್ಪೀತು, ಆದ[illegible] ಅಮ್ಮನ ಚರಕ ಎಂದೂ ತಪ್ಪಲಾರದು" ಎಂಬ ಗುಜರಾತೀ ಗಾದೆಯೊಂದನ್ನು ಎಲ್ಲಿ[illegible] ನಾನು ಓದಿದ್ದೇನೆ. ಬಾಪು ಆಗಲೇ ಪರಿಹಾ[illegible] ಪಾಯವನ್ನು ಹೇಳಿಬಿಟ್ಟಿದ್ದಾರೆಂದು ಅದರಿಂದ ನನಗನಿಸಿತು.

ನನ್ನ ಮುಂದಿನ ಬರಹದಲ್ಲಿ ಇದನ್ನು ಇನ್ನೂ ಚೆನ್ನಾಗಿ ವಿವರಿಸುವೆನು.

ವರ್ಧಾ, ೨೪ ೩-೪೯ ಕಿ. ಘ. –ಮಶ್ರೂವಾ[illegible]

ಇದು ಪ್ರತಿಷ್ಠೆಯಲ್ಲ, ಪಾವಿತ್ರ್ಯಭಂಗ

ಗಾಂಧೀಜಿಯ ಅಸ್ಥಿವಿಸರ್ಜನೆಯ ಕಾಲದಲ್ಲಿ ಅಸ್ಥಿಯನ್ನು ಪೂರ್ತಿಯಾಗಿ ವಿಸರ್ಜಿಸಿ ಬಿಡಬೇಕೊ ಅಥವಾ ಅದರಲ್ಲೊಂದು ಅಂಶವನ್ನು ತೆಗೆದಿಟ್ಟು ಕೆಲ ಜನರಿಗೂ ಸಂಸ್ಥೆಗಳಿಗೂ ಹಂಚಬೇಕೊ ಎಂಬ ಪ್ರಶ್ನೆಯೆದ್ದಿತ್ತು. ಬಹಳ ಚರ್ಚೆಯಾದ ನಂತರ ಮೊದಲನೆಯ ಮಾರ್ಗವನ್ನೇ ಅನುಸರಿಸಲಾಯಿತು. ಏಕೆಂದರೆ ಗಾಂಧೀಜಿಯ ಅವಶೇಷಗಳನ್ನು ಪಾಮರ ಜನರ ಮೂಢ ಭಕ್ತಿಯ ಪೂಜಾವಸ್ತುವಾಗಿ ಮಾಡುಗೊಡುವದು ಅವರ ಪ್ರಕಟ ಇಚ್ಛೆಗೂ ಉಪದೇಶಗಳ ಸಾರಕ್ಕೂ ವ್ಯತಿರಿಕ್ತವಾಗಿತ್ತಲ್ಲದೆ, ಇತಿಹಾಸದಲ್ಲಿ ಎಷ್ಟೋ ಬಾರಿ ಪ್ರಾಚೀನ ಪ್ರವಾದಿ ಋಷಿ ಮುನಿ ಮಹಾಮಹಿಮರ ವಿಷಯದಲ್ಲಿ ಆದಂತೆ ಗಾಂಧೀಜಿಯ ವಿಷಯದಲ್ಲಿಯೂ ಅದು ಹೊಲಸು ತಿಕ್ಕಾಟ, ಜಗಳ, ವಿವಾದಗಳಿಗೆ ಕಾರಣವಾಗಬಹುದಾಗಿತ್ತು. ಎಲ್ಲಕ್ಕಿಂತ ಮಿಗಿಲಾಗಿ, ಜೀವಮಾನವೆಲ್ಲ ಸಂಕುಚಿತ ಹಿತಸಂಬಂಧಗಳ ವಿರುದ್ಧ ಶಪಥ ತೊಟ್ಟು ಹೋರಾಡಿದ ಗಾಂಧೀಜಿಯ ಪಾರ್ಥಿವ ಅವಶೇಷಗಳೇ ಸಂಕುಚಿತ ಹಿತ ಸಂಬಂಧಗಳಿಗೆ ಆಶ್ರಯವಾಗುವ ಭಯವಿತ್ತು. ಆದರೂ ಅವರ ತೀರ ಹತ್ತಿರದ ಆಪ್ತರ ಮಟ್ಟಿಗೆ ಮತ್ತು ಅವರ ಧ್ಯೇಯಗಳ ಸಾಧನೆಗೆ ಜೀವಮಾನವನ್ನೆ ಮುಡಿಪಿಟ್ಟು ವಿಶೇಷ ದಾಕ್ಷಿಣ್ಯಕ್ಕೆ ಹಕ್ಕುದಾರರಾಗಿದ್ದವರ ಮಟ್ಟಿಗೆ ಈ ನಿಯಮವನ್ನು ಸಡಿಲಿಸಿ, ಅವರ ಸ್ವಂತ ಉಪಯೋಗಕ್ಕಾಗಿಯೂ ಗಾಂಧೀಜಿಯ ಧ್ಯೇಯಗಳಿಗಾಗಿ ಇನ್ನೂ ದುಡಿಯುವಂತೆ ಅವರಿಗೆ ಸ್ಫೂರ್ತಿ ಕೊಡಲೆಂಬ ದೃಷ್ಟಿಯಿಂದಲೂ ಕುರುಹಿನಪೂರ್ತಿ ಒಂದೆರಡು ಚಿಟಿಕೆ ಚಿತಾಭಸ್ಮವನ್ನು ಹಂಚಲಾಯಿತು. ಹೀಗೆ ಅಪವಾದಾತ್ಮಕ ಪ್ರಸಂಗಗಳಿಗೆಡೆಕೊಡುವದು ಜಾಣತನವಾದೀತೇ ಎಂದು ಶಂಕಿಸಿದವರೂ ಇದ್ದರಾದರೂ ಕೊನೆಗೆ ಧೈರ್ಯ ಮಾಡಲು ನಿರ್ಧರಿಸಿದರು. ಅವರ ಶಂಕೆ ಸಕಾರಣವಾಗಿತ್ತೆಂದು ತೋರುತ್ತದೆ. ಕಲಕತ್ತೆಯಿಂದ ಶ್ರೀ ದೇವದಾಸ ಗಾಂಧಿಯವರಿಗೆ ಒಬ್ಬ ಗೆಳೆಯರು ಬರೆತ್ತಾರೆ:

"ಈಚೆಗೆ ನಿರಾಶ್ರಿತ ಶಿಬಿರಗಳಿಗೆ ನಾನು ಭೆಟ್ಟಿ ಕೊಟ್ಟಾಗ ಬಂಗಾಲದ ತೋಲಿಗಂಜದ ರೀಜಂಟ್ ಪಾರ್ಕ ಶಿಬಿರದ ಕೆಲ ನಿರಾಶ್ರಿತರು ತೋಲಿಗಂಜದಲ್ಲಿನ ಕೆಲ ಪಡಭೂಮಿಗಳನ್ನು ಆಕ್ರಮಿಸಿ, ಅಲ್ಲಿ ಸರಕಾರದ ಅಥವಾ ಆ ಭೂಮಿಯ ಒಡೆಯರ ತಿಳಿವಳಿಕೆಯಾಗಲಿ ಒಪ್ಪಿಗೆಯಾಗಲಿ ಇಲ್ಲದೆ ಗುಡಿಸಲುಗಳನ್ನು ಕಟ್ಟಿಕೊಂಡು, ಈ ನ್ಯಾಯಬಾಹಿರ ವಸತಿಗೆ "ಗಾಂಧೀ ನಗರ" ವೆಂದ[illegible] ನಾಮಕರಣ ಮಾಡಿರುವುದನ್ನು ಕಂಡೆ. [illegible] ಸಾಲದ್ದಕ್ಕೆ, ಗಾಂಧೀಜಿಯ ಭಸ್ಮವನ್ನು ಸಂಪಾದಿಸಿ ತಾವು ಅದರ [illegible] ನನ ಮಾಡಿರುವದಾಗಿ ಅವರು ಸಾರಿದ್ದ[illegible] ಮತ್ತು ಅಲ್ಲೊಂದು ಗುಡಿ ಕಟ್ಟಲು [illegible] ಕೂಡ ಸಂಗ್ರಹಿಸುತಿದ್ದಾರೆ. ಈ ಜನರಿ[illegible] ಬಾಪುವಿನ ಭಸ್ಮ ಹೇಗೆ ಸಿಕ್ಕಿತೋ [illegible] ರಿಯೆ. ಈ ವಿಷಯದಲ್ಲಿ ನೀವು [illegible] ವಿವರಗಳನ್ನು ಒದಗಿಸಿದರೆ ತುಂಬ ಕೃತಜ್ಞ[illegible] ನಾಗುವೆ. ಅಲ್ಲದೆ, ಬಾಪುವಿನ ಚಿತಾಭಸ್ಮ[illegible] ದಿಂದ ಹೀಗೆ ಸ್ವಾರ್ಥಸಾಧನೆ ಮಾಡಲ[illegible] ಅಥವಾ ಅದನ್ನು ವೈಯಕ್ತಿಕ ಹಿತದ ವಸ್ತು[illegible] ವಾಗಿಸಲು ಯಾರಿಗೂ ಅವಕಾಶ ಕೊಡ[illegible] ಕೂಡದೆಂದು ನನಗನಿಸುತ್ತದೆ."

ಮೇಲೆ ಹೇಳಿದ ಸಂಗತಿಗಳು ನಿಜವಾ[illegible] ದ್ದರೆ, ನಾಚಿಕೆಗೇಡೇ ಸರಿ. ಅವರು ಸಂಪಾದಿ[illegible] ಸಿದ "ಭಸ್ಮ" ಒಂದೋ ನಕಾರಿಯಾಗಿ[illegible] ಬೇಕು, ಇಲ್ಲದಿದ್ದರೆ ನ್ಯಾಯವಿರುದ್ಧವಾ[illegible] ಅಥವಾ ಮೋಸದಿಂದ ಪಡೆದದ್ದಿರಬೇಕು[illegible] ಈಗಂತೂ ಅದನ್ನು ಅನಧಿಕೃತ ಮತ್ತು ನೀ[illegible] ಬಾಹಿರ ಉದ್ದೇಶಗಳಿಗಾಗಿ ಉಪಯೋಗಿ[illegible] ಲಾಗುತ್ತಿದೆ. ಬಂಧು ಬಾಂಧವರಿಂದಾಗ[illegible] ಯಾವನೊಬ್ಬ ಹೊಣೆಗಾರ ವ್ಯಕ್ತಿಯಿಂದಾಗ[illegible] ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯಿಂದಾಗ[illegible] ಔಪಚಾರಿಕ ಅಥವಾ ಅನ್ಯ ರೀತಿಯಿಂದ ಒಪ್ಪಿ[illegible] ಪಡೆಯಲಾಗಿಲ್ಲ.

ಈ ಕಾರ್ಯವನ್ನು ಕೈಕೊಳ್ಳಲು ಮನಸ[illegible] ಮಾಡಿದ ಜನರು ತಮ್ಮ ತಪ್ಪನ್ನು ಬೇಗನೆ ಮ[illegible] ಗಂಡು ಹಿಂದೆಗೆಯುವರೆಂದು ಆಶಿಸೋಣ[illegible] ಗಾಂಧೀಜಿಯ ಸ್ಮೃತಿಯನ್ನು ಇಂಥ ಹಿ[illegible] ಯಿಂದ ಕಾಪಾಡುವದು ಜನರಿಗೆ ಸೇರಿದ್ದು[illegible] ದೇಗುಲಕ್ಕೆ ಹೋಗಲು ಮತ್ತು ಅದಕ್ಕೆ [illegible] ಸಹಾಯ ನೀಡಲು ಅವರು ನಿರಾಕರಿಸಿ ತ[illegible] ಗೌರವಕ್ಕೆ ಪಾತ್ರವಾದ ವ್ಯಕ್ತಿಗೆ ಅಪಮಾ[illegible] ವಾಗದಂತೆ ನೋಡಿಕೊಳ್ಳಬೇಕು. ಅ[illegible] ಪ್ರಕಾರ ಸ್ಥಾನಿಕ ಅಧಿಕಾರಿಗಳಾದರೂ [illegible] ದೇಗುಲವನ್ನು ಕಿತ್ತುಹಾಕಬೇಕಲ್ಲದೆ ನ್ಯಾಯ[illegible] ವಿರುದ್ಧವಾದ ಈ ಆಕ್ರಮಣವನ್ನು ನಿವಾ[illegible] ಬೇಕು. ಹೀಗೆ ಮಾಡುವವರಿಂದ ಗಾಂಧೀ[illegible] ಜಿಯ ಭಸ್ಮಕ್ಕೆ ಅಪಮಾನವಾಗಲಾರದು. ಬ[illegible] ಲಿಗೆ ಅವರ ಇಚ್ಛೆಯನ್ನೆ ಪಾಲಿಸಿದಂತಾ[illegible] ಲ್ಲದೆ ಜನರಿಗೊಂದು ಬಗೆಯ ಶಿಕ್ಷಣವೂ [illegible] ಸೀತು. ಇದು ಪ್ರತಿಷ್ಠೆಯಲ್ಲ, ಸಂಬಿರದ[illegible] ಭ್ರಷ್ಟಗೊಳಿಸುವದು.

..ಪ್ಯಾರೇಲಾ[illegible]

ಹಿಂದುಸ್ತಾನಿ ಮತ್ತು ಉರ್ದು ಬಗ್ಗೆ ಪ್ರಾತಿನಿಧಿಕ ಮುಸ್ಲಿಮರ ಮತ

[ಭಾರತದ ಎಲ್ಲ ಪ್ರದೇಶಗಳ ಜೊತೆಗಾರ ಸಂಸ್ಕೃತಿಯು ಆಂತರಿಕ್ಯದ ಈ ಕೆಲಸ ಬಿನ್ನಹಕ್ಕೆ ತಕ್ಕ ಪ್ರೇರಣೆ ದೊರೆಯುದಪ್ಪು ಮಾರ್ಥ್ಯದ ಸಂಗತಿ. ಈ ಬಿನ್ನಹದಿಂದ, ಅವರು ಹಿಂದುಸ್ತಾನಿಯು ಹೆಸರಲ್ಲಿ ಉರ್ದುವಿನ ಸ್ಥಾನಗಳನ್ನು ಮುಂದೊತ್ತುವವಿಲ್ಲೆಂದು ವಿದಿತವಾಗುತ್ತದೆ. ಅವರು ಹಿಂದುಸ್ತಾನಿಯು ಮುಖ್ಯಲಿಪಿ ನಾಗರಿಯೆಂದು ಕಾವಾಗಿ ಒಪ್ಪಿಕೊಂಡಿದ್ದಾರ್ದನೆ ತನ್ನ ಮಾತೃಭಾಷೆ ಯಾವುದೇ ಇದ್ದರೂ ಪ್ರತಿಯೊಬ್ಬ ಭಾರತೀಯನೂ ಆ ಲಿಪಿಯನ್ನರಿತಿರಬೇಕೆಂದು ಹೇಳಿದ್ದಾರೆ. ಉರ್ದು ಲಿಪಿಗೆ ಮನ್ನಣೆ ದೊರೆಯಬೇಕೆಂಬ ಅವರ ಬಿನ್ನಹಕ್ಕೂ ಸಹಾನುಭೂತಿಪರ ಪರಿಶೀಲನೆ ದೊರಕುವದವಶ್ಯ.

—ಕಾಕಾ ಕಾಲೇಲಕರ]

ಹಿಂದುಸ್ತಾನಿಯು ಹಕ್ಕನ್ನು ಪ್ರತಿಪಾದಿಸುವ ಸಲುವಾಗಿ ಹಿಂದುಸ್ತಾನಿ ಪ್ರಚಾರ ಸಭೆ ನೇಮಿಸಿದ ಸಮಿತಿಯು ತಾನು ಘಟನಾ ಸಮಿತಿಗೆ ಒಪ್ಪಿಸಿದ ಮನವಿಯನ್ನು ಪ್ರಕಟಿಸಿದೆ. ಅದರಲ್ಲಿ ಹಿಂದುಸ್ತಾನಿಯನ್ನು ರಾಷ್ಟ್ರಭಾಷೆಯೆಂದೂ ದೇವನಾಗರಿಯನ್ನು ಅದರ ಮುಖ್ಯ ಲಿಪಿಯೆಂದು ಹಾಗು ಉರ್ದುವನ್ನು ದ್ವಿತೀಯ ಲಿಪಿಯೆಂದು ಪರಿಗ್ರಹಿಸಬೇಕೆಂದೂ ಕಾಣಿಸಿದೆ. ಅವರ ವಾದಗಳನ್ನು ನಾವು ಪುನವಾರೆ ಬೆಂಬಲಿಸುತ್ತೇವೆ ಮತ್ತು ಘಟನಾ ಸಮಿತಿಯ ಸದಸ್ಯರು ಈ ಬಗ್ಗೆ ಮಾಡುವ ನಿರ್ಣಯವನ್ನೇ ರಾಷ್ಟ್ರದ ಜೀವನದ ಭಾವೀ ವಿಕಾಸವು ಅವಲಂಬಿಸಿರುವದರಿಂದ ಅವರು ಈ ವಾದಗಳನ್ನು ನಿಷ್ಪಕ್ಷಪಾತವಾಗಿಯೂ ನಿರ್ವಿಕಾರವಾಗಿಯೂ ವಿವೇಚಿಸಬೇಕೆಂದು ಕಳಕಳಿಯಿಂದ ಬಿನ್ನವಿಸುತ್ತೇವೆ.

ಈಗ ಅನೇಕ ಶತಮಾನಗಳಿಂದ ಶಿಕ್ಷಣ ಪಡೆಯುವದು ಮತ್ತು ತಮ್ಮ ಭಾಷೆಯನ್ನು ಸಾಹಿತ್ಯಮೂಲಕ ಭಾವಾಭಿವ್ಯಕ್ತಿಗಾಗಿ ಉಪಯೋಗಿಸುವದು ಕೆಲವೇ ಜನರ ಭಾಗ್ಯಕ್ಕೆ ನಿಲುಕುವ ಮಾತಾಗಿತ್ತು. ಭಾರತ ಒಕ್ಕೂಟದ ಪ್ರಜಾತಂತ್ರಾತ್ಮಕ ಧ್ಯೇಯ ಸಾಧ್ಯವಾಗಬೇಕಾದರೆ ಅದರ ರಾಷ್ಟ್ರಭಾಷೆ ಮಾತಿನಲ್ಲಿ ಮಾತ್ರವಲ್ಲ ಕೃತಿಯಲ್ಲಿಯೂ ಅತ್ಯಂತ ವಿಸ್ತಾರವಾಗಿ ಹಬ್ಬಬೇಕು ಮತ್ತು ಅದರಲ್ಲಿ ಜನತೆ ಜಾಯ್ಮಾತಿನ ಶಬ್ದಗಳೂ ದೇಸಿಗಳೂ ಅಳವಡಬೇಕು. ಸಾಹಿತ್ಯದ ಉರ್ದುವು ಪರ್ಶಿಯನ್ ಮತ್ತು ಅರಬ್ಬಿ ಭಾಷೆಗಳನ್ನು ಅತಿರೇಕವಾಗಿ ಅವಲಂಬಿಸಿದ್ದರೆ ಸಾಹಿತ್ಯದ ಹಿಂದಿ ಸಂಸ್ಕೃತವನ್ನು ಅತಿರೇಕವಾಗಿ ಅನುಸರಿಸುವದು. ಆದುದರಿಂದ ಉರ್ದು ಹಿಂದಿಗಳೆರಡೂ ಭಾರತದಲ್ಲಿ ಸಾಮಾನ್ಯವಾಗಿ ಬಾಯ್ಬಳಕೆಯಲ್ಲಿರದ ಭಾಷೆಗಳಿಂದಲೇ ಶಕ್ತಿ ಸ್ಫೂರ್ತಿಗಳನ್ನು ಪಡೆಯುತಿದ್ದು, ಅವು ತೀರ ವಿಧಿಬದ್ಧವಾಗಿರುವ ಕಾರಣ ಪರಸ್ಪರವಾಗಿಯಾಗಲಿ ಇತರ ಭಾರತೀಯ ಭಾಷೆಗಳಿಂದಾಗಲಿ ಶಬ್ದಗಳನ್ನು ಎರವು ಪಡೆಯಲು ಅಸಮರ್ಥವಾಗಿವೆ. ಆದರೆ ಅವೆರಡರ ಮೂಲರೂಪವಾದ ಹಿಂದುಸ್ತಾನಿಯಲ್ಲಿ ಸತ್ವವೂ ಬೇಕಾದಂತೆ ಮಣಿಯುವ ಗುಣವೂ ಇದೆ. ಅದು ಸಂಸ್ಕೃತ, ಅರಬ್ಬಿ, ತುರ್ಕಿ, ಪರ್ಶಿಯನ್ ಮತ್ತು ಆಧುನಿಕ ಯುರೋಪಿಯನ್ ಮತ್ತು ಭಾರತೀಯ ಭಾಷೆಗಳ ಶಬ್ದಗಳನ್ನೊಳಗೊಂಡಿರುವದರಿಂದ ಎಲ್ಲ ಪ್ರಗತಿಪರ ಭಾಷೆಗಳಂತೆ ಸರ್ವಗ್ರಾಹಿಯಾಗಿದೆಯಲ್ಲದೆ ತಾನು ಎರವು ತಂದ ಶಬ್ದಗಳಮೇಲೆ ತನ್ನ ವ್ಯಕ್ತಿತ್ವದ ಮುದ್ರೆಯೊತ್ತುವ ಸಾಮರ್ಥ್ಯ ಅದಕ್ಕಿದೆ. ಆದಕ್ಕೆ ಈ ಬಗೆಯಾಗಿ ಬೇಕಾದಂತೆ ಮಣಿಯುವ ಮತ್ತು ಉದಾರವಾದ ಸ್ವಭಾವವಿರುವದರಿಂದಲೇ ಮಹಾತ್ಮಾಗಾಂಧಿಯವರು ಅದನ್ನು ರಾಷ್ಟ್ರಭಾಷೆಯಾಗಿ ಮಾಡಬೇಕೆಂದು ಪ್ರತಿಪಾದಿಸಿದರು. ಸಾಮರಸ್ಯವನ್ನೂ ಸಾಂಸ್ಕೃತಿಕ ಸಹಕಾರವನ್ನೂ ಪ್ರಸಾರಗೊಳಿಸುವಲ್ಲಿ ಹಿಂದುಸ್ತಾನಿ ಅತಿ ಪ್ರಬಲ ಸಾಧನವಾಗಬಲ್ಲದೆಂದು ನಾವು ಮನಃಪೂರ್ವಕ ನಂಬಿದ್ದೇವೆ. ಭಾರತದ ಭಾಷೆ-ಸಂಸ್ಕೃತಿಗಳ ವೈವಿಧ್ಯದಲ್ಲಿ ಅಂತರ್ಭಾಷ್ಯ ಐಕ್ಯವನ್ನು ಸ್ಥಾಪಿಸಲು ಹಿಂದುಸ್ತಾನಿಯೊಂದೇ ಸಮರ್ಥವಾದೀತು.

ಲಿಪಿಯ ಸಂಬಂಧದಲ್ಲಿ, ದೇವನಾಗರಿಯೇ ರಾಷ್ಟ್ರಭಾಷೆಯ ಪ್ರಮುಖ ಲಿಪಿಯಾಗಬೇಕೆಂದೂ ಉರ್ದು ದ್ವಿತೀಯ ಲಿಪಿಯಾಗಬೇಕೆಂದೂ ನಾವು ಮನಸಾ ಒಪ್ಪುತ್ತೇವೆ. ದೇವನಾಗರಿಯು ಭಾರತದ ಲಿಪಿಗಳೆಲ್ಲದರ ತತ್ವವನ್ನೂ ಪರಮಾವಧಿ ಪರಿಣಾಮದಲ್ಲಿ ಒಳಗೊಂಡಿದೆ. ತನ್ನ ಮಾತೃಭಾಷೆಯಾವುದಿದ್ದರೂ ಪ್ರತಿಯೊಬ್ಬ ಭಾರತೀಯನೂ ಅದನ್ನರಿತಿರಲೇಬೇಕು. ಹಿಂದುಸ್ತಾನಿ ಎಲ್ಲೆಲ್ಲಿ ಬಳಕೆಯಲ್ಲಿದೆಯೋ ಅಲ್ಲೆಲ್ಲ ಉರ್ದುವು ಬದಲುಲಿಪಿಯಾಗಿಯೆ ಇದೆ. ಅದು ಐತಿಹಾಸಿಕ ಮತ್ತು ಸಾಮಾಜಿಕ ದೃಷ್ಟಿಗಳಿಂದ ಮನ್ನಣೆಗೆ ಅರ್ಹವಾಗಿದೆ. ಈ ಲಿಪಿಯನ್ನು ಮಾತ್ರ ಬಲ್ಲ ಲಕ್ಷಾಂತರ ಜನರು ಭಾರತದಲ್ಲಿದ್ದಾರೆ. ಆದುದರಿಂದ ಉರ್ದುವಿಗೆ ದ್ವಿತೀಯ ಲಿಪಿಯೆಂದು ಮನ್ನಣೆ ದೊರೆಯಬೇಕೆಂದು ನಮ್ಮ ಅಭಿಪ್ರಾಯ. ಕೇಂದ್ರ ಸರಕಾರದ ಎಲ್ಲ ಕಾಯದೆ ಕಾನೂನು-ಆಜ್ಞೆ ಮೊದಲಾದವುಗಳು ಎರಡೂ ಲಿಪಿಗಳಲ್ಲಿ ಪ್ರಸಿದ್ಧಿಸಲ್ಪಡಬೇಕು. ನಾಗರಿಕರಿಗೆ ಉರ್ದು ಲಿಪಿಯಲ್ಲಿಯೂ ಅರ್ಜಿ ಮನವಿ ಮೊದಲಾದವುಗಳನ್ನು ಸಾದರುಪಡಿಸಲು ಅಪ್ಪಣೆ ಬೇಕು. ಎರಡು ಲಿಪಿಗಳನ್ನು ಮಾತ್ರವಲ್ಲ ಎರಡು ಭಾಷೆಗಳನ್ನು ಕೂಡ ಪ್ರಜಾತಂತ್ರಾತ್ಮಕ ರಾಷ್ಟ್ರಗಳಲ್ಲಿ ಉಪಯೋಗಿಸಿದ ಉದಾಹರಣೆಗಳಿವೆ, ಮತ್ತು ಅದು ಸಾಂಸ್ಕೃತಿಕ ಸಾಮರಸ್ಯಕ್ಕಾಗಿ ಸರಕಾರದ ಕಳಕಳಿಯ ದ್ಯೋತಕವಾಗಿದೆ. ಮಹಾತ್ಮಾ ಗಾಂಧಿಯವರು ನಿಜವಾದ ಮುತ್ಸದ್ದಿತನದ ಗುಣವಾದ ವಿಶಾಲ ಹೃದಯ ಮತ್ತು ಜಾಣ್ಮೆಯಿಂದ ಹಿಂದುಸ್ತಾನಿಗೆ ಎರಡೂ ಲಿಪಿಗಳು ಬಳಸಲ್ಪಡಬೇಕೆಂದು ಹಟ ಹಿಡಿದಿದ್ದರು. ಉರ್ದು ಲಿಪಿಗೆ ಯೋಗ್ಯ ಮನ್ನಣೆ ಕೊಡದಿದ್ದರೆ ಹಿಂದುಸ್ತಾನಿಯ ಉದಾರವೃತ್ತಿಗೆ ಕುಂದು ಬರುತ್ತದೆ. ಘಟನಾ ಸಮಿತಿಯ ಸದಸ್ಯರು ಈ ಸಂದರ್ಭದಲ್ಲಿ ಭಾರತದ ಭವಿತವ್ಯದಲ್ಲಿ ಸಹಿಷ್ಣುತೆ ಮತ್ತು ಸೌಹಾರ್ದಗಳಿರುವ ಸ್ಥಾನವನ್ನು ದೃಢಪಡಿಸುವರೆಂದು ಹಾರೈಸುತ್ತೇವೆ.

[ಇದಕ್ಕೆ ಸೈಯದ ಅಬ್ದುಲ್ಲಾ ಬ್ರೆಲ್ವಿಯವರೇ ಮೊದಲಾದ ೬೧ ಪ್ರಮುಖ ಮುಸ್ಲಿಮರ ಸಹಿಯಿದೆ. ಸ್ಥಳ ಸಂಕೋಚದಿಂದ ಅವನ್ನು ಇಲ್ಲಿ ಕೊಟ್ಟಿಲ್ಲ. — ಸಂ. ಕ.

ಶ್ರೀ. ದಿವಾಕರರ ಕಾರ್ಯಕ್ರಮ

ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಆಕಾಶ ವಾಣಿ ಶಾಖೆಯ ಮಂತ್ರಿಗಳಾದ ಶ್ರೀ. ದಿವಾಕರ ರಂಗರಾಯರು ಎಪ್ರಿಲ ೧೨ ನೇ ತಾರೀಕಿನ ದಿನ ದಿಲ್ಲಿಯಿಂದ ಹೊರಟು ಕಲಕತ್ತೆಗೆ ಹೋಗುವರು. ಕಲಕತ್ತೆಯಿಂದ ಗೋಹತ್ತಿಗೆ ಹೋಗಿ ಅಲ್ಲಿ ಕೆಲವು ಗಂಟೆ ಕಳೆದು ಶಿಲಾಂಗಿಗೆ ಹೋಗುವರು. ಶಿಲಾಂಗಿನಲ್ಲಿ ಮೂರು ದಿನ ಕಳೆದು ೧೮ ನೇ ತಾರೀಕು ಕಲಕತ್ತೆಗೆ ಮರಳುವರು. ಕಲಕತ್ತೆಯಲ್ಲಿ ಇಪ್ಪತ್ತೊಂದನೆಯ ತಾರೀಕಿನವರೆಗೆ ಉಳಿದು ಅಲ್ಲಿಂದ ಹಂಪಿಗೆ ಹೊರಡುವರು. ಸಧ್ಯದ ತುಂಗಭದ್ರಾ ಅಣೆಕಟ್ಟಿನಿಂದ ಹಂಪಿಯಲ್ಲಿಯ ಐತಿಹಾಸಿಕ ಅವಶೇಷಗಳಿಗೆ ಹಾನಿತಟ್ಟುವ ಸಂಭವವಿದ್ದುದರಿಂದ ಆ ಅಣೆಕಟ್ಟಿನ ಸಂಬಂಧದಲ್ಲಿ ಬೇರೆ ಯೋಜನೆ ಶಕ್ಯವಿದೆಯೊ ಹೇಗೆಂಬುದನ್ನು ವಿಚಾರಿಸಲು ಪ್ರಾಚ್ಯವಸ್ತು ಸಂಶೋಧನ ಶಾಖೆಯ ಉಪಸಮಿತಿಯ ಸಭೆಯು ಹಂಪಿಯಲ್ಲಿ ಸೇರುವದಿದ್ದು ಆ ಸಭೆಯ ಕಾರ್ಯಕಲಾಪಗಳಲ್ಲಿ ಶ್ರೀ. ದಿವಾಕರರು ಭಾಗವಹಿಸುವರು. ಅವರು ಆ ಉಪಸಮಿತಿಯ ಸದಸ್ಯರಿರುವರು. ಈ ಸಭೆಗಾಗಿ ಪ್ರಾಚ್ಯವಸ್ತು ಸಂಶೋಧನ ಶಾಖೆಯ ಡಾಯರೆಕ್ಟರ ಜನರಲ್‌ರು ಬರಲಿರುವರು.

ಹಂಪಿಯಲ್ಲಿಯ ಕಾರ್ಯಕಲಾಪಗಳನ್ನು ಮುಗಿಸಿಕೊಂಡು ಶ್ರೀ ದಿವಾಕರರು ೨೪ ಕ್ಕೆ ಬಳ್ಳಾರಿಗೆ ಬರುವರು. ಅಲ್ಲಿಂದ ೨೫ ನೇ ತಾರೀಕು ಮುಂಜಾನೆ ಹುಬ್ಬಳ್ಳಿಗೆ ಬರುವರು. ಹುಬ್ಬಳ್ಳಿಯಲ್ಲಿ ಇರುವಾಗ ಅವರು ಬೆಳಗಾವಿ, ವಿಜಾಪುರ ಜಿಲ್ಲೆಗಳಲ್ಲಿಯ ಕೆಲವು ಸ್ಥಳಗಳಿಗೆ ಮತ್ತು ಬಾಗಲಕೋಟೆಗೆ ಭೆಟ್ಟಿ ಕೊಡುವರು. ಅನಂತರ ಅವರು ಮೇ ತಿಂಗಳು ಮೊದಲ ವಾರದಲ್ಲಿ ಮೈಸೂರು ಕಾಂಗ್ರೆಸ್ಸಿನ ಶ್ರೀ ಟಿ. ಸಿದ್ದಲಿಂಗಯ್ಯ ಮತ್ತು ನಿಜಲಿಂಗಪ್ಪ ಇವರ ಜೊತೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸಂಚರಿಸುವರು. ಇದೇ ಅವಧಿಯಲ್ಲಿ ಕರ್ನಾಟಕ ಏಕೀಕರಣ ಮಹಾಸಮಿತಿಯ ಮತ್ತು ಪ್ರಾಂತೀಯ ಕಾಂಗ್ರೆಸ ಸಮಿತಿಯ ಸಭೆಗಳು ಸೇರುವುವು. ಶ್ರೀ ದಿವಾಕರರು ಮತ್ತು ನಿಜಲಿಂಗಪ್ಪನವರು ಸರದಾರ ವಲ್ಲಭಭಾಯಿಯವರನ್ನು ಕಂಡು ಪ್ರಾಂತೀಕರಣ ಸಂಬಂಧದ ಮುಂದಿನ ಯೋಜನೆಯ ಬಗ್ಗೆ ಈಗಾಗಲೆ ವಿಚಾರವಿನಿಮಯ ಮಾಡಿರುವರು.

ಜಾಗರೂಕರಾಗಿರೋಣ

ನಾವು ಸ್ವಾತಂತ್ರ್ಯದ ತೀರದಲ್ಲಿ ಬಂದಿಳಿದಿದ್ದರೂ ಸುಖ ಸಮೃದ್ಧಿಗಳ ರಾಜಮಾರ್ಗವನ್ನು ಇನ್ನೂ ಸೇರಿಲ್ಲವಾದುದರಿಂದ ಜಾಗರೂಕರಾಗಿರೋಣ. ನಿಜವಾಗಿ ಕಾಂಗ್ರೆಸ್ಸು ಈಗ ತನ್ನ ಅಂತಃಸತ್ವ ಮತ್ತು ರಚನಾಸಾಮರ್ಥ್ಯದ ಪರೀಕ್ಷೆಗೆ ಗುರಿಯಾಗಿದೆ. ರಾಷ್ಟ್ರದ ಗಂಡಾಂತರ ಕಾಲದಲ್ಲಿ ಜನರನ್ನು ಜಾಗ್ರತಗೊಳಿಸುವ ಮಾತೇ ಬೇರೆ; ಸಾಮಾನ್ಯ ಕಾಲದಲ್ಲಿ ಜನರನ್ನು ಸ್ತಿಮಿತ ವೃತ್ತಿಯಲ್ಲಿಟ್ಟುಕೊಳ್ಳುವ ಕಾರ್ಯವೇ ಬೇರೆ. ಎರಡನೆಯದನ್ನು ಸಾಧಿಸಬೇಕಾದರೆ ಬ್ರಿಟಿಶ ರಾಜ್ಯಕ್ಕೂ ಕಾಂಗ್ರೆಸ್ ಆಳಿಕೆಗೂ ಇರುವ ತಾರತಮ್ಯ ಜನಸಾಮಾನ್ಯರಿಗೆ ಮನವರಿಕೆಯಾಗುವಂಥ ಮಹತ್ವದ ರಾಷ್ಟ್ರನಿರ್ಮಾಣ ಕಾರ್ಯಗಳೇ ಬೇಕು.

ಇದಕ್ಕಾಗಿ ನಾವು ನಮ್ಮ ರಾಷ್ಟ್ರೋದ್ಧಾರದ ಉತ್ಕೃಷ್ಟ ಕಟ್ಟಡವನ್ನು ಸರ್ವಸಮತೆಯ ವಿಶಾಲ ತಳಹದಿಯ ಮೇಲೆ ಕಟ್ಟಬೇಕು. ಅಲ್ಲಿ ಸಂಕುಚಿತ ಪಂಥಗಳಿಗಾಗಿ ಪಕ್ಷಪಾತವೃತ್ತಿಗಾಗಲಿ ಎಡೆಯಿರಕೂಡದು– ಈಚೆಗೆ ದೇಶದಲ್ಲಿ ಪ್ರಜ್ವಲಿಸಿದ ಜಾತೀಯ ತಾಂಡವಕ್ಕೆ ಕಾರಣವಿಲ್ಲದಿಲ್ಲ, ಅದರಿಂದ ನಮಗೊಂದು ಪಾಠವೂ ದೊರಕಿದೆ. ವಿದೇಶೀ ಆಳಿಕೆಯಿಂದ ನಮ್ಮ ರಾಷ್ಟ್ರದ ಮನಸಿನಲ್ಲಿ ಎಷ್ಟು ಗಾಢವಾಗಿ ವಿಷ ಬೆರೆತುಬಿಟ್ಟಿತ್ತೆಂದು ಅದು ತೋರಿಸಿ ಕೊಟ್ಟಿತು. ರೋಗಿಯಾದ ರಾಜ್ಯಕ್ಕೆ ರೋಗದ ನಿದಾನವನ್ನು ಅದು ನಿಚ್ಚಳವಾಗಿ ಮಾಡಿಕೊಟ್ಟಿತು. ಆದರೆ ಒಳಸೇರಿದ ವಿಷವೆಲ್ಲ ಇಷ್ಟರಲ್ಲೆ ಕಾರಿ ಹೋಗಿದೆಯೆಂದೂ ಈಗ ಒಳ ಅಂಗಗಳು ಗುಣಹೊಂದುತಿವೆಯೆಂದೂ ನಂಬೋಣ. ಅದ್ದರಿಂದ ಜಾತೀಯ ಪ್ರಳಯತಾಂಡವಕ್ಕೆ ಮತ್ತೊಮ್ಮೆ ತಲೆಯೆತ್ತಲು ಅವಕಾಶ ಕೊಟ್ಟರೆ ನಾವು ಇತಿಹಾಸದ ಪುನರಾವೃತ್ತಿಗೆಡೆಕೊಟ್ಟು ನಷ್ಟ ಹೊಂದುವದೇ ಸರಿ. ರಾಷ್ಟ್ರೀಯ ಸ್ವಾತಂತ್ರ್ಯ ಅಖಿಚ್ಛಿನ್ನವಾಗಿ ಬಾಳಬೇಕಾದರೆ ಜಾತೀಯತೆಯ ವಿಷವೃಕ್ಷವನ್ನು ಬೇರು ಸಹಿತ ಕಿತ್ತೊಗೆದು ಅದು ಯಾವ ರೂಪದಲ್ಲೂ ಉಳಿಯದಂತೆ ಮಾಡಿ ರಾಷ್ಟ್ರೀಯ ಐಕ್ಯದ ಕಲ್ಲಪಂಚಾಂಗದ ಮೇಲೆ ನವಭಾರತವನ್ನು ನಿರ್ಮಿಸಬೇಕು. ಇದೊಮ್ಮೆ ಕೈಗೂಡಿತೆಂದರೆ ನಾವು ಹಿಮಾಲಯದಂತೆ ದುರ್ಜಯರಾಗುವೆವು.

ಶಾಲೆ, ಪತ್ರಿಕೆ, ಭಾಷಣವೇದಿಕೆ ಮತ್ತು ಆಕಾಶವಾಣಿಯ ಮೂಲಕ ಸರಿಯಾದ ಶಿಕ್ಷಣವನ್ನು ಮನಃಪೂರ್ವಕವಾಗಿ ರಭಸದಿಂದ ಹಬ್ಬಿಸಿದರೇನೇ ಇದು ಶಕ್ಯವಾದೀತು. ಈ ಉಪಖಂಡದ ಅದ್ಯಂತವೂ ಅದು ಪ್ರತಿಧ್ವನಿಸಬೇಕು. ಕಾಂಗ್ರೆಸ್ ಆಳಿಕೆಯೊಂದು ದುಃಸ್ವಪ್ನದಂತಾಗಬಾರದೆಂದಿದ್ದರೆ ಇದೀಗ ನಮ್ಮ ಮುಂದಿರುವ ಕಾರ್ಯ.

ಮತದ ಕ್ಷೇತ್ರಗಳಲ್ಲಿ ಮಾತ್ರವೇ ಈ ಒಡಕಿನ ಶಕ್ತಿಗಳ ಕಾರ್ಯ ಸಾಗಿದೆಯೆಂದಲ್ಲ. ಉದಾಹರಣೆಗೆ, ಭಾರತೀಯ ಪ್ರಾಂತಗಳೂ ಸಂಸ್ಥಾನಗಳೂ ನಿರಾಶ್ರಿತರ ವಿಷಯಕ್ಕೆ ಹೇಗೆ ನಡೆದುಕೊಂಡಿವೆ? ಮಾತೆಯ ಈ ತಬ್ಬಲಿ ಮಕ್ಕಳಿಗಾಗಿ ಎಷ್ಟು ಜನ ಸ್ತ್ರೀಪುರುಷರು ತಮ್ಮ ಬಾಗಿಲುಗಳನ್ನು ತೆರೆದಿದ್ದಾರೆ? ಈ ದುರ್ದೈವಿಗಳ ಸಂಕಟಗಳು ಇನ್ನೂ ನಮ್ಮ ಮನಕರಗಿಸಲಾರವೆ? ಬದಲಾಗಿ ಎಲ್ಲಿ ನೋಡಿದರೂ ಈ ಜನರನ್ನು ಕಂಡರೆ ಹೇಸುವವರೇ ಬಹಳ. ಹಿಂದೆ ರಾಷ್ಟ್ರಜೀವನವನ್ನು ಕೊರೆಯುತಿದ್ದುದು ಧಾರ್ಮಿಕ ಜಾತೀಯತೆಯಾಗಿದ್ದರೆ ಇಂದು ಪ್ರಾಂತೀಯತೆ ಅದಕ್ಕಿಂತ ಕಡಿಮೆ ಅಪಾಯಕರವಾಗಿಲ್ಲ. ನಮ್ಮ ರಾಷ್ಟ್ರದ ಅತ್ಯಂತ ಇಕ್ಕಟ್ಟಿನ ಸಂದರ್ಭದಲ್ಲಿ ಭಾಷಾನ್ವಯ ವಿಭಜನೆಗಾಗಿ ಕಾಂಗ್ರೆಸ್ಸಿನ ಪ್ರಮುಖ ನಾಯಕರೂ ಅಪಸ್ವರ ಎಬ್ಬಿಸುತಿರುವದು ಕ್ಷೇಮದ ಲಕ್ಷಣವಲ್ಲ. ಕಾಂಗ್ರೆಸ್ಸು ಭಾಷಾನ್ವಯ ಪ್ರಾಂತ ಮತ್ತು ವಿಶ್ವವಿದ್ಯಾನಿಲಯಗಳ ತತ್ವವನ್ನು ಒಪ್ಪಿದಾಗ ನಿರಾಶ್ರಿತರ ಸಮಸ್ಯೆಯಿದ್ದಿಲ್ಲ. ಅವರನ್ನು ಸರಿಯಾಗಿ ನೆಲೆಗೊಳಿಸುವಲ್ಲಿ ನಾವು ಆ ತತ್ವವನ್ನು ಪುನರ್ವಿಮರ್ಶಿಸಬೇಕಾಗಿದೆ. ನಿರಾಶ್ರಿತರ ಪುನರ್ನಿವೇಶನದ ಸಮಸ್ಯೆಯನ್ನು ಬಗೆಹರಿಸಲು ಇದು ಸರಕಾರಕ್ಕೆ ನೆರವಾದೀತೆ? ಭಾರತದಲ್ಲಿ ಹೆಚ್ಚು ಐಕ್ಯಕ್ಕೆ ಇದು ಪ್ರೇರಕವಾದೀತೆ? ಸರ್ವಥಾ ಇಲ್ಲ. ಇದು ಖಂಡಿತವಾಗಿ ಪ್ರತಿಗಾಮಿ ಹೆಜ್ಜೆ.

ಅದ್ದರಿಂದ ಪ್ರಾಂತೀಯತೆಯನ್ನು ಮೊಳಕೆಯಲ್ಲೆ ಚಿವುಟಿ ಒಗೆಯದಿದ್ದರೆ ದೇಶದ ದುರವಸ್ಥೆಯನ್ನು ನೀಗಿಸುವ ಸರಕಾರದ ಪ್ರಯತ್ನವೆಲ್ಲ ಮಣ್ಣುಗೂಡದಿರದು. ಭಾಷಾವಾದದಿಂದ ಪ್ರಾಂತೀಯತೆ ಬೆಳೆಯುವದು. ಒಮ್ಮೆ ಅದು ಜನರ ಮನದಲ್ಲಿ ನೆಲೆಯೂರಿತೆಂದರೆ ಪರಿಣಾಮವು ಧಾರ್ಮಿಕ ತಾಂಡವದಷ್ಟೇ ಭಯಾನಕವಾಗುವದು. ಹಾಗಾದರೆ, ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯ ಬೆರಳ ಸಂದಿಗಳಲ್ಲಿ ಸರಿದು ಕೈತಪ್ಪಿ ಹೋಗಿ, ರಾಷ್ಟ್ರ ಎಂದಿನಂತೆ ಬರಿಗೈಯಲ್ಲೆ ಉಳಿಯುವದು.

ಆದರೆ ಇನ್ನೂ ಹೊತ್ತು ಮೀರಿಲ್ಲ. ಎಲ್ಲರೂ ತಾಳ್ಮೆ ವಹಿಸಿದರೆ ಅತಿ ಕಡಿಮೆ ಅವಧಿಯಲ್ಲಿ ಅತ್ಯಂತ ಘನತರವಾದ ಸಾಧನೆಗಳನ್ನು ಕೈಗೂಡಿಸಿಕೊಳ್ಳಬಹುದು. ನಾವು ಮಾತ್ರ ಜಾಗರೂಕರಾಗಿರೋಣ.

— ಹೇಮನ್‌ದಾಸ ಮನಚಂದಯಾ

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

ತಾ. ೬

ಹಣದ ಮುಗ್ಗಟ್ಟು ಇನ್ನೂ ಕಡಿಮೆಯಾಗಿಲ್ಲ. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ಇನ್ನೂ ಇಳಿಮೊಗವಾದವು. ಜವಳಿ ಪಾಲುಗಳಲ್ಲಿ ಡಾಯಿಂಗ ಸ್ವಲ್ಪ ಸುಧಾರಿಸಿದ್ದರೂ ಉಳಿದವು ಅಷ್ಟು ಏಳಿಗೆ ಹೊಂದಿಲ್ಲ. ಇಂದಿನ ಕೊನೆಯ ದರಗಳು ಹೀಗಿದ್ದವು:

ಕೋಹಿನೂರು	೨೮೬–೮–೦
ಮುಂಬಯಿ ಡಾಯಿಂಗ್	೯೮೭–೪–೦
ಸ್ವದೇಶಿ	೨೯೮–೮–೦
ಗೋಕಾಕ	೨೯೧–೮–೦
ಸೆಂಚುರಿ	೨೫೧–೪–೦
ಸೆಂಟ್ರಲ್ ಇಂಡಿಯಾ	೨೪೮–೮–೦
ಫಿನ್ಲೆ	೨೭೮–೦–೦
ಬೇಲಾಪುರ ಸಕ್ಕರೆ	೨೧೪–೮–೦
ಟಾಟಾ ಸ್ಟೀಲ ಡೆಫರ್ಡ	೧೪೨೧–೪–೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೮೮೦–೮–೦
ಬ್ಯಾಂಕ ಆಫ್ ಇಂಡಿಯಾ	೧೯೦–೦–೦
ಸೆಂಟ್ರಲ ಬ್ಯಾಂಕ್	೮೩–೧೨–೦

ಚಿನ್ನ ಬೆಳ್ಳಿ

ಚಿನ್ನದ ಬೆಲೆ ಇನ್ನೂ ಹೆಚ್ಚು ಏರುವ ಲಕ್ಷಣಗಳಿಲ್ಲ. ಇಂದಿನ ದರಗಳು ಇಂತಿದ್ದವು:

ಚಿನ್ನ ತಯಾರಿ	೧೦೯–೧೦–೦
,, ವಾಯದಾ	೧೦೭–೧೦–೦
ಬೆಳ್ಳಿವಾಯದಾ ಮತ್ತು ತಯಾರಿ	೧೭೩–೨–೦

ಅರಳೆ

ಅರಳೆ ಪೇಟೆಯಲ್ಲಿ ವ್ಯವಹಾರವಿಲ್ಲ.

ಶಿವಮೊಗ್ಗೆ

ತಾ. ೮

ದೇಶಾವರ ನಂ. ೧	೩೦–೩೩
,, ೨	೨೭–೩೦
ರಾಜಾ ಅಲವು	೨೭–೨೯
ತೊರಸಾಲು	೨೫–೨೮
ಬೆಟ್ಟವಂತಿ	೧೯–೨೦
ಬೆಟ್ಟೆ	೧೬–೧೮
ಸೀಗೆಕಾಯಿ	೮

ಬೇಡಿಕೆ ಚನ್ನಾಗಿದೆ.

ಹುಬ್ಬಳ್ಳಿ

ತಾ. ೭

ಜ. ಹತ್ತಿಕಾಳು	(೧ ರೂ. ಗೆ)		೭ ಪೌಂ.
ವಿ. ಹತ್ತಿಕಾಳು	(೧ ರೂ. ಗೆ)		೫½ ಪೌಂ.
ಕುಸುಬಿ	(ಬ. ಮಣಕ್ಕೆ)	೧೫.೦-೦	೧೫–೬–೦
ಅಗಸಿ	(ಚೀಲಕ್ಕೆ)	—	೩೯–೦–೦
ಔಡಲ	,,		೩೯–೦–೦
ಜ. ಹೆಸರು	,,	೪೪–೮–೦	೪೬–೮–೦
ಕರಿ ಎಳ್ಳು	,,		೬೪–೬೬
ಬಿಳಿ ಎಳ್ಳು	,,		೭೩
ಕಡಲೆ	,,	೫೫ ೫-೭	೫೬–೧೪–೨
ಜ. ತೊಗರಿ	,,		೩೪–೩೫
ಹುರಳಿ	,,		೩೫–೩೬
ಕೆಂ. ಅಲಸಂದಿ	,,		೫೫–೫೬
ಬಿ. ಅಲಸಂದಿ	,,		೫೬–೦-೦
ಶೇಂಗಾ (ಹೇರು)			೪೮–೫೦
ಶೇಂಗಾ ಕಾಳು			೬೯—೭೦

● ಕೇಂದ್ರ ಸರಕಾರದವರು ಮದ್ರಾಸ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ಮನ್ನಣೆ ಹೊಂದಿದ ವಿದ್ಯಾಲಯದ ಮ್ಯಾಟ್ರಿಕ ಪರೀಕ್ಷೆಗೆ ಸಮಾನವೆಂದು ಭಾವಿಸಿ ನೇಮಕಗಳನ್ನು ಮಾಡುವದಾಗಿ ಸಾರಿದ್ದಾರೆ.

● ಮದ್ರಾಸ ಜಮೀನದಾರಿ ನಿರ್ಮೂಲನ ಮಸೂದೆಗೆ ಗವರ್ನರ ಜನರಲ್‌ರು ತಮ್ಮ ಸಮ್ಮತಿಯನ್ನಿತ್ತಿದ್ದಾರೆ.

[illegible] ಫ್ರೆಂಚ್ ಕಾದಂಬರಿಗಳು

ಮಹಾಪುರುಷ

[illegible]

ಪುಷ್ಪಲತಾ:

[illegible] ಶ್ರೀ ದಿ. [illegible]

[illegible] ಕೃತಿಗಳನ್ನು ಕನ್ನಡ [illegible] ಎಂದು [illegible] ಬಹುದು. ಆದರೆ ಅಂಥ ಕೃತಿಗಳನ್ನು ಅನು [illegible] ಪ್ರಾಮುಖ್ಯದ ಸಂಗತಿಯ ನನ್ನು ಅನುವಾದಕರು ಗಮನದಲ್ಲಿಟ್ಟು ಕೊಳ್ಳ ಬೇಕಾಗುತ್ತದೆ. ಮೂಲ ಲೇಖಕರಿಗೆ ಅನ್ಯಾಯ [illegible] ಕರ್ತವ್ಯ. "[illegible]" ಕೆಲಸವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಇನ್ನೊಂದು ಭಾಷೆಯ, [illegible] ಅದರಲ್ಲಿ ಚಿತ್ರಿಸಲ್ಪಟ್ಟ ಅಪರಿಚಿತ ಸಮಾಜದ ಕೆಲ ವೈಶಿಷ್ಟ್ಯಗಳು ಅನುವಾದದಲ್ಲಿ ಪೂರ್ಣ ಯಶಸ್ವಿಯಾಗಿ ಇಳಿಯುವದು ಸಾಧ್ಯವೇ ಇಲ್ಲ. ಆದರೂ ಅದಕ್ಕಾಗಿ ತುಂಬ ಪ್ರಯತ್ನ ಮಾಡಲೇಬೇಕು. ಇನ್ನು ಮೂಲವನ್ನು ಸಂಕ್ಷೇಪಿಸುವದೂ ಗಂಡಾಂತರದ ಕೆಲಸವೇ. ಇದರಲ್ಲಿ ಮೂಲ ಲೇಖಕನಿಗೆ ಅನ್ಯಾಯವಾಗುವ ಸಂಭವ ಹೆಚ್ಚು. ಕಲಾಕೃತಿಗಳು ಸಚೇತನ ವಸ್ತುಗಳಂತೆ ಸಾಂಗೋಪಾಂಗವಾಗಿದ್ದರೂ ಒಂದು ಅವಿಭಾಜ್ಯ ಏಕವಾಗಿರುತ್ತವೆ. (ಹಾಗಿಲ್ಲದ ಕೃತಿಗಳನ್ನು ಅನುವಾದಿಸುವದು ವ್ಯರ್ಥ ಶ್ರಮವೇ ಸೈ.) ಅವುಗಳನ್ನು ಸಂಕ್ಷೇಪಿಸಿದರೆ ಎಲುಬಿನ ಹಂದರದಂತಾಗುವವು. ಅನಿವಾರ್ಯವಾಗಿ ಹಾಗೆ ಸಂಕ್ಷೇಪಿಸ ಬೇಕಾದರೂ ತುಂಬ ಎಚ್ಚರದಿಂದ ಆ ಕೆಲಸದಲ್ಲಿ ತೊಡಗಬೇಕು.

ಈ ದೃಷ್ಟಿಯಿಂದ ನೋಡಿದರೆ ಮೇಲೆ ಹೇಳಿದ ಎರಡೂ ಪುಸ್ತಕಗಳಲ್ಲಿ ಮೂಲ ಲೇಖಕರಿಗೆ ಅನ್ಯಾಯವೂ ಕಲಾಕೃತಿಗಳಿಗೆ ಕಾರ್ಶ್ಯವೂ ಬಂದಿದೆಯೆಂದೂ ಹೇಳದೆ ಉಪಾಯವೇ ಇಲ್ಲ. ಎರಡೂ ಇಬ್ಬರು ಜಗದ್ವಿಖ್ಯಾತ, ಅಮರ ಕಲಾವಿದರ ಕೃತಿಗಳು. "ಮಹಾಪುರುಷ"ದ ಮೂಲ ವಿಕ್ಟರ ಹ್ಯೂಗೋನ "ಲೇ ಮಿಜರೆಬಲ್ಸ್"(ದುಃಖಿಗಳು). ಅದು ಜಗತ್ತಿನಲ್ಲೇ ಅತಿಶ್ರೇಷ್ಠ ಕಾದಂಬರಿಯೆಂದು ಹೆಸರುಗೊಂಡಿದೆ. ಅದು ವಿಸ್ತಾರವಾದ ಕೃತಿ ಕನ್ನಡದಲ್ಲಿ ಇದ್ದಕ್ಕಿದ್ದಂತೆ ಅನುವಾದಿಸಿದರೆ ೨೦೦೦ ಪುಟಗಳಷ್ಟಾಗಬಹುದೇನೊ. ಆದರೆ ಡಾಕ್ಟರ ನಾರಾಯಣ ಶಾಸ್ತ್ರಿಗಳು ಅದನ್ನು ಬರಿ ೨೦೦ ಪುಟಗಳಲ್ಲಿ ಹುದುಗಿಸಲು ಪ್ರಯತ್ನಿಸಿದ್ದಾರೆ. ಇದರಿಂದ ಕತೆ ನಿಟ್ಟೋಟದಿಂದ ಓಡಿ, ಅದರ ಸರಿಯಾದ ರೂಪವನ್ನು ಗ್ರಹಿಸುವದೇ ಅಸಾಧ್ಯವಾಗಿಬಿಟ್ಟಿದೆ. ಮಾನವ್ಯ ಧರ್ಮ ಪ್ರತಿಪಾದನದ ಅತ್ಯುತ್ತಮ ಕಲಾಕೃತಿಯಿದು. ಹತ್ತೊಂಬತ್ತು ವರ್ಷಗಳ ಸೆರೆಮನೆಯ ನಂತರ ಮನುಷ್ಯದ್ವೇಷದೊಡನೆ ಹೊರಬಂದ ಬಂದಿಯೊಬ್ಬನ ಹೃದಯದಲ್ಲಿ ಪಾದ್ರಿಯೊಬ್ಬನ ಒಂದೇ ಒಂದು ಕ್ಷಮಾಮಯ, ಪ್ರೇಮಮಯ ಕೃತಿಯಿಂದಾದ ಅದ್ಭುತ ಪರಿವರ್ತನೆಯೆ ಕಥಾವಸ್ತು. ಸಂಕ್ಷಿಪ್ತ ಅನುವಾದದಲ್ಲಿಯೂ ಮೂಲದ ಅಪೂರ್ವ ಸೌಂದರ್ಯದ ಮಿಂಚು ಹೊಳೆಯುತ್ತಿದೆ. ಆದರೆ ಅದು ಬರಿ ಅಸ್ಥಿಪಂಜರ ಮಾತ್ರ. ಪರಿಪೂರ್ಣವಾದ ಮೂಲದ ಅರ್ಧದಷ್ಟಕ್ಕಾದರೂ ಅದನ್ನು ಇಳಿಸಿದ್ದರೆ ಎಷ್ಟೋ ವಾಸಿಯಾಗುತಿತ್ತು. ದೀರ್ಘ ಕಾದಂಬರಿಗಳು ಕನ್ನಡದಲ್ಲಿ ಪ್ರಾಚುರ್ಯಕ್ಕೆ ಬಂದಿರುವ ಈ ಕಾಲದಲ್ಲಿ ಶ್ರೀ. ಶಾಸ್ತ್ರಿಗಳು ಇಷ್ಟು ಮಟ್ಟಿಗೆ ಅದನ್ನು ಕುಗ್ಗಿಸಿದ್ದೇಕೋ ತಿಳಿಯದಾಗಿದೆ. ಅನುವಾದದ ಶೈಲಿ ಸರಳವಾಗಿದ್ದರೂ ಅಷ್ಟು ಸತ್ವಯುತವಾಗಿಲ್ಲ. ಸಂಶಯಚಿತ್ತ ಎಂಬರ್ಥದಲ್ಲಿ "ಸಂಶಯಾಸ್ಪದ", ಭಕ್ತಿಯೆಂಬರ್ಥದಲ್ಲಿ "ಪೂಜ್ಯತೆ" ಮೊದಲಾದ ಅಸಾಧು ಪ್ರಯೋಗಗಳೂ ಅಲ್ಲಲ್ಲಿ ತಲೆದೋರಿವೆ.

[illegible] ಫ್ರೆಂಚ್ ಕಾದಂಬರಿ ಸಮ್ರಾಟನ "ದಿ ಬ್ಲ್ಯಾಕ್ ಟ್ಯೂಲಿಪ್" ನ್ನು (ಪುಷ್ಪಲತಾ) [illegible] ಚಿತ್ರಿಸಿದೆ [illegible]. ಇದು ಫ್ರೆಂಚ್ ಇತಿಹಾಸದ ಹಿನ್ನೆಲೆಯನ್ನಿಟ್ಟುಕೊಂಡು ಬರೆದ ಪ್ರಣಯ ಕಾದಂಬರಿ. ಆದರೆ ಲೇಖಕರು ಅದರ ಇಸವಿ ಮೊದಲಾದವುಗಳನ್ನು ಇದ್ದಂತಿಟ್ಟು ಸ್ಥಳ ಮತ್ತು ಪಾತ್ರನಾಮಗಳನ್ನು ಹಿಂದೀಕರಿ [illegible] ಬಂಗಾಲೀಕರಿಸಿದ್ದಾರೆ. ಇದ [illegible] ಅಸ್ವಾಭಾವಿಕ ವಾತಾವರಣ [illegible]. ಕತೆಯನ್ನು ಹ್ರಸ್ವಗೊಳಿ [illegible]. ಅನುವಾದದಲ್ಲಿ ಶಬ್ದ–[illegible] ದೋಷಗಳು ತಿಕ್ಕಿರಿದು [illegible]. ಮೊದಲನೆ ಪರಿಚ್ಛೇದದ ಮೊದಲನೆ [illegible] "ಅಕನ್ನಡ" ಶೈಲಿಯಿಂದ ಪ್ರಾರಂಭವಾಗಿದೆ. "ಅವನ ದೇಹದಲ್ಲಿ ಹೆಚ್ಚು ಗಾಯಗಳನ್ನು ಮಾಡಿ ತಮ್ಮ ಕರ್ತವ್ಯವನ್ನು ಹೆಚ್ಚಾಗಿ ಪ್ರದರ್ಶಿಸಿದರು", "ಮೃತ್ಯುವನ್ನು ವಿಶ್ವಾಸ [illegible] ತರುವೆವು," "ಉದ್ರೇಕಿತ" [illegible] ವಿಷಯ" (ಸೌಭಾಗ್ಯದ ವಿಷಯವೆಂಬರ್ಥದಲ್ಲಿ) ಮುಂತಾದ ಅಪಪ್ರಯೋಗಗಳಿಗೆ ಲೆಕ್ಕವೇ ಇಲ್ಲ. ಪರಿಚ್ಛೇದ ಸಂಖ್ಯೆಗಳನ್ನು ಸಂಸ್ಕೃತದಲ್ಲಿ ಬರೆಯುವ ಚಪಲ ಅವರಿಗೆ. ಆದರೆ ಅಷ್ಟಾದಶದ ಮೇಲಿನ ಸಂಖ್ಯೆಗೆ ಸರಿಯಾದ ಪ್ರತ್ಯಯ ಹಚ್ಚಲು ಅವರಿಗೆ ಗೊತ್ತಿಲ್ಲ. "ಏಕೋನವಿಂಶ ಪರಿಚ್ಛೇದ"ವೆಂದು ಪ್ರಾರಂಭಿಸಿ ಅದೇ ರೀತಿ ಮುಂದೆ ಸಾಗುತ್ತಾರೆ. ಹತ್ತೊಂಬತ್ತನೆ ಎಂದಾಗಬೇಕಾದರೆ ಏಕೋನವಿಂಶ ಪರಿಚ್ಛೇದ ಎನ್ನಬೇಕೆಂದು ಗೊತ್ತಿಲ್ಲದ ಮೇಲೆ ಈ ಚಪಲವೇಕೆ? ಇನ್ನೂ ಅನೇಕ ಐರೋಪ್ಯ ಕೃತಿಗಳನ್ನು ಅನುವಾದಿಸುವ ಛಲ ಲೇಖಕರಿಗಿದೆ. ಮೂಲ ಲೇಖಕರನ್ನು ದೇವರೇ ಕಾಪಾಡಬೇಕು!

ಸ್ವಾತಂತ್ರ್ಯ ಕಿನ್ನರಿ

[illegible] ಪುಟ ೩೩, ಬೆಲೆ ಮೂರಾಣೆ

[illegible] ಗಳಿವೆ. ಇವೆಲ್ಲ ಸ್ವಭಾವತಃ ಕಾವ್ಯಗೀತಗಳ ಜಾತಿಗೆ ಸೇರಿದವು. ಹಾಡಲು ಅನುಕೂಲವಾಗಿರುವುದು ಅವುಗಳ ಮುಖ್ಯ ಗುಣ. ಅವುಗಳಲ್ಲಿ [illegible] ಸ್ವಾತಂತ್ರ್ಯೋದಯ, ರಾಷ್ಟ್ರಧ್ವಜ, ಗಾಂಧಿ ಮಹಾತ್ಮಾ, ಕಸ್ತೂರಿಬಾ ಮುಂತಾದವೇ ಆದ [illegible] 'ಯಾವ ರೈತ ಬ್ಯಾಡಾಂದಾನಾ' ಎಂಬ ಗೀತ ಸುಂದರವಾಗಿದೆ.

"ತಾನುತ್ತ ನೆಲ
 ತನದೇ ಆದರ
ತಾನಿಟ್ಟ ಬೆಳೆ
 ತನದೇ ಆದರ
ತಾ ಸಾಕಿದ ಕರು
 ತನದೇ ಆದರ
ತಾನಿರುವ ಗೂಡು
 ತನದೇ ಆದರ
ಯಾವ ರೈತ ಬ್ಯಾಡಾಂದಾನಾ
ಸೈ ತಂದಾನು ತಾನಾನಾ"

ಎಂದು ಸಂಗೀತಿಸುವ ಸಾಲು ಶ್ರೀ 'ದಿಸಾ' ಅವರ ಗಮಕವಿದ್ವತ್ತಿ ಕಾವ್ಯವಾಗಿ ಹರಿದ ಪರಿಪಾಕಕ್ಕೆ ನಿದರ್ಶನವಾಗಿದೆ. ಈ ಕವನಗಳಿಗೆ ಕಾವ್ಯರಸಿಕ ರಸಿಕೆಯರು ಸ್ವಾಗತ ಕೊಟ್ಟಾರೆಂಬುದರಲ್ಲಿ ನಮಗೆ ಎಳ್ಳಷ್ಟೂ ಸಂಶಯವಿಲ್ಲ.

ಉದ್ಧಾರ

ಬರೆದವ: ತಿರುಕ ಪ್ರಕಾಶಕರು: ಅನಾಥ ಸೇವಾಶ್ರಮ, ಮಲ್ಲಾಡಿಪೊ. ಹೊಳಲ್ಕೆರೆ ತಾಲೂಕು ಮೈಸೂರ ಸಂಸ್ಥಾನ ೧೩೬ ಪುಟ ರೂ. ೧-೮-೦

ವೃದ್ಧ ವಿವಾಹ, ವಿಧವೆಯರ ಒತ್ತಾಯದ ಬ್ರಹ್ಮಚರ್ಯ ಮೊದಲಾದ ಸಾಮಾಜಿಕ ದುರಾಚಾರಗಳನ್ನು ಹೋಗಲಾಡಿಸುವ ಉದ್ದೇಶದಿಂದ ಬರೆದ ಹಳೆ ಮಾದರಿಯ ಸಂಗೀತ ನಾಟಕ. ನಾಟಕದ ಮುಕ್ತಾಯ ಅಸಹಜವಾಗಿದೆ. ಅತಿ ಸಾಮಾನ್ಯ ಕೃತಿ.

ಜಾತೀಯತೆಯ ಆಸುರೀ ಪ್ರವಾಹ

(೪ ನೆಯ ಪುಟದಿಂದ)

ಆಕಾಶವಾಣಿಯ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರು ಜಾತಿಯನ್ನು ಹೇಳಿರೆಂದು ಹೇಳಿದಾಗ ಹೇಳಲೊಲ್ಲೆವೆಂದು ನಿಜವಾದ ಪ್ರಜಾಸತ್ತೆಯ ಜಾತ್ಯತೀತ ನಡತೆಗೆ ಒಂದು ಮಾದರಿ ಹಾಕಿಕೊಟ್ಟದ್ದು ಪತ್ರಿಕಾ ವಾಚಕರೆಲ್ಲರಿಗೂ ತಿಳಿದ ವಿಷಯ. ಕಾಗದ, [illegible] ಕೋರ್ಟು, ಕಚೇರಿ, ಸಂಘ, ಸಂಸ್ಥೆ ಮುತ್ತು ಇತರ ಸಾರ್ವಜನಿಕ ಸಾಮಾಜಿಕ ಸಭೆ ಸಮಾರಂಭ, ಊಟ ಆಟ ಮುಂತಾದ ಸರ್ವ ಕಾರ್ಯಕ್ಷೇತ್ರಗಳಲ್ಲೂ ಜಾತ್ಯತೀತವೂ ಸರ್ವಸಾಧಾರಣವೂ ಆದ ನಡೆ ನುಡಿ ಆಚಾರ ಅನುಷ್ಠಾನಗಳನ್ನು ಅನುಸರಿಸುವುದು. ನಮ್ಮೆಲ್ಲರ ಕರ್ತವ್ಯವಾಗಿದೆ. ಆಗ ಮಾತ್ರ ಗಾಂಧಿಯವರ ಜಾತ್ಯತೀತ ಹಿಂದುಧರ್ಮದ ಕನಸು ನನಸಾದೀತು; ಹಿಂದುಸಂಸ್ಕೃತಿಯಲ್ಲಿ ಹೊಕ್ಕ ಕೊಳೆ ಬೆರಕೆಗಳು ನಾಶವಾಗಿ ಶುದ್ಧವೂ ತೇಜೋಮಯವೂ ಆಗಿ ಪುನಃ ಅದು ಜಗತ್ತಿಗೆ ಶಾಂತಿಪಾಠವನ್ನು, ಶಾಂತಿಮಂತ್ರವನ್ನು ಔಪನಿಷದಿಕ ರೀತಿಯಿಂದ ಕಲಿಸಲು ಸಮರ್ಥವಾದೀತು. ಅಸ್ಪೃಶ್ಯತೆಯನ್ನು ನಿವಾರಿಸಲೆಂದು ಒಮ್ಮೆ ತದಿತರರು ಆಶುಚಿವಂತರಾಗಿದ್ದ ಕೆಲ ಹರಿಜನರೊಡನೆ ಸಹಪಂಕ್ತಿಭೋಜನ ಮಾಡಿದರು. ಇದನ್ನು ಕಂಡು ಗಾಂಧೀಜಿ ನಕ್ಕರಂತೆ. ಅವರಿಗೆ ಆದರ್ಶ ದ್ವಿಜತ್ವದ ದೈಹಿಕ ಮತ್ತು ಮಾನಸಿಕ ಶಿಕ್ಷಣವನ್ನು ಕೊಟ್ಟು ಮೇಲಕ್ಕೆತ್ತುವುದನ್ನು ಬಿಟ್ಟು ಆ ದ್ವಿಜರುನ್ನರು ತಾವೇ ಅಶುಚಿಗಳಾಗಿಬಿಟ್ಟದ್ದು ಹಾಸ್ಯಾಸ್ಪದವಲ್ಲವೆ? ಅದೇ ಮೇರೆಗೆ ಹಿಂದುಳಿದವರು ಕೇವಲ ಅಧಿಕಾರಸ್ಥಾನಗಳನ್ನು ಬಲಾತ್ಕಾರದಿಂದ ಪಡೆದುಕೊಳ್ಳಹೋದರೆ ಅವರಿಗೆ ನಿಜವಾದ ವಿದ್ವದ್ಯೋಗ್ಯತಾವಂತಿಕೆ ಮತ್ತು ಕೀರ್ತಿಗಳು ಎಂದಿಗೂ ಹಸ್ತಗತವಾಗಲಾರವು; ಅದರ ಬದಲು ದೇಶದಲ್ಲಿ ಉಳಿದ ಅಲ್ಪಸ್ವಲ್ಪ ಸಂಸ್ಕೃತಿಯೂ ಕೊನೆಗೊಂಡು [illegible] ಇಲ್ಲವಾದೀತು.

ಬಾದಶಹ ಮತ್ತು ಬಾಲಿಕೆ

(೩ನೆಯ ಪುಟದಿಂದ)

ನಿಮಿಷವೂ ಯುದ್ಧವನ್ನು ನಿಲ್ಲಿಸಲಿಲ್ಲ. ಅವನ ಸ್ಥಳಕ್ಕೆ ಬೇರೊಬ್ಬ ಬಂದ: ನೀನು ಸತ್ತರೆ ನಿನ್ನ ಸ್ಥಳದಲ್ಲಿ ಬೇರೊಬ್ಬರು ಬರುವವರಿಲ್ಲವೇ?"

"ನನ್ನ ಮಗ ಇರುವನು."

"ಅಂದ ಮೇಲೆ ನೀನು ನಿನ್ನ ಸೈನಿಕರಿಗೆ ಇಂಥ ಸುಳ್ಳನ್ನೇಕೆ ಹೇಳಿದೆ?"

"ಹೇಳಬೇಕಾಯಿತು. ಕೈಸರನಕೆಲಸ ಇದೇ. ಅವನು ಹೇಳಿದ್ದರಲ್ಲಿ ಉಳಿದವರಿಗೆ ನಂಬುಗೆ ಇರುವದಿಲ್ಲ; ಅವನಿಗೂ ಇರುವದಿಲ್ಲ. ಇಂದು ನಾನು ನನ್ನ ಸೈನಿಕರಿಗೆ ಇದನ್ನು ಹೇಳುತ್ತಿದ್ದಾಗ, ಅವರ ಮುಖದ ಮೇಲೆ ಅವರಿಗೆ ನನ್ನಲ್ಲಿ ನಂಬುಗೆ ಇದ್ದ ಲಕ್ಷಣವಿದ್ದಿಲ್ಲ. ನನಗಾದರೂ ನಾನು ನನ್ನ ಹೇಡಿತನಕ್ಕಾಗಿ ನೆವಗಳನ್ನು ಹೇಳುತಿದ್ದೇನೆ ಎಂದೆನಿಸಿತು. ಆದ್ದರಿಂದ ರಾತ್ರಿಯಾದ ಕೂಡಲೆ ಮಲಗಿದಂತೆ ನಟಿಸಿದೆ. ನನ್ನ ಪರಿಚಾರಕರೆಲ್ಲ ದೂರ ಸರಿದ ನಂತರ ಮೆಲ್ಲನೆ ಎದ್ದು; ನಾನು ಹೇಡಿಯಲ್ಲ ನೆಂಬುದನ್ನು ಖಂಡಿತ ಮಾಡಿಕೊಳ್ಳಲು ಇಲ್ಲಿಗೆ ಬಂದೆ. ಆದುದರಿಂದಲೇ ಬೆಳಕಿನ ಗುಂಡುಗಳು ನನ್ನ ಬದಿಯಿಂದಲೇ ಹಾದು ಹೋದರೂ ನಾನು ಸ್ಥಿರವಾಗಿಯೇ ನಿಲ್ಲುತ್ತೇನೆ"

"ಇದನ್ನೇ ಹಗಲಲ್ಲಿ ಏಕೆ ಮಾಡುವದಿಲ್ಲ?"

"ಅವರು ಬಿಡುವದಿಲ್ಲ."

"ಅಯ್ಯೊ ಪಾಪ! ನೀನು ನಾಳೆ ಯುದ್ಧಕ್ಕೆ ಹೋಗು. ನಿನಗೆ ಗಾಯಗಳಾಗುವದಿಲ್ಲ. ಆದರೂ ನಾನು ನೀರು ತಂದುಕೊಡುತ್ತೇನೆ."

ಇದನ್ನು ಕೇಳಿಬಾದಶಹನಿಗೆ ಆ ಹುಡುಗಿಯ ಮೇಲೆ ಬಹಳ ಮಮತೆ ಉಂಟಾಯಿತು. ಅವನು ನಸುನಕ್ಕನು ಮತ್ತು ಅವಳಿಗೆ ಮೆಲ್ಲಗೆ ಒಂದು ಮುದ್ದುಕೊಟ್ಟನು. ನಂತರ ಅವಳನ್ನು ಮನೆಗೆ ಮುಟ್ಟಿಸಲು ಎದ್ದು ನಿಂತನು. ಆ ಹುಡುಗಿಗಾದರೂ ಬಾದಶಹನ ಸಲುವಾಗಿ ಅತ್ಯಂತ ಆದರವೆನಿಸಿತು. ಅವಳು ಅವನ ಬೆರಳನ್ನು ಹಿಡಿದು ಎದ್ದು ನಿಂತಾಗ ಉಳಿದ ಜಗತ್ತನ್ನೆಲ್ಲ ಮರೆತಿದ್ದಳೆಂದೇ ಹೇಳಬಹುದು. ಇದೇ ಸಮಯದಲ್ಲಿ ಒಂದು ಬೆಳಕಿನ ಗುಂಡು ದೂರಕ್ಕೆ ಸಿಡಿದು ಹೋದರೂ ಇವರಿಬ್ಬರಿಗೂ ಅದರ ಅರಿವು ಇದ್ದಿಲ್ಲ.

ಮರುಕ್ಷಣವೇ ಒಂದು ಭಯಂಕರ ಧ್ವನಿಯಾಯಿತು. ಒಂದು ಗುಂಡು ಕತ್ತಲೆಯಿಂದ ತೂರಿಕೊಂಡು ಬಂದಿತು. ಬಾದಶಹ ತಿರುಗಿ ನೋಡಿದನು. ಅವನು ಹಾಗೆ ನೋಡಿದಾಗ ಇನ್ನೆರಡು ಗುಂಡುಗಳು ಹಾರಿದವು. ಮತ್ತು ಆಕಾರದಿಂದ ದೊಡ್ಡದಾದ ಇನ್ನೊಂದು ಗುಂಡು ಅವರ ದಿಕ್ಕಿಗೆ ಮದ್ದಾನೆಯಂತೆ ಉನ್ಮತ್ತವಾಗಿ ಪೆಟ್ಟು ತಿಂದ ಹುಲಿಯಂತೆ ಗರ್ಜಿಸುತ್ತ ಪ್ರಚಂಡವೇಗದಿಂದ ಬರುತ್ತಿತ್ತು. ಮೊದಲನೇ ಗುಂಡು ಬಾದಶಹನಿಂದ ಸ್ವಲ್ಪ ದೂರದಲ್ಲಿ ಬಿದ್ದು ಒಡೆಯಿತು. ಬಾದಶಹನ ಕಿವಿಗಳು ಗಡಚಿಕ್ಕಿದವು. ಎರಡನೇ ಗುಂಡು ಬರುತ್ತಲೇ ಇತ್ತು.

ಬಾದಶಹನು ಅಪಘಾತದಿಂದ ಪಾರಾಗಲು ನೆಲದ ಮೇಲೆ ಬಿದ್ದನು. ಕೂಡಲೆ ಅವನಿಗೆ ಆ ಚಿಕ್ಕ ಹುಡುಗಿಯ ನೆನಪಾಯಿತು. ಅವಳು ಚೂರು ಚೂರಾಗಿರಬಹುದೆಂದು ಅವನು ಬಗೆದನು ಮತ್ತು ಅವನು ತನ್ನನ್ನು ತಾನೆ ಮರೆತವನಂತೆ ಆ ಹುಡುಗಿಯ ಮೇಲೆ ಬಿದ್ದು ಅವಳ ರಕ್ಷಣೆ ಮಾಡಬೇಕೆಂದು ಎದ್ದು ನಿಲ್ಲಲನುವಾದನು.

ಬಾದಶಹನೇಳುವ ಮೊದಲೇ ಇನ್ನೊಂದು ಪ್ರಚಂಡ ಗರ್ಜನೆಯಾಯಿತು. ಬಾದಶಹನು ಇಂತಹ ಪ್ರಚಂಡ ಗರ್ಜನೆಯನ್ನು ಇನ್ನೂ ವರೆಗೂ ಕೇಳಿದ್ದಿಲ್ಲ. ಅವನು ಎದ್ದು ನಿಂತಾಗ ತಾನು ತಲೆಯ ಮೇಲೆ ನಿಂತಿರುವನೊ ಇಲ್ಲವೇ ಕಾಲ ಮೇಲೆ ನಿಂತಿರುವನೋ ಎಂಬುದೆ ಅವನಿಗೆ ತಿಳಿಯಲೊಲ್ಲದಾಗಿತ್ತು. ಕೊನೆಗೆ ಒಂದು ಗಿಡದ ಆಧಾರದಿಂದ ಅವನು ಎದ್ದು ನಿಂತನು. ಆ ಗುಂಡುಗಳು ಹಾರಿದಾಗ ತಾವು ಆ ಗಿಡದಿಂದ ಬಹಳ ದೂರವಿದ್ದೆನೆಂಬುದು ಅವನಿಗೆ ಗೊತ್ತಿತ್ತು. ಅಂದರೆಗುಂಡು ಹಾರಿದ ನಂತರ ಅದರ ಸ್ಫೋಟದಿಂದ ತಾನು ಇಲ್ಲಿಯವರೆಗೆ ಹಾರಿ ಬಿದ್ದಿದ್ದೇನೆ ಎಂದು ಅವನಿಗೆ ಎನಿಸಿತು. ಕೂಡಲೇ ಆ ಹುಡಿಗೆಯ ನೆನಪಾಗಿ ಅವನು ನುಡಿದನು, "ಆ ಹುಡುಗಿ ಎಲ್ಲಿ?"

"ಇಲ್ಲಿ" ಅವನ ಮೇಲಿಂದ ಗಿಡದಲ್ಲಿಂದ ಆ ಹುಡುಗಿಯ ದನಿ ಬಂದಿತು.

"ದೇವರು ದೊಡ್ಡವನು" ಬಾದಶಹನು ನಿಟ್ಟುಸಿರು ಬಿಟ್ಟು ನುಡಿದನು. "ನಿನಗೆ ಪೆಟ್ಟು ಹತ್ತಿಲ್ಲವೇ? ನೀನು ಚೂರು ಚೂರಾಗಿರಬಹುದೆಂದು ನಾನು ಬಗೆದಿದ್ದೆ."

"ನಾನು ಚೂರು ಚೂರಾಗಿದ್ದೇನೆ." ಆ ಹುಡುಗಿಯ ದನಿ ನುಡಿಯಿತು. "ನಾನು ಎರಡು ಸಾವಿರದ ಮೂವತ್ತೇಳು ಸಣ್ಣ ಚೂರಾಗಿದ್ದೇನೆ. ಒಂದನೇ ಗುಂಡು ನನ್ನ ತೊಡೆಯನ್ನು ಸೀಳಿತು. ಎರಡನೆಯದು ನನ್ನ ತಲೆಯನ್ನು ಪುಡಿಮಾಡಿತು. ಮೂರನೆಯದು ನನ್ನನ್ನು ಚೂರು ಚೂರು ಮಾಡುವ ಕಾರ್ಯದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿತು. ನನ್ನ ಕಾಲಿನ ಕಿರಿ ಬೆರಳೇ ಈ ಎಲ್ಲ ಚೂರುಗಳಲ್ಲಿ ಅತಿದೊಡ್ಡದು ಚೂರು. ಇಲ್ಲಿಂದ ಅರ್ಧಮೈಲಿನ ಮೇಲೆ ನನ್ನ ಹೆಬ್ಬೆರಳಿನ ಉಗುರಿನ ಒಂದು ಭಾಗ ಬಿದ್ದಿದೆ. ಆ ಬದಿಯ ಎರಡು ಮೈಲಿನ ಮೇಲೆ ಇನ್ನೊಂದು ಭಾಗ ಬಿದ್ದಿದೆ. ಹೀಗೆಯೆ ಯಾವ ಯಾವ ಭಾಗಗಳು ಯಾವ ಯಾವ ದಿಕ್ಕಿಗೆ ಯಾವಯಾವ ದೇಶಕ್ಕೆ ಹೊರಟಿವೆಯೋ ಯಾರು ಬಲ್ಲರು?"

"ಹೀಗಾಗಬಹುದೆಂದು ನಾನು ಬಗೆದಿದ್ದಿಲ್ಲ" ಬಾದಶಹನು ಪುನಃ ನಿಸ್ಸತ್ವನಂತೆ ನುಡಿದನು. ಆಗ ಅವನ ಮೋರೆಯನ್ನು ಯಾರು ನೋಡಿದ್ದರೂ ಅವನಲ್ಲಿ ಕನಿಕರವನ್ನು ತೋರಿಸುತ್ತಿದ್ದರು. ಆದರೆ ಆ ಹುಡುಗಿಗೆ ಅವನಲ್ಲಿ ಕನಿಕರ ಉಂಟಾಗಲಿಲ್ಲ.

"ನೀನು ಹಾಗೆ ಬಗೆದಿದ್ದೆಯೋ ಇಲ್ಲವೋ ಎಂಬುದನ್ನು ಇನ್ನು ಯಾರು ಕೇಳುತ್ತಾರೆ? ಗುಂಡು ಹಾರಿದಾಗ ನೀನು ನಿನ್ನ ಚಂದ ಅರಿವೆಗಳೊಡನೆ ನೆಲದ ಮೇಲೆ ಹೊರಳಾಡುವದನ್ನು ನೋಡಿ ನನಗೆ ನಗೆ ಬಂದಿತ್ತು. ಈಗಲಾದರೂ ನೀನು ಜೋಲಿಹೊಡೆಯುತಿರುವದನ್ನು ನೋಡಿ ನಗೆ ಬರುತ್ತಿದೆ. ನನ್ನ ಮುತ್ತಜ್ಜ ಸೆರೆ ಕುಡಿದಾಗ ಹೀಗೇ ತೂರಾಡುತ್ತಾನೆ" ಹೀಗೆಂದು ಅವಳು ನಕ್ಕಳು.

ಬಾದಶಹನು ಅವಳ ನಗೆಯನ್ನುಕೇಳಿದನು. ಆದರೆ ಆಶ್ಚರ್ಯವೆಂದರೆ ಇನ್ನೂ ಕೆಲವರು ನಗುತ್ತಿದ್ದಂತೆ ಅವನಿಗೆ ಕೇಳಿಸಿತು.

"ಬೇರೆ ಯಾರು ನಗುತ್ತಿದ್ದಾರೆ?" ಅವನು ಕೇಳಿದನು.

"ಅನೇಕ ಜನರು. ಆ ತಗ್ಗಿನಲ್ಲಿಯ ನಾಲ್ಕು ಗಾಯಾಳುಗಳೂ ಇಲ್ಲಿಯೇ ಇದ್ದಾರೆ. ಮೊದಲನೆಯ ಗುಂಡೇ ಅವರನ್ನು ಆ ತಗ್ಗಿನಿಂದ ಮುಕ್ತಮಾಡಿತು." ಅವರೆಲ್ಲರೂ ಪುನಃ ಬಾದಶಹನನ್ನು ಹಾಸ್ಯಮಾಡಿ ನಕ್ಕರು.

"ನೀವು ನನಗೆ ಕೊಡಬೇಕಾದ ಮನ್ನಣೆಯನ್ನು ಕೊಡಲು ಮರೆಯಬೇಡಿರಿ. ನೀವೇ ನನ್ನನ್ನು ಕೈಸರನನ್ನಾಗಿ ಮಾಡಿದಿರಿ ಮತ್ತು ಸಾಮಾನ್ಯ ಮಾನವನ ಸ್ವಾಭಾವಿಕ ಸ್ವಭಾವಗಳನ್ನು ಮತ್ತು ಕೆಲಸಗಳನ್ನು ನೀವೇ ನನ್ನಿಂದ ಕಸಿದುಕೊಂಡಿರಿ. ಈಗಲೂ ನೀವು ನನ್ನನ್ನು ಒಬ್ಬ ಸಾಮಾನ್ಯ ಮಾನವನಂತೆ ಅಲ್ಲ, ಆದರೆ ನೀವು ನಿರ್ಮಿಸಿದ ಆದರ್ಶದ ಒಂದು ಮೂರ್ತಸ್ವರೂಪವೆಂದು ಆದರಿಸಬೇಕು. ಆದರಿಸಲೇಬೇಕು."

"ಅದನ್ನೆಲ್ಲ ಮಾತನಾಡಿ ಉಪಯೋಗವಿಲ್ಲ. ನಿನ್ನ ಮಾತನ್ನು ಉಲ್ಲಂಘಿಸಿ ಅವರೆಲ್ಲ ಹೋಗಿಬಿಟ್ಟರು. ಆದರೆ ಚಾಳಿಸಹಾಕಿಕೊಂಡ ಬೂಚನೊಬ್ಬನಿದ್ದಾನೆ" ಆ ಹುಡಿಗೆಯ ದನಿ ಹೇಳಿತು.

ಗಿಡದ ಮೇಲಿನಿಂದ ಒಬ್ಬ ಮನುಷ್ಯನ ದನಿ ಮಾತನಾಡಿತು. "ಅವರೊಂದಿಗೆ ನಾನು ಹೋಗಲಿಲ್ಲ. ನನಗೆ ಅವರೊಂದಿಗೆ ಹೋಗುವದು ಸೇರುವದಿಲ್ಲ. ಅವರಿಗೆ ಗೊತ್ತಿದೆ, ನೀನು ನನ್ನನ್ನು ನಿನ್ನ ಮುತ್ತಜ್ಜನ ಸಲುವಾಗಿ ಸುಳ್ಳುಗಳನ್ನು ಹೇಳಲು ನಿಯಮಿಸಿಕೊಂಡಿದ್ದಿ ಎಂದು."

"ಮೂರ್ಖ" ಬಾದಶಹನು ಒರಟಾಗಿ ಒದರಿದನು. "ನಿನ್ನ ಮುತ್ತಜ್ಜನ ಸಲುವಾಗಿ ಯಾದರೂ ನೀನು ಅವರೊಂದಿಗೆ ಸತ್ಯವನ್ನು ಆಡಿದ್ದೀ ಏನು?"

ಇದಕ್ಕೆ ಯಾವ ಉತ್ತರವೂ ಬರಲಿಲ್ಲ. ತುಸು ಹೊತ್ತಿನನಂತರ ಆಹುಡುಗಿ ದನಿ ನುಡಿಯಿತು. "ಅವನೂ ಹೋಗಿ ಬಿಟ್ಟ. ನನ್ನ ನಿನ್ನ ಮುತ್ತಜ್ಜರಿಗಿಂತ ಅವನ ಮುತ್ತಜ್ಜನು ಒಳ್ಳೆಯವನಿರಬಹುದೆಂದು ನನಗೇನು ಎನಿಸುವದಿಲ್ಲ. ಇರಲಿ ನಾನೂ ಹೋಗಬೇಕು. ನಾನು ಮುಕ್ತಳಾಗುವ ಮೊದಲು ನೀನು ನನಗೆ ಮೆಚ್ಚುಗೆಯಾದವನಿದ್ದಿ. ಈಗ ನಿನ್ನ ಮಹತ್ವ ಎನಿಸುವದಿಲ್ಲ."

ಅವಳನ್ನಗಲುವ ಶೋಕದಿಂದ ಕುಗ್ಗಿದ ದನಿಯಲ್ಲಿ ಬಾದಶಹನು ನುಡಿದ "ಇಲ್ಲ, ನಾನು ಮೊದಲಿನಷ್ಟೇ ಮಹತ್ವದವನಾಗಿದ್ದೇನೆ."

"ಆದರೆ ನನಗೆ ಈಗ ಯಾರಮಹತ್ವವೂಇಲ್ಲ. ನಾನೀಗ ಮುಕ್ತಳಾಗಿದ್ದೇನೆ. ಈ ಸ್ಥಿತಿಯು ಹಸಿಯುವ, ಚಳಿಯಿಂದ ನಡುಗುವ ಮತ್ತು ಬೆದರುವ ಸ್ಥಿತಿಗಳಿಗಿಂತಲೂ ಒಳ್ಳೆಯದು. ಈಗ ನನಗೆ ಹಸಿವು ಇಲ್ಲ, ಚಳಿ ಇಲ್ಲ. ನಾನೀಗ ಮುಕ್ತಳಾಗಿದ್ದೇನೆ" ಆ ದನಿ ನುಡಿಯಿತು. "ಒಳ್ಳೇದು ನಾನು ಹೋಗುತ್ತೇನೆ" ಒಂದೆರಡು ನಿಮಿಷ ತಡೆದು ಆ ಹುಡುಗಿ ಮತ್ತೆ ಹೇಳಿತು.

"ತಡೆ, ಅವಸರವೇಕೆ? ಒಂದೇ ನಿಮಿಷ. ನಾನು ಒಬ್ಬಂಟಿಗನಾಗಿದ್ದೇನೆ" ಬಾದಶಹ ಬೇಡಿಕೊಳ್ಳುವ ದನಿಯಿಂದ ನುಡಿದ.

"ಏಕೆ? ನಿನ್ನ ಸೈನಿಕರಿಗೆ ಅವರು ನನಗೆ ಗುಂಡು ಹೊಡೆದಂತೆ ನಿನಗೂ ಹೊಡೆ ಎಂದು ಹೇಳಲ್ಲ? ಅಂದರೆ ನೀನೂ ಮುಕ್ತನಾಗುವಿ. ಆಗ ನಾವಿಬ್ಬರೂ ಬೇಕಾದಷ್ಟು ಹೊತ್ತು ಹಾರಾಡುತ್ತ ಹೋಗಬಹುದು. ಇಲ್ಲದಿದ್ದರೆ ನಾನೀಗಲೇ ಹೋಗುವೆ."

"ಹಾಗೆ ಹೇಳುವದು ನನ್ನಿಂದ ಸಾಧ್ಯವಿಲ್ಲ."

"ಏಕೆ?"

"ಅದು ವ್ಯವಹಾರವಲ್ಲ. ಕೈಸರನು ವ್ಯವಹಾರಿಕ ಮನುಷ್ಯ."

"ವ್ಯವಹಾರ? ವ್ಯವಹಾರಿಕ ಮನುಷ್ಯ? ಅವು ದೊಡ್ಡ ಶಬ್ದಗಳು. ನನಗೆ ತಿಳಿಯುವದಿಲ್ಲ. ಅದು ಏನೇ ಇದ್ದರೂ ಅದನ್ನು ಮೀರುವದು ನಿನಗೆ ಸಾಧ್ಯವಿಲ್ಲವೇ?"

"ಇಲ್ಲ."

"ಹಾಗಾದರೆ ಯಾವನಾದರೂ ಒಬ್ಬ ಟಾಮಿಯಾಗಲಿ, ಹ್ಯಾರಿಯಾಗಲಿ ನಿನಗೆ ಗುಂಡು ಹೊಡೆಯುವ ವರೆಗೆ ತಡೆಯೋಣ. ಎದೆಗುಂದಬೇಡ. ಬೆಳಕಿನ ಗುಂಡುಗಳ ಪ್ರಕಾಶದಲ್ಲಿ ನೀನು ನಿಂತರೆ ಅವರು ತಡಮಾಡದೇ ನಿನ್ನನ್ನು ಮುಕ್ತಮಾಡುವರು. . . . ಸುಮ್ಮನಿರುವಿ. ಮನಸ್ಸಿಲ್ಲವೇ? ಇರಲಿ ಬಿಡು. ಇನ್ನು ನಾನು ಹೋಗುತ್ತೇನೆ. ಆದರೆ ಹೋಗುವ ಮೊದಲು ನಿನಗೊಂದು ಮುದ್ದು ಕೊಡಬೇಕೆಂದೆನಿಸುತ್ತದೆ. ಕಾರಣ ನಾನು ಮುಕ್ತಳಾಗುವ ಮೊದಲು ನೀನು ನನಗೊಂದು ಅತಿ ಮಧುರವಾದ ಮುದ್ದು ಕೊಟ್ಟದ್ದಿ. ಈಗ ನಾನು ಮುದ್ದುಕೊಟ್ಟದ್ದು ನಿನಗೆ ತಿಳಿಯಲಿಕ್ಕಿಲ್ಲ."

ಆದರಂತೆ, ಬಾದಶಹನು ಅದನ್ನು ತಿಳಿದುಕೊಳ್ಳಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಅದು ಅವನಿಗೆ ತಿಳಿಯಲಿಲ್ಲ. ಅವನಿಗೆ ಏನೋ ಕಂಡಹಾಗೆ ಆಯಿತು. ಅವಳು ಮುದ್ದು ಕೊಡುವೆನು ಎಂದು ಹೇಳಿದಾಗ ಅವನು ದನಿ ಬಂದ ದಿಕ್ಕಿನ ಕಡೆಗೆ ನೋಡಿದನು. ಅಲ್ಲಿಂದ ಗುಲಾಬಿ ಬಣ್ಣದ ರೆಕ್ಕೆಯುಳ್ಳ, ಮತ್ತು ದೇಹದ ಮೇಲೆ ಅರಿವೆಯ ಒಂದು ಚೂರು ಇಲ್ಲದ್ದರಅರಿವಿಲ್ಲದ ಒಂದುಹುಡುಗಿಯ ನಿರ್ಮಲವಾದ ಶರೀರವು ಬಾದಶಹನೆಡೆಗೆ ಮೆಲ್ಲಗೆ ಹಾರಿಕೊಂಡು ಬಂದಿತು. ತನ್ನ ಬಾಹುಗಳಿಂದ ಬಾದಶಹನ ದುಷ್ಟವಾದ ಕತ್ತನ್ನು ಬಳಸಿತು. ಮುದ್ದು ಕೊಟ್ಟು ಹಾರಿಹೋಯಿತು.

ಅವಳನ್ನಗಲಿದ್ದರಿಂದ ಅವನಿಗೆ ಬಹಳ ಕಸಿವಿಸಿ ಆದಂತಾಗಿತ್ತು. ಅವನು ಜ್ಞಾನಶೂನ್ಯನಾದಂತೆ ನಿಂತಿದ್ದನು. ಆದರೆ ಕೆಲ ಜನರ ಮಾತಿನ ಸಪ್ಪಳ ಅವನನ್ನು ಈ ಜಾಗ್ರತ ಸ್ವಪ್ನದಿಂದಎಚ್ಚರಿಸಿತು. ಅವರು ಅವನ ಪರಿವಾರದವರಾಗಿದ್ದರು. ಅವನಿಗೆ ಎಲ್ಲಿಯಾದರೂ ಗುಂಡುಗಳು ತಗಲಿವೆಯೋ ಎಂದು ಅವರು ಅತ್ಯಂತ ಆದರದಿಂದ ಕೇಳಿದರು. ತನ್ನ ಸಮಾಧಿಗೆ ಭಂಗ ತಂದಿದ್ದಕ್ಕಾಗಿ ಬಾದಶಹನಿಗೆ ಕೋಪ ಬಂದಿತು. ಒಂದೆರಡು ನಿಮಿಷ ಅವನಿಗೆ ಸಿಟ್ಟಿನಿಂದ ಮಾತನ್ನೂ ಆಡಲಾಗಲಿಲ್ಲ. ಕೊನೆಗೆ ಅತಿ ಒರಟಾಗಿ ಉದ್ಧಟನಂತೆ ಅವನು ಕೇಳಿದ್ದೇನಂದರೆ, "ನಾನು ಬಿಟ್ಟು ಬಂದ ಜೈಲಿನ ದಾರಿ ಯಾವುದು?" ಆದರೆ ಅವರಿಗೆ ತಾನು ಅಂದದ್ದರ ಅರ್ಥವಾಗಲಿಲ್ಲ ಎಂದು ತೋರಿ ಬಂದದ್ದರಿಂದ ಮತ್ತು ಅವರು ತನ್ನನ್ನು ಹುಚ್ಚರನ್ನು ನೋಡಿದಂತೆ ನೋಡುತ್ತಿದ್ದಾರೆಂದು ತಿಳಿದು ಬಂದದ್ದರಿಂದ ಅವನು ಸ್ವಲ್ಪ ಸುಧಾರಿಸಿಕೊಂಡು ತಾನು ಬಿಟ್ಟು ಬಂದ ಡೇರೆಯ ದಾರಿಯನ್ನು ಕೇಳಿದನು. ಅವರು ತೋರಿಸಿದರು. ಅವನು ಮುಂದೆ ಮುಂದೆ ಮೆಲ್ಲಗೆ ಸಾಗಿದನು. ಅವರು ಹಿಂದೆ ಹಿಂದೆ ಮೆಲ್ಲಗೆ ಹೊರಟರು. ಅವನು ಡೇರೆಯ ಸಮೀಪ ಬಂದಹಾಗೆಲ್ಲ ಕಾವಲುಗಾರರು ಅವನು ಡೇರೆ ಮುಟ್ಟುವ ವರೆಗೂ ಸಲಾಂ ಮಾಡಿದರು. ಅವನು ಎಲ್ಲರನ್ನು ಬೀಳ್ಕೊಟ್ಟನು ಮತ್ತು ಮಲಗಲು ಹೊರಟನು. ಆಗ ಆ ಇಬ್ಬರು ಪರಿಚಾರಕರು ಏನಾದರೂ ಸಂಭವಿಸಿದ್ದರೆ ವರದಿ ಕೊಡುವದಿದೆಯೋ ಎಂದು ಕೇಳಿದರು. ಇವನು "ನೀವಿಬ್ಬರೂ ಹುಚ್ಚರಿದ್ದೀರಿ" ಎಂದು ಹೇಳಿದನು.

ಅವರಿಬ್ಬರೂ ಒಬ್ಬರನ್ನೊಬ್ಬರು ಪರೀಕ್ಷಿಸುವಂತೆ ನೋಡಿಕೊಂಡರು ಮತ್ತು ಮೆಲ್ಲನೆ ನುಡಿದರು, "ಜನಾಬರು ಕುಡಿದಂತೆ ತೋರುತ್ತದೆ." ಆದರೆ ಪುಣ್ಯಕ್ಕೆ ಇದು, ಆ ಚಿಕ್ಕ ಹುಡುಗಿಯ ವಿಚಾರದಲ್ಲಿ ಗುಂಗಾದ ಬಾದಶಹನಿಗೆ ಕೇಳಲಿಲ್ಲ.

● ಕಾಂಗ್ರೆಸ್ಸಿನ ಅಧ್ಯಕ್ಷರು ಅಲಹಾಬಾದದಿಂದ ಮೈಸೂರ ಸಂಸ್ಥಾನ ಕಾಂಗ್ರೆಸ್ಸಿನವರಿಗೆ ೧೯೪೭ ಮೇ ತಿಂಗಳ ೨ ತಾ|| ಗೆ ಕಳಿಸಿದ ಪಾರ್ಸಲು ಮೊನ್ನೆ ಅಂದರೆ ೧೯೪೦ ಮಾರ್ಚ ೩೧ ಕ್ಕೆ ಅಂದರೆ ೨ ವರ್ಷ ಹತ್ತು ತಿಂಗಳುಗಳ ನಂತರ ಬೆಂಗಳೂರಿಗೆ ಬಂದು ತಲುಪಿದೆ. ಪಾವತಿ ಪುಸ್ತಕಗಳನ್ನು ಒಳಗೊಂಡ ಆ ಪಾರ್ಸಲನ್ನು ಮೈಸೂರ ಸಂಸ್ಥಾನ ಕಾಂಗ್ರೆಸ್ಸಿನ ಕಾರ್ಯದರ್ಶಿಯ ಹೆಸರಿಗೆ ಕಳಿಸಲಾಗಿತ್ತು.

ರಾಷ್ಟ್ರಕವಿ ಶ್ರೀ. ಎಂ. ಗೋವಿಂದ ಪೈ

ಲೇಖಕ:— ಪಿ. ಕೆ. ನಾರಾಯಣ, ಮಂಗಳೂರು

ಕನ್ನಡ ಕವಿಯೂ ಸಂಶೋಧಕರೂ ಆದ ಶ್ರೀ ಎಂ. ಗೋವಿಂದ ಪೈಗಳನ್ನು ಮದ್ರಾಸು ಸರಕಾರವು ತಮ್ಮ ಮೊದಲ ಕನ್ನಡ ರಾಷ್ಟ್ರಕವಿಯೆಂದು ಸನ್ಮಾನಿಸಿದುದಕ್ಕಾಗಿ ಕನ್ನಡ ಜನತೆಗಿಂದು ಸಂತೋಷವಾಗಿದೆ. ಅದಕ್ಕಾಗಿ ಮದ್ರಾಸು ಸರಕಾರವನ್ನು ಅಭಿನಂದಿಸಬೇಕು. ತನ್ನೆಡೆಗೆ ಬಂದ ಈ ಗೌರವಲಕ್ಷ್ಮಿಯನ್ನು ಕಡೆಗಣಿಸದೆ ಸ್ವಾಗತಿಸಿದ ಶ್ರೀ ಎಂ. ಗೋವಿಂದ ಪೈಗಳನ್ನೂ ಕನ್ನಡ ಜನತೆಯಿಂದು ಅಭಿನಂದಿಸುತ್ತದೆ.

ಗೋವಿಂದ ಪೈಗಳು ದಕ್ಷಿಣ ಕನ್ನಡದ ರಾಜಧಾನಿಯಾದ ಮಂಗಳೂರಿನ ಪ್ರಸಿದ್ಧ ಮನೆತನದಲ್ಲಿ ಹುಟ್ಟಿದವರು. ಅವರ ತಾಯಿಯ ತವರ್ಮನೆ ಮಂಜೇಶ್ವರದಲ್ಲಿ. ಅವರು ಹುಟ್ಟಿ ಬೆಳೆದುದು ಮಂಜೇಶ್ವರದಲ್ಲಾದರೂ ಅವರ ಹೆಸರಿನ ಮೊದಲಿರುವ 'ಎಂ' ಮಂಗಳೂರನ್ನು ಸೂಚಿಸುತ್ತದೆ.

ಬಾಲ್ಯ ಮತ್ತು ಶಿಕ್ಷಣ

ಗೋವಿಂದ ಪೈಗಳು ೧೮೮೩ ನೇ ಇಸವಿ ಮಾರ್ಚ ತಿಂಗಳ ೨೩ ರಂದು ಜನಿಸಿದರು. ಮಂಗಳೂರಿನ ಸಾಹುಕಾರ್ ತಿಮ್ಮಪ್ಪ ಪೈಗಳವರ ಜನಕರು; ತಾಯಿ ದೇವಕಮ್ಮ. ಶ್ರೀ ಗೋವಿಂದ ಪೈಗಳ ಶಿಕ್ಷಣ ಸರಾಗವಾಗಿ ಸಾಗಲಿಲ್ಲ. ಪ್ರಾಥಮಿಕ ಶಿಕ್ಷಣ ಮಂಜೇಶ್ವರದಲ್ಲಿಯೂ ಮಾಧ್ಯಮಿಕ ಶಿಕ್ಷಣ ಮಂಗಳೂರಲ್ಲಿಯೂ ಕಾಲೇಜು ಮದ್ರಾಸಿನಲ್ಲಿಯೂ ಆಯಿತು. ತಂದೆಯವರ ಅಸ್ವಸ್ಥದಿಂದ ಬಿ. ಎ. ವರ್ಗವನ್ನು ಅರ್ಧಕ್ಕೇ ಬಿಟ್ಟು ಬಂದ ಇವರಿಗೆ ಪುನಃ ಅಭ್ಯಾಸ ಕೈಕೊಳ್ಳಲು ನಾಲ್ಕು ವರ್ಷದ ಮೇಲೆಯೆ ಸಾಧ್ಯವಾಯಿತು. ಇಂಗ್ಲೀಷಿನಲ್ಲಿ ಚಿನ್ನದ ಪದಕ ದೊರಕಿಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಇವರು ಪದವಿಯನ್ನು ಪಡೆಯಲು ಹೋಗಲಿಲ್ಲವಂತೆ!

ಆದರಿಂದಲೇ "ದೊಡ್ಡ ದೊಡ್ಡ ವಿದ್ವಾಂಸರು ನಿರ್ಣಯಿಸಿದ ವಿಚಾರಗಳ ಮೇಲೆ ತೀರ್ಮಾನ ಹೇಳುವಂತಹ ಕೆಲಸವನ್ನು ಇಂತಹ 'ಅಂಡರ್ ಗ್ರಾಜುವೇಟು' ಗಳು ಮಾಡುವುದೇ ?" ಎಂದೊಮ್ಮೆ ಅವರನ್ನು ಒಬ್ಬ ಸಂಪಾದಕ ಮಹಾಶಯರು ಹಳಿದಿದ್ದರಂತೆ.

ಗೋವಿಂದ ಪೈಗಳ ವಿವಾಹವು ೧೯೧೧ರಂದು ಶ್ರೀಮತಿ ಕೃಷ್ಣಾಬಾಯಿಯವರೊಂದಿಗಾಯಿತು. ೧೯೨೭ ರಲ್ಲಿ ಅವರ ಧರ್ಮಪತ್ನಿ ವೈಕುಂಠವಾಸಿಗಳಾದರು. ಇದು ಶ್ರೀಮಾನ್ ಪೈಗಳ ಜೀವನದಲ್ಲೆಲ್ಲಾ ಒಂದು ದೊಡ್ಡ ಪರಿವರ್ತನೆಯ ಘಟನೆಯೆನ್ನಬಹುದು.

ಸಾಹಿತ್ಯಾಭ್ಯಾಸ

ಗೋವಿಂದ ಪೈಗಳು ವಿದ್ಯಾರ್ಥಿ ದಶೆಯಲ್ಲೇ, ೧೮೯೫ ರಲ್ಲಿ–ಎಂದರೆ ೧೨ ನೇ ವಯಸ್ಸಿನಲ್ಲಿ-- ಬರೆಯತೊಡಗಿದರು. ಜಾನಪದ ಗೀತೆಯೊಂದನ್ನು ಕೇಳಿ ತಮಗೆ ಸ್ಫೂರ್ತಿ ಬಂತೆಂದೂ ಆಗ ತಾವು ಒಂದು ನಾಟಕವನ್ನು ಬರೆದೆವೆಂದೂ ಅವರೇ ತಮ್ಮೊಂದು ಲೇಖನದಲ್ಲಿ ಹೇಳಿದ್ದಾರೆ. ಅವರು ವಿವಿಧ ಛಂದಸ್ಸುಗಳಲ್ಲಿ ಕವಿತೆ ಬರೆದು ಓದಿ ಹರಿದು ಹಾಕುತ್ತಿದ್ದರು. ೧೬ ನೇ ವಯಸ್ಸಿನಲ್ಲಿ ಶೇಕ್ಸ್ಪೀಯರ್ ಕವಿಯ Twelfth Night ಎಂಬ ನಾಟಕದ ಮೊದಲನೆ ಅಂಕವನ್ನು ಕಂದವೃತ್ತಗಳಲ್ಲಿ ಬರೆದರಂತೆ. ಅವರು ಈ ರೀತಿಯಲ್ಲಿ ೫ ವರ್ಷ ವರೆಗೆ ಕಾವ್ಯರಚನೆಯ ಅಭ್ಯಾಸವೆಸಗಿದರೂ ಅವರ ಅಭ್ಯಾಸಕವಿತೆಗಳೊಂದೂ ಇಂದಿಗೆ ಅವರಲ್ಲಿ ಉಳಿದಿಲ್ಲ. ೧೯೦೦ ರಲ್ಲಿ "ಸುವಾಸಿನಿ"ಯ ಕುರಿತು ಅವರು ರಚಿಸಿದ ಕೆಲವು ಕಂದ ಪದ್ಯಗಳಿಗೆ ೫ ರೂ. ಬಹುಮಾನ ಬಂದಲ್ಲಿಗೆ ತಮ್ಮ ಜೀವನದ ಸ್ನಾತಕತೆ ಮುಗಿಯಿತೆಂದು ಅವರೇ ಹೇಳಿದ್ದಾರೆ.

ಗೋವಿಂದ ಪೈಗಳ ಕೃತಿಗಳು

೧೯೦೦ ರಿಂದ ಇಂದಿನ ವರೆಗೆ ಗೋವಿಂದ ಪೈಗಳ ಕಾವ್ಯ ರಚನಾ ಕಾರ್ಯ ಎಡೆಬಿಡದೆ ಸಾಗಿದೆಯೆನ್ನಬಹುದು. ಯಾವರೀತಿಯ ಬರಹವಾದರೂ ಅದಕ್ಕೊಂದು ಸ್ಫೂರ್ತಿ ಬರಬೇಕು; ಹೃದಯಾಕಾಶದಲ್ಲಿ ಮಿಂಚೊಂದು ಹೊಳೆಯಬೇಕು; ಅದಕ್ಕೆ ತಕ್ಕ ವಾತಾವರಣವಿದ್ದರೆ ಅವರ ಲೇಖನಿಯು ಹರಿಯುವುದು. ತಡೆ ಬಂದರೆ ಅದು ಅಲ್ಲಿಯೇ ನಿಂತುಹೋಗುವುದು. ಅವರ ಕೃತಿಗಳೆಷ್ಟೋ, ಇದರಿಂದಾಗಿ ಅರ್ಧದಲ್ಲೇ ನಿಂತುಹೋಗಿವೆ. ಒಮ್ಮೆ ಬರೆದುದನ್ನು ನಾಲ್ಕಾರು ಬಾರಿ ತಾವೇ ಓದಿ, ಅದರ ಅರ್ಥದ ಸಕಲ ಧ್ವನಿಗಳನ್ನೂ ಬೇರೆ ಬೇರೆ ರೀತಿಯಾಗಿ ಕೇಳಿ, ತಿದ್ದಿ, ಕೊನೆಗೊಂದು ಪ್ರತಿ ಮಾಡುವರು. ಇಂದಿನ ಎಷ್ಟೋ ಬರೆಹಗಾರರಂತೆ ಸಂಪಾದಕರ ಮೂರನೇ ಭಾಗದವನ್ನು ಮೇಜಿನ ಮೇಲಿಟ್ಟು, ಅವಸರದಿಂದ ಬರೆದು, ಅದನ್ನೊಮ್ಮೆ ಓದುವಷ್ಟು ವೇಳೆಯಿಲ್ಲದೆ, ಅಂಚೆಗೆ ಕಳುಹಿಸುವವರು ಅವರಲ್ಲ.

ಕನ್ನಡದಲ್ಲಿ ಪ್ರಾಸರಹಿತ ಕವನಗಳನ್ನು ಮೊದಲು ಬರೆದವರು ಗೋವಿಂದ ಪೈಗಳೆಂದೇ ತೋರುವುದು. ೧೯೧೧ ರಲ್ಲಿ ಇವರು ಪ್ರಾಸ ರಹಿತ ಕವನವನ್ನು ಬರೆದರು.

> ನಮ್ಮವಳೀ ಭಾರತ ಜನನಿ ॥
> ಭೂಮಂಡಲದಲಿ ರಮಣೀಯಂ
> ಈ ಭಾರತವೆಮ್ಮಯ ನಿಲಯಂ
> ನಾವೀಕೆಯ ಮರಿದುಂಬಿಗಳು,
> ಈಕೆಯೆಮ್ಮ ಜೀವನನಳಿನಿ॥

ಎಂಬುದು ಅವರ ಕವನವೊಂದರ ಚರಣ. ಇದಕ್ಕೆ ಮೂಲವು ಉರ್ದು ಭಾಷೆಯ ಒಂದು ಕವನ ಲಾಗಿದೆ. ಶ್ರೀಮಾನ್ ಪೈಗಳೇ ದಕ್ಷಿಣ ಕನ್ನಡದಲ್ಲಿ ಇಂಗ್ಲೀಷಿನ ಸೊನೆಟ್ ಜಾತಿಯ ಪದ್ಯಗಳನ್ನು ಮೊದಲು ಬರೆದವರು.

ಇವರು ಆಗಾಗ್ಗೆ ಬರೆದ ಕವನಗಳೆಲ್ಲ ೧೯೩೦ ರಲ್ಲಿ "ಗಿಳಿವಿಂಡು" ಎಂಬ ಸಂಗ್ರಹವಾಗಿ ಹೊರಬಿದ್ದಿವೆ. ಆ ಬಳಿಕವೂ ಹಲವಾರು ಸಂಗ್ರಹಗಳಲ್ಲೂ ಅವರ ಕವನಗಳು ಬಂದಿವೆ. "ಉದ್ಘೋಷ"ವೆಂಬ ಕವನಸಂಗ್ರಹದಲ್ಲಿ ಅವರ ದೇಶಭಕ್ತಿಯ ಹಲವು ಕವನಗಳು ಇವೆ.

"ಕವಿಯೋ ಸ್ವಾತಂತ್ರ್ಯ ಮಧು ಕುಡಿವ ಮಧುಕರನು" ಎಂದು ಹಾಡಿದ ಕವಿಭಕ್ತರಾದ ಅವರ ಶೈಲಿಯ ಒಂದು ತುದಿ ಶಾಸನ ಕನ್ನಡದಲ್ಲಾದರೆ ಇನ್ನೊಂದು ತುದಿ ಇಂದಿನ ಆಡುನುಡಿಯಲ್ಲಿದೆ. ಕನ್ನಡದಲ್ಲಿ ಪೈಗಳದೇ ಒಂದು ಶೈಲಿಯೆನ್ನಬಹುದು.

ಅವರು ಇತ್ತೀಚೆಗೆ ಬರೆದು ಪ್ರಕಟಿಸಿದ 'ಗೊಲ್ಗೊಥ', ಹೆಬ್ಬೆರಳು ಮುಂತಾದ ಕವನಗಳನ್ನು ನೋಡಿದರೆ ಅವುಗಳು ಕಬ್ಬಿಣದ ಕಡಲೆಗಳೆನ್ನಬೇಕಾಗುವುದು. ಆದರೆ ಅವುಗಳ ಅರ್ಥಮಾಧುರ್ಯವರಿತರೆ ಆಗ ಆಗುವ ಆನಂದ ಮಾತ್ರ ಅಷ್ಟಿಷ್ಟಲ್ಲ. ರೈವತಕ, ಕುರುಕ್ಷೇತ್ರ, ಪ್ರಭಾಸ–ಎಂಬ ಬಂಗಾಳ ಕಾವ್ಯಗಳ ಆಧಾರದಿಂದ ಬರೆದ ಶ್ರೀಕೃಷ್ಣ ಚರಿತವೆಂಬ ಗದ್ಯ ಗ್ರಂಥವು ಅರ್ಧದಲ್ಲೇ ನಿಂತಿದೆ. ಅವರ ಸೈರಂಧ್ರಿ ಎಂಬ ಪದ್ಯ ನಾಟಕವು ಕೂಡಾ ಇನ್ನೂ ಪೂರ್ಣವಾಗಿಲ್ಲ.

೧೯೨೫ ರಿಂದ ೫ ವರ್ಷಗಳ ವರೆಗೆ ಗೋವಿಂದ ಪೈಗಳು ಭಾಷೆಗಳ ಅಭ್ಯಾಸಕ್ಕೆ ತೊಡಗಿ ಹಲವು ಭಾಷೆಗಳನ್ನರಿತ ಬ್ರಹ್ಮನೇ ಆದರು. ಆದರೆ ಇಂದವರಿಗೆ ಅವುಗಳಲ್ಲಿ ಹಲವು ಭಾಷೆಗಳು ಮರೆತು ಹೋಗಿವೆಯಂತೆ. ಅಂದು ತಾವು ಬರೆದ ಬರೆವಣಿಗೆಯನ್ನು ಇಂದವರಿಗೇ ಓದಲಾಗುವುದಿಲ್ಲವಂತೆ.

ಸಮರ್ಥ ಸಂಶೋಧಕರು

ಗೋವಿಂದ ಪೈಗಳು ಕವಿಗಳಾದಂತೆ ಸಮರ್ಥ ಸಂಶೋಧಕರೂ ಆಗಿದ್ದಾರೆ. ಯಾವ ವಿಚಾರದ ಅಭ್ಯಾಸವಾದರೂ ಹಟ ಹಿಡಿದು ಕಲಿಯುವುದು ಅವರ ಗುಣ. ಎಲ್ಲವನ್ನೂ ಆಮೂಲಾಗ್ರ ತಿಳಿದುಕೊಳ್ಳುವುದು ಅವರ ಸ್ವಭಾವ. ತನ್ನ ಕೆಲಸದಲ್ಲಿ ಸಣ್ಣ ಒಂದು ಸಂದೇಹ ಬಂದರೆ ಅದಕ್ಕಾಗಿ ಅವರು ಎಷ್ಟೊ ಸಮಯವನ್ನೂ ಧನವನ್ನೂ ವೆಚ್ಚ ಮಾಡಿ ಕೆಲಸ ಪೂರ್ಣಮಾಡಿಕೊಳ್ಳುತ್ತಾರೆ. ಕ್ರಿ. ಪೂ. ೧೦೦ರಿಂದ ಕ್ರಿ. ಶ. ೨೪೦ ರ ವರೆಗಿನ ಪ್ರಾಚೀನ ಭಾರತ ಇತಿಹಾಸದ ದೊಡ್ಡ ಸಂಶೋಧನೆ ಕೆಲಸವನ್ನು ಬಹಳ ಹಿಂದೆಯೇ ಪ್ರಾರಂಭಿಸಿ ಕೆಲಸ ಮಾಡುತ್ತಲೇ ಇದ್ದಾರೆ. ಶಕ, ಪಹ್ಲವ, ಕುಷಾಣರ ಕಾಲ ವಿಚಾರವಾದ ಉದ್ಗ್ರಂಥವೊಂದು ಕೊನೆಯ ಒಂದು ಪ್ರಕರಣಕ್ಕಾಗಿ ಹಾಗೇ ಉಳಿದಿದೆ.

ಅವರು ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳಿಗೆ ಸಂಬಂಧಪಟ್ಟ ಹಲವಾರು ಸಂಶೋಧಕ ಲೇಖನಗಳನ್ನು ಇಂಗ್ಲೀಷು ಕನ್ನಡ ಭಾಷೆಗಳಲ್ಲಿ ಬರೆದಿದ್ದಾರೆ. ಅವರ ಲೇಖನಗಳೆಷ್ಟೋ ಪ್ರಕಟವಾಗಿವೆ, ಕೆಲವಿನ್ನೂ ಪ್ರಕಟವಾಗಿಲ್ಲ; ಪೂರ್ಣವಾಗಿಲ್ಲ.

ಅವರೀಗ ೬೬ ನೇ ವರ್ಷದ ಹೊಸ್ತಿಲನ್ನೇರುತ್ತಿರುವರಾದರೂ ಇನ್ನೂ ತಮ್ಮ ಅಭ್ಯಾಸಗಳಲ್ಲಿ ಹರೆಯದ ತರುಣರಷ್ಟು ತೀಕ್ಷ್ಣತೆಯುಳ್ಳವರಾಗಿದ್ದಾರೆ.

"ಸದ್ಯದ ಕನ್ನಡ ಸಾಹಿತ್ಯದ ಇತಿಸ್ಥಿತಿಗಳಿಗಾಗಿ ನನಗೆ ಅಸಮಾಧಾನವಿದೆ ಎಂಬುದನ್ನು ನಾನು ಅನೇಕ ಸಲ ಪ್ರಕಟವಾಗಿ ಹೇಳಿದ್ದೇನೆ. ತನ್ನವರ ಅಭಿಮಾನ, ವಿವಿಧ ವಿಶಾಲವಾದ ಅನುಭವ, ಮುನ್ನೋಟದ ಸಾಹಸ, ತಪ್ಪನ್ನೊಪ್ಪಿಕೊಳ್ಳುವ ತಿಳಿವಳಿಕೆ— ಇವು ಮಿಕ್ಕ ಪ್ರಾಂತದವರಿಗಿಂತ ಕನ್ನಡಿಗರಿಗೆ ಕಡಿಮೆ ಎಂದು ನನ್ನ ಅನುಭವ" ಎಂದು ಗೋವಿಂದ ಪೈಗಳೇ ತಮ್ಮೊಂದು ಲೇಖನದಲ್ಲಿ ಹೇಳಿದ್ದಾರೆ. ಅದೇ ಅವರು "ತಮ್ಮ ಹೆಬ್ಬೆರಳಿನ" ಭರತ ವಾಕ್ಯದಲ್ಲಿ ಹೀಗೂ ಹೇಳಿದ್ದಾರೆ:—

"ಪೆರರ ತಮ್ಮನ್ನತಿಕೆಗೆತ್ತಿಕೊಂಬುದು ಮಹಾತ್ಮರ ಧರ್ಮ! ಪರರನಡಿಮೆಟ್ಟಿ ದೂರೀಕರಿಸು ವುದೆ ದುರಾತ್ಮರ ಕರ್ಮ! ನಾವು ಸೀವೆಂಬ ಹಳ ಭೇದಗಳನುಳಿದು ಸರಿಸಮನೆ ಸೌಂದರ್ಯದಿಂ ಸೌಹಾರ್ದದಿಂದೈಕ್ಯದಿಂದೈಕಮತ್ಯದಿಂ ಬಾಳುವುದೆ ತಾಯುಳಿಯ ಹೆಬ್ಬಾಳಿಕೆಯ ಮರ್ಮ!"

ನಮ್ಮ ರಾಷ್ಟ್ರಕವಿ ಗೋವಿಂದ ಪೈಗಳ ಆಶಯದಂತೆ ತಾಯುಳಿಯ ಹೆಬ್ಬಾಳಿಕೆಯನ್ನು ಕಾಣುವ, ಕಂಡು ಸುಖಪಡುವ ಭಾಗ್ಯ ನಮ್ಮೆಲ್ಲರದಾಗಲಿ.

ಸಮಸ್ತ ಭಾರತ

ಹೊಸದಿಲ್ಲಿ

ತಿರುವಾಂಕೂರು ಮತ್ತು ಕೊಚ್ಚಿಗಳ ಸಮೀಕರಣದ ವಿವರಗಳನ್ನು ಕೃತಿಯಲ್ಲಿಳಿಸುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗಿದೆಯೆಂದು ಸಂಸ್ಥಾನ ಖಾತೆಯು ಪ್ರಕಟನೆ ಹೊರಡಿಸಿದೆ.

ಹೊಸ ಘಟನೆಯ ಮೇರೆಗೆ ಪ್ರಾತಿನಿಧಿಕ ಮತದಾರರ ಯಾದಿಗಳು ೧೯೪೮ರ ಕೊನೆಯೊಳಗಾಗಿ ಪೂರ್ಣವಾಗಿ ಮುದ್ರಿಸಲ್ಪಟ್ಟು ಹೊರಬೀಳುವವು ಎಂದು ಪಾರ್ಲಮೆಂಟರಿ ವಿಷಯಗಳ ಮಂತ್ರಿಗಳಾದ ಶ್ರೀ. ಸತ್ಯನಾರಾಯಣ ಸಿಂಹರು ಹೇಳಿದರು.

ದಿಲ್ಲಿಯ ಕನ್ನಡಿಗರು ಮೈಸೂರು ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ೩ ನೇ ತಾರೀಖು ವಸಂತ ಸಾಹಿತ್ಯೋತ್ಸವವನ್ನು ಜರುಗಿಸಿದರು. ಶ್ರೀ. ದಿವಾಕರ ರಂಗರಾಯರು ಉತ್ಸವದ ಮಹತ್ವವನ್ನು ಕುರಿತು ಹೇಳಿದರು. ಶ್ರೀ. ನಿಜಲಿಂಗಪ್ಪನವರು ಸಮಯೋಚಿತ ಭಾಷಣಮಾಡಿದರು. ಶ್ರೀ ಎಸ್. ವಿ. ಕೃಷ್ಣಮೂರ್ತಿಯವರ ಭಾಷಣವಾದ ಬಳಿಕ ಎಚ್. ಎಸ್. ಪಾಟೀಲ ಮತ್ತು ನಾಡಿಗ ಕೃಷ್ಣಮೂರ್ತಿಯವರ ನಾಟಕಗಳಿಂದ ಉತ್ಸವ ಕೊನೆಗಂಡಿತು.

ಪ. ಬಂಗಾಲ

ಕಬ್ಬಿಣ ಮತ್ತು ಉಕ್ಕಿನ ಮೂವರು ನೌಕರರಿಗೆ ನಾಲ್ವರು ಪಠಾಣರು ಪಿಸ್ತೂಲು ತೋರಿಸಿ ಅವರಿಂದ ೪೦ ಸಾವಿರ ರೂಪಾಯಿಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಓರ್ವ ನೌಕರನಿಗೆ ಗುಂಡು ತಾಗಿದ್ದರಿಂದ ಅವನು ಅಸ್ಪತ್ರೆಯಲ್ಲಿ ಮರಣ ಹೊಂದಿದನು.

ಕಲಕತ್ತೆಯಲ್ಲಿ ಜಾರಿಯಲ್ಲಿರುವ ೧೪೪ ನೇ ಕಲಮನ್ನುಲ್ಲಂಘಿಸಿದ್ದಕ್ಕಾಗಿ ಪೋಲೀಸರು ೩ನೇ ತಾರೀಕು ೨೦ ಜನರನ್ನು ಬಂಧಿಸಿದರು. ಪೆನ್ಸಿಲ್ ಫ್ಯಾಕ್ಟರಿಯ ಒಡೆಯನ ಮನೆಯ ಮುಂದೆ ಇವರು ಮತಪ್ರದರ್ಶನ ಮಾಡಿದ್ದರು ಇವರೆಲ್ಲ ಆ ಫ್ಯಾಕ್ಟರಿಯ ಹಿಂದಿನ ಕೆಲಸಗಾರರು.

ಪಾಕಿಸ್ತಾನ

ಪಾಕಿಸ್ತಾನದಲ್ಲಿಯ ಎರಡು ಪ್ರಮುಖ ರಾಜಕೀಯ ಪಕ್ಷಗಳಾದ ಸಂಸ್ಥಾನಗಳಲ್ಲಿಯ ಅಖಿಲ ಭಾರತ ಮುಸ್ಲಿಂ ಲೀಗ ಮತ್ತು ಪಾಕಿಸ್ತಾನ ಒಕ್ಕೂಟಕ್ಕೆ ಸೇರ್ಪಡೆ ಹೊಂದಿದ ಸಂಸ್ಥಾನಗಳಲ್ಲಿ ಸ್ಥಾಪಿತವಾದ ಸಂಸ್ಥಾನ ಮುಸ್ಲಿಂಲೀಗ ಇವುಗಳಲ್ಲಿ ತೀವ್ರ ಸ್ವರೂಪದ ಘರ್ಷಣ ಉದ್ಭವಿಸುವ ಲಕ್ಷಣಗಳು ಬಂದಿವೆ.

ಹೈದರಾಬಾದ

ಸಶಸ್ತ್ರ ಕಮ್ಯುನಿಸ್ಟರ ತಂಡವೊಂದು ಹಳ್ಳಿಗರ ಸಂಘಟನೆಯಲ್ಲಿ ತೊಡಗಿದ ಕಾಂಗ್ರೆಸ ಸಹಾನುಭೂತಿಗಳಾದ ಶ್ರೀ ಚಲುವ ರೆಡ್ಡಿಯವರನ್ನು ಕೊಂದು ಹಾಕಿರುವರೆಂದು ಹೈದರಾಬಾದಕ್ಕೆ ಸುದ್ದಿ ಬಂದಿದೆ.

ಹೈದರಾಬಾದ ನಗರದ ಕೆಲ ಭಾಗಗಳಲ್ಲಿ ಇನ್ನು ಮುಂದೆ ಗಲಭೆಗಳು ನಡೆಯದಂತೆ ನಿರ್ಬಂಧಕ ಉಪಾಯನೆಂದು ಸಾಮೂಹಿಕ ದಂಡವನ್ನು ಹೇರಬಹುದೆಂದು ತಿಳಿಯುತ್ತದೆ. ಗಲಭೆಗಳು ನಡೆಯಬಹುದಾದ ಸ್ಥಳಗಳಲ್ಲಿ ಸಂಚಾರೀ ಪೋಲೀಸ ದಳವನ್ನು ಇಡಲಾಗುವದು.

ಮುಂಬಯಿ

ಹಿಂದುಸ್ಥಾನದ ಅಧಿಕ ... ಭಾಷ್ಯ ... ಅವಕಾಶ ... ಮುಂದಿನ ... ಅಭಿಪ್ರಾಯಪಟ್ಟರು.

... ಮುಂಬಯಿಗೆ ಬಂದರು.

ಕಳೆದ ತಿಂಗಳು ಮುಗಿದ ಎಸ್. ಎಸ್. ... ಪರೀಕ್ಷೆಯು ... ಜೂನ ತಿಂಗಳ ಮೊದಲನೇ ವಾರದಲ್ಲಿಯು ... ಬೀಳುವದು ಎಂದು ಎಸ್. ಎಸ್. ... ಧರ್ಮದಲ್ಲಿ ಹೇಳಿರುವರು.

ಸರ್ವಧರ್ಮ ಪರಿಷತ್ತಿನ ... ಎಪ್ರಿಲ ೨೩ ಕ್ಕೆ ಮುಂಬಯಿಯಲ್ಲಿ ... ವಾಗಿ ೨೭ ಕ್ಕೆ ಮುಗಿಯುವದು. ... ಪ್ರಸಾದ ಮುಕರ್ಜಿಯವರು ... ಟನ ಮಾಡುವರು. ಶ್ರೀ ... ಮೊದಲನೇ ದಿನ ಅಧ್ಯಕ್ಷತೆ ವಹಿಸುವರು.

ಪಾಕಿಸ್ತಾನಕ್ಕೆ ಹೋಗುವವರಿಗೆ ... ಹಡಗ ಹಾಗು ವಿಮಾನಗಳಲ್ಲಿ ಸ್ಥಳದ ... ದುಮಾಡಿ ಕೊಡುತಿದ್ದರೆಂದೂ ಅಲ್ಲಿಗೆ ... ವದಕ್ಕಾಗಿ ಖೊಟ್ಟಿ ಪರವಾನಿಗಳನ್ನು ... ಸುತಿದ್ದರೆಂದೂ ಮುಂಬಯಿ ಪೋಲೀಸ ... ಪಾಲ್ಬನ್‌ರೋಡ ಮತ್ತು ಗ್ರ್ಯಾಂಟರೋಡ ... ಲ್ಲಿಯ ಒಂದು ಪ್ರವಾಸಿಕ ಸಂಸ್ಥೆಯ ... ಗಳನ್ನು ಜಪ್ತಿಮಾಡಿ ಅದರ ಒಡೆಯನನ್ನೂ ... ನೌಕರನನ್ನೂ ಬಂಧಿಸಿರುವರು. ಒಬ್ಬ ಪೋಲೀ... ಸನನ್ನೊಳಗೊಂಡು ಒಟ್ಟು ೬೦ ಜನರನ್ನು ... ಹಿಡಿದಿದ್ದಾರೆ.

ಕೊಲ್ಹಾಪುರವು ಮುಂಬಯಿ ಪ್ರಾಂತದ... ವಿಲೀನ ಹೊಂದಿದನಂತರ ಈ ವರೆಗಿನ ... ಯಲ್ಲಿ ಕೊಲ್ಹಾಪುರದಲ್ಲಿ ಅಸಮರ್ಥತೆ ... ಲಂಚಗುಳಿತನದ ಆರೋಪದ ಮೇಲೆ ... ಮಂದಿ ಸರಕಾರಿ ನೌಕರರನ್ನು ... ಲಾಗಿದೆಯೆಂದು ಆಡಳಿತಾದಾರ ಶ್ರೀ. ... ವರು ಹೇಳಿದರು. ಆಡಳಿತೆಯ ... ನೆಯೂ ನಡೆದಿದೆಯೆಂದು ಅವರು ಹೇಳಿದರು.

ಕೊಲ್ಹಾಪುರದಲ್ಲಿಯ ಆಹಾರ ಧಾನ್ಯಗ... ಬೆಲೆಗಳನ್ನು ಎಪ್ರಿಲ ೧ ರಿಂದ ನೆರೆಹೊರೆ... ಜಿಲ್ಹೆಗಳಲ್ಲಿಯ ಬೆಲೆಗಳಷ್ಟಕ್ಕೆ ... ಯಿಂದ ಸರಕಾರಕ್ಕೆ ೬೦ ಸಾವಿರ ... ಹಾನಿಯಾಗಿದೆ.

ಮುಂಬಯಿಯಿಂದ ಬೇರೆ ಬೇರೆ ಸ್ಥಳಗಳ... ಕಳಿಸಲಾದ ೩ ಲಕ್ಷ ರೂಪಾಯಿ ... ಬಂಗಾರವನ್ನು ಒಯುವ ಗಾಡಿಗಳಿಂದ ... ಸಲಾಗಿದೆ.

ಕಾಂಗ್ರೆಸ ವರ್ಕಿಂಗ ಕಮಿಟಿ ಸದಸ್ಯರು... ಶ್ರೀ ಎಸ್. ಕೆ. ಪಾಟೀಲರು ಮುಂಬಯಿ... ಕಾರಪೊರೇಶನದ ಮೇಯರರಾಗಿ ... ಟ್ಟರು. ಪ್ರತಿಸ್ಪರ್ಧಿ ಸೋಶಾಲಿಸ್ಟ ... ಳುಗಳಾದ ವೆಲಿಣಕರರಿಗೆ ಕೇವಲ ೬೦ ... ಗಳು ಬಿದ್ದು ಅವರು ಪರಾಭವ ಹೊಂದಿದರು.

ಮುಂಬಯಿ ಸರಕಾರದವರು ... ಬಂಧ ಘೋಷಣೆಕ್ಕನುಸಾರವಾಗಿ ... ಮುಲ್ಕಿ ಮತ್ತು ಪೋಲೀಸ ... ತಿಕ್ಕೊಡಲು ಪ್ರಾಂತ ಅಧಿಕಾರದು ... ಆ ಮಾಮಲೇದಾರರಿಗೆ ಅಜ್ಞೆ ವಿಧಿಸಿದ್ದಾರೆ.

ಅಹಮದಾಬಾದದಲ್ಲಿ ಇದೇ ತಿಂಗಳು ... ನೇ ತಾರೀಕಿನಿಂದ ಪಾಸುಲಿ ಕೇಂದ್ರದ ... ಪ್ರಾರಂಭವಾಗುವದು.

ಮುಂಬಯಿಯಲ್ಲಿ ವಾಣಿಕೆಯಂತೆ ... ಸಾಹಿತ್ಯೋತ್ಸವ ಪ್ರಾರಂಭವಾಗಿದೆ. ... ರವಿವಾರ ಮೂರನೇ ತಾರೀಕು ಶ್ರೀ ... ಎಸ್. ಗುಪ್ತೆಯವರು ಕರ್ನಾಟಕ ... ಣದ ಆದರ್ಶ ಮಾರ್ಗವನ್ನು ಕುರಿತು ... ಮಾಡಿದರು.

ಅಮೇರಿಕೆಯು ಭಾರತದಲ್ಲಿ ... ತೊಡಗಿಸಲು ಮತ್ತು ತಾಂತ್ರಿಕ ... ವನ್ನು ನೀಡಲು ಸಿದ್ಧವಿದೆ. ... ವಲು ಸುರಕ್ಷಿತ ಆರಿಬೇಕೆಂದು ... ಬಯಸುತ್ತಾರೆ ಎಂದು ಅಮೇರಿಕೆ... ರಾಯಭಾರಿಗಳಾಗಿದ್ದ ಶ್ರೀ ಹೆ. ... ಅಭಿಪ್ರಾಯಪಡುತ್ತಾರೆ.

ಬಾದಶಹ ಮತ್ತು ಬಾಲಿಕೆ

(೩ನೆಯ ಪುಟದಿಂದ)

ನಿಮಿಷವೂ ಯುದ್ಧವನ್ನು ನಿಲ್ಲಿಸಲಿಲ್ಲ. ಅವನ ಸೈನಿಕರಲ್ಲಿ ಬೇರೊಬ್ಬ ಬಂದ: ನೀನು ಸತ್ತರೆ ನಿನ್ನ ಸ್ಥಳವಲ್ಲಿ ಬೇರೊಬ್ಬರು ಬರುವವರಿಲ್ಲವೇ?"

"ನನ್ನ ಹುಗ ಇರುವನು."

"ಅಂದ ಮೇಲೆ ನೀನು ನಿನ್ನ ಸೈನಿಕರಿಗೆ ಇಂಥ ಸುಳ್ಳನ್ನೇಕೆ ಹೇಳಿದೆ?"

"ಹೇಳಬೇಕಾಯಿತು. ಕೈಸರನಕೆಲಸ ಇದೇ. ಅವನು ಹೇಳಿದ್ದರಲ್ಲಿ ಉಳಿದವರಿಗೆ ನಂಬುಗೆ ಇರುವದಿಲ್ಲ; ಅವನಿಗೂ ಇರುವದಿಲ್ಲ. ಇಂದು ನಾನು ನನ್ನ ಸೈನಿಕರಿಗೆ ಇದನ್ನು ಹೇಳುತ್ತಿದ್ದಾಗ, ಅವರ ಮುಖದ ಮೇಲೆ ಅವರಿಗೆ ನನ್ನಲ್ಲಿ ನಂಬುಗೆ ಇದ್ದ ಲಕ್ಷಣವಿದ್ದಿಲ್ಲ. ನನಗಾದರೂ ನಾನು ನನ್ನ ಹೇಡಿತನಕ್ಕಾಗಿ ನೆವಗಳನ್ನು ಹೇಳುತಿದ್ದೇನೆ ಎಂದೆನಿಸಿತು. ಅದರಿಂದ ರಾತ್ರಿಯಾದ ಕೂಡಲೆ ಮಲಗಿದಂತೆ ನಟಿಸಿದೆ. ನನ್ನ ಪರಿಚಾರಕರೆಲ್ಲ ದೂರ ಸರಿದ ನಂತರ ಮೆಲ್ಲನೆ ಎದ್ದು; ನಾನು ಹೇಡಿಯಲ್ಲ ಎಂಬುದನ್ನು ಖಂಡಿತ ಮಾಡಿಕೊಳ್ಳಲು ಇಲ್ಲಿಗೆ ಬಂದೆ. ಅದುದರಿಂದಲೇ ಬೆಳಕಿನ ಗುಂಡುಗಳು ನನ್ನ ಬದಿಯಿಂದಲೇ ಹಾದು ಹೋದರೂ ನಾನು ಸ್ಥಿರವಾಗಿಯೇ ನಿಲ್ಲುತ್ತೇನೆ."

"ಇದನ್ನೇ ಹಗಲಲ್ಲಿ ಏಕೆ ಮಾಡುವದಿಲ್ಲ?"

"ಅವರು ಬಿಡುವದಿಲ್ಲ."

"ಅಯ್ಯೊ ಪಾಪ! ನೀನು ನಾಳೆ ಯುದ್ಧಕ್ಕೆ ಹೋಗು. ನಿನಗೆ ಗಾಯಗಳಾಗುವದಿಲ್ಲ. ಆದರೂ ನಾನು ನೀರು ತಂದುಕೊಡುತ್ತೇನೆ."

ಇದನ್ನು ಕೇಳಿ ಬಾದಶಹನಿಗೆ ಆ ಹುಡುಗಿಯ ಮೇಲೆ ಬಹಳ ಮಮತೆ ಉಂಟಾಯಿತು. ಅವನು ನಸುನಕ್ಕನು ಮತ್ತು ಅವಳಿಗೆ ಮೆಲ್ಲಗೆ ಒಂದು ಮುದ್ದು ಕೊಟ್ಟನು. ನಂತರ ಅವಳನ್ನು ಮನೆಗೆ ಮುಟ್ಟಿಸಲು ಎದ್ದು ನಿಂತನು. ಆ ಹುಡುಗಿಗಾದರೂ ಬಾದಶಹನ ಸಲುವಾಗಿ ಅತ್ಯಂತ ಆದರವೆನಿಸಿತು. ಅವಳು ಅವನ ಬೆರಳನ್ನು ಹಿಡಿದು ಎದ್ದು ನಿಂತಾಗ ಉಳಿದ ಜಗತ್ತನ್ನೆಲ್ಲ ಮರೆತಿದ್ದಳೆಂದೇ ಹೇಳಬಹುದು. ಇದೇ ಸಮಯದಲ್ಲಿ ಒಂದು ಬೆಳಕಿನ ಗುಂಡು ದೂರ ಹಾದು ಹೋದರೂ ಇವರಿಬ್ಬರಿಗೂ ಅದರ ಅರಿವು ಇದ್ದಿಲ್ಲ.

ಮರುಕ್ಷಣವೇ ಒಂದು ಭಯಂಕರ ಧ್ವನಿಯಾಯಿತು. ಒಂದು ಗುಂಡು ಕತ್ತಲೆಯಿಂದ ತೂರಿಕೊಂಡು ಬಂದಿತು. ಬಾದಶಹ ತಿರುಗಿ ನೋಡಿದನು. ಅವನು ಹಾಗೆ ನೋಡಿದಾಗ ಇನ್ನೆರಡು ಗುಂಡುಗಳು ಹಾರಿದವು. ಮತ್ತು ಆಕಾರದಿಂದ ದೊಡ್ಡದಾದ ಇನ್ನೂ ಒಂದು ಗುಂಡು ಅವರ ದಿಕ್ಕಿಗೆ ಮದ್ದಾನೆಯಂತೆ ಉನ್ಮತ್ತವಾಗಿ ಪೆಟ್ಟು ತಿಂದ ಹುಲಿಯಂತೆ ಗರ್ಜಿಸುತ್ತ ಪ್ರಚಂಡವೇಗದಿಂದ ಬರುತ್ತಿತ್ತು. ಮೊದಲನೇ ಗುಂಡು ಬಾದಶಹನಿಂದ ಸ್ವಲ್ಪ ದೂರದಲ್ಲಿ ಬಿದ್ದು ಒಡೆಯಿತು. ಬಾದಶಹನ ಕಿವಿಗಳು ಗಡಚಿಕ್ಕಿದವು. ಎರಡನೇ ಗುಂಡು ಬರುತ್ತಲೇ ಇತ್ತು.

ಬಾದಶಹನು ಅಪಘಾತದಿಂದ ಪಾರಾಗಲು ನೆಲದ ಮೇಲೆ ಬಿದ್ದನು. ಕೂಡಲೆ ಅವನಿಗೆ ಆ ಚಿಕ್ಕ ಹುಡುಗಿಯ ನೆನಪಾಯಿತು. ಅವಳು ಚೂರು ಚೂರಾಗಿರಬಹುದೆಂದು ಅವನು ಬಗೆದನು ಮತ್ತು ಅವನು ತನ್ನನ್ನು ತಾನೆ ಮರೆತವನಂತೆ ಆ ಹುಡುಗಿಯ ಮೇಲೆ ಬಿದ್ದು ಅವಳ ರಕ್ಷಣೆ ಮಾಡಬೇಕೆಂದು ಎದ್ದು ನಿಲ್ಲಲನುವಾದನು.

ಬಾದಶಹನೇಳುವ ಮೊದಲೇ ಇನ್ನೂ ಒಂದು ಪ್ರಚಂಡ ಗರ್ಜನೆಯಾಯಿತು. ಬಾದಶಹನು ಇಂತಹ ಪ್ರಚಂಡ ಗರ್ಜನೆಯನ್ನು ಇನ್ನೂ ವರೆಗೂ ಕೇಳಿದ್ದಿಲ್ಲ. ಅವನು ಎದ್ದು ನಿಂತಾಗ ತಾನು ತಲೆಯ ಮೇಲೆ ನಿಂತಿರುವನೊ ಇಲ್ಲವೇ ಕಾಲ ಮೇಲೆ ನಿಂತಿರುವನೋ ಎಂಬುದೆ ಅವನಿಗೆ ತಿಳಿಯಲೊಲ್ಲದಾಗಿತ್ತು. ಕೊನೆಗೆ ಒಂದು ಗಿಡದ ಆಧಾರದಿಂದ ಅವನು ಎದ್ದು ನಿಂತನು. ಆ ಗುಂಡುಗಳು ಹಾರಿದಾಗ ತಾವು ಈ ಗಿಡದಿಂದ ಬಹಳ ದೂರವಿದ್ದೆವೆಂಬುದು ಅವನಿಗೆ ಗೊತ್ತಿತ್ತು. ಅಂದರೆ ಗುಂಡು ಹಾರಿದ ನಂತರ ಅದರ ಸ್ಫೋಟದಿಂದ ತಾನು ಇಲ್ಲಿಯವರೆಗೆ ಹಾರಿ ಬಿದ್ದಿದ್ದೇನೆ ಎಂದು ಅವನಿಗೆ ಎನಿಸಿತು. ಕೂಡಲೇ ಆ ಹುಡಿಗೆಯ ನೆನಪಾಗಿ ಅವನು ನುಡಿದನು, "ಆ ಹುಡುಗಿ ಎಲ್ಲಿ?"

"ಇಲ್ಲಿ" ಅವನ ಮೇಲಿಂದ ಗಿಡದಲ್ಲಿಂದ ಆ ಹುಡುಗಿಯ ದನಿ ಬಂದಿತು.

"ದೇವರು ದೊಡ್ಡವನು" ಬಾದಶಹನು ನಿಟ್ಟುಸಿರು ಬಿಟ್ಟು ನುಡಿದನು. "ನಿನಗೆ ಪೆಟ್ಟು ಹತ್ತಿಲ್ಲವೇ? ನೀನು ಚೂರು ಚೂರಾಗಿರಬಹುದೆಂದು ನಾನು ಬಗೆದಿದ್ದೆ."

"ನಾನು ಚೂರು ಚೂರಾಗಿದ್ದೇನೆ." ಆ ಹುಡಿಗಿಯ ದನಿ ನುಡಿಯಿತು. "ನಾನು ಎರಡು ಸಾವಿರದ ಮೂವತ್ತೇಳು ಸಣ್ಣ ಚೂರಾಗಿದ್ದೇನೆ. ಒಂದನೇ ಗುಂಡು ನನ್ನ ತೊಡೆಯನ್ನು ಸೀಳಿತು. ಎರಡನೆಯದು ನನ್ನ ತಲೆಯನ್ನು ಪುಡಿಮಾಡಿತು. ಮೂರನೆಯದು ನನ್ನನ್ನು ಚೂರು ಚೂರು ಮಾಡುವ ಕಾರ್ಯದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿತು. ನನ್ನ ಕಾಲಿನ ಕಿರಿ ಬೆರಳೇ ಈ ಎಲ್ಲ ಚೂರುಗಳಲ್ಲಿ ಅತಿದೊಡ್ಡದು ಚೂರು. ಇಲ್ಲಿಂದ ಅರ್ಧ ಮೈಲಿನ ಮೇಲೆ ನನ್ನ ಹೆಬ್ಬೆರಳಿನ ಉಗುರಿನ ಒಂದು ಭಾಗ ಬಿದ್ದಿದೆ. ಆ ಬದಿಯ ಎರಡು ಮೈಲಿನ ಮೇಲೆ ಇನ್ನೊಂದು ಭಾಗ ಬಿದ್ದಿದೆ. ಹೀಗೆಯೆ ಯಾವ ಯಾವ ಭಾಗಗಳು ಯಾವ ಯಾವ ದಿಕ್ಕಿಗೆ ಯಾವಯಾವ ದೇಶಕ್ಕೆ ಹೊರಟಿವೆಯೋ ಯಾರು ಬಲ್ಲರು?"

"ಹೀಗಾಗಬಹುದೆಂದು ನಾನು ಬಗೆದಿದ್ದಿಲ್ಲ" ಬಾದಶಹನು ಪುನಃ ನಿಸ್ಸತ್ವನಂತೆ ನುಡಿದನು. ಆಗ ಅವನ ಮೋರೆಯನ್ನು ಯಾರು ನೋಡಿದ್ದರೂ ಅವನಲ್ಲಿ ಕನಿಕರವನ್ನು ತೋರಿಸುತ್ತಿದ್ದರು. ಆದರೆ ಆ ಹುಡುಗಿಗೆ ಅವನಲ್ಲಿ ಕನಿಕರ ಉಂಟಾಗಲಿಲ್ಲ.

"ನೀನು ಹಾಗೆ ಬಗೆದಿದ್ದೆಯೋ ಇಲ್ಲವೋ ಎಂಬುದನ್ನು ಇನ್ನು ಯಾರು ಕೇಳುತ್ತಾರೆ? ಗುಂಡು ಹಾರಿದಾಗ ನೀನು ನಿನ್ನ ಚಂದ ಅರಿವೆಗಳೊಡನೆ ನೆಲದ ಮೇಲೆ ಹೊರಳಾಡುವದನ್ನು ನೋಡಿ ನನಗೆ ನಗೆ ಬಂದಿತ್ತು. ಈಗಲಾದರೂ ನೀನು ಜೋಲಿಹೊಡೆಯುತಿರುವದನ್ನು ನೋಡಿ ನಗೆ ಬರುತ್ತಿದೆ. ನನ್ನ ಮುತ್ತಜ್ಜ ಸೆರೆ ಕುಡಿದಾಗ ಹೀಗೇ ತೂರಾಡುತ್ತಾನೆ" ಹೀಗೆಂದು ಅವಳು ನಕ್ಕಳು.

ಬಾದಶಹನು ಅವಳ ನಗೆಯನ್ನು ಕೇಳಿದನು. ಆದರೆ ಆಶ್ಚರ್ಯವೆಂದರೆ ಇನ್ನೂ ಕೆಲವರು ನಗುತ್ತಿದ್ದಂತೆ ಅವನಿಗೆ ಕೇಳಿಸಿತು.

"ಬೇರೆ ಯಾರು ನಗುತ್ತಿದ್ದಾರೆ?" ಅವನು ಕೇಳಿದನು.

"ಅನೇಕ ಜನರು. ಆ ತಗ್ಗಿನಲ್ಲಿಯ ನಾಲ್ಕು ಗಾಯಾಳುಗಳೂ ಇಲ್ಲಿಯೇ ಇದ್ದಾರೆ. ಮೊದಲನೆಯ ಗುಂಡೇ ಅವರನ್ನು ಆ ತಗ್ಗಿನಿಂದ ಮುಕ್ತಮಾಡಿತು." ಅವರೆಲ್ಲರೂ ಪುನಃ ಬಾದಶಹನನ್ನು ಹಾಸ್ಯಮಾಡಿ ನಕ್ಕರು.

"ನೀವು ನನಗೆ ಕೊಡಬೇಕಾದ ಮನ್ನಣೆಯನ್ನು ಕೊಡಲು ಮರೆಯಬೇಡಿರಿ. ನೀವೇ ನನ್ನನ್ನು ಕೈಸರನನ್ನಾಗಿ ಮಾಡಿದಿರಿ ಮತ್ತು ಸಾಮಾನ್ಯ ಮಾನವನ ಸ್ವಾಭಾವಿಕ ಸ್ವಭಾವಗಳನ್ನು ಮತ್ತು ಕೆಲಸಗಳನ್ನು ನೀವೇ ನನ್ನಿಂದ ಕಸಿದುಕೊಂಡಿರಿ. ಈಗಲೂ ನೀವು ನನ್ನನ್ನು ಒಬ್ಬ ಸಾಮಾನ್ಯ ಮಾನವನಂತೆ ಅಲ್ಲ, ಆದರೆ ನೀವು ನಿರ್ಮಿಸಿದ ಆದರ್ಶದ ಒಂದು ಮೂರ್ತಸ್ವರೂಪವೆಂದು ಆದರಿಸಬೇಕು. ಆದರಿಸಲೇಬೇಕು."

"ಅದನ್ನೆಲ್ಲ ಮಾತನಾಡಿ ಉಪಯೋಗವಿಲ್ಲ. ನಿನ್ನ ಮಾತನ್ನು ಉಲ್ಲಂಘಿಸಿ ಅವರೆಲ್ಲ ಹೋಗಿಬಿಟ್ಟರು. ಆದರೆ ಚಾಳಿಸಹಾಕಿಕೊಂಡ ಬೂಚನೊಬ್ಬನಿದ್ದಾನೆ" ಆ ಹುಡಿಗೆಯ ದನಿ ಹೇಳಿತು.

ಗಿಡದ ಮೇಲಿನಿಂದ ಒಬ್ಬ ಮನುಷ್ಯನ ದನಿ ಮಾತನಾಡಿತು. "ಅವರೊಂದಿಗೆ ನಾನು ಹೋಗಲಿಲ್ಲ. ನನಗೆ ಅವರೊಂದಿಗೆ ಹೋಗುವದು ಸೇರುವದಿಲ್ಲ. ಅವರಿಗೆ ಗೊತ್ತಿದೆ, ನೀನು ನನ್ನನ್ನು ನಿನ್ನ ಮುತ್ತಜ್ಜನ ಸಲುವಾಗಿ ಸುಳ್ಳುಗಳನ್ನು ಹೇಳಲು ನಿಯಮಿಸಿಕೊಂಡಿದ್ದಿ ಎಂದು."

"ಮೂರ್ಖ" ಬಾದಶಹನು ಒರಟಾಗಿ ಒದರಿದನು. "ನಿನ್ನ ಮುತ್ತಜ್ಜನ ಸಲುವಾಗಿಯಾದರೂ ನೀನು ಅವರೊಂದಿಗೆ ಸತ್ಯವನ್ನು ಆಡಿದ್ದೀ ಏನು?"

ಇದಕ್ಕೆ ಯಾವ ಉತ್ತರವೂ ಬರಲಿಲ್ಲ. ತುಸು ಹೊತ್ತಿನನಂತರ ಆ ಹುಡುಗಿ ದನಿ ನುಡಿಯಿತು. "ಅವನೂ ಹೋಗಿ ಬಿಟ್ಟ. ನನ್ನ ನಿನ್ನ ಮುತ್ತಜ್ಜರಿಗಿಂತ ಅವನ ಮುತ್ತಜ್ಜನು ಒಳ್ಳೆಯವನಿರಬಹುದೆಂದು ನನಗೇನು ಎನಿಸುವದಿಲ್ಲ. ಇರಲಿ ನಾನೂ ಹೋಗಬೇಕು. ನಾನು ಮುಕ್ತಳಾಗುವ ಮೊದಲು ನೀನು ನನಗೆ ಮೆಚ್ಚುಗೆಯಾದವನಿದ್ದಿ. ಈಗ ನಿನ್ನ ಮಹತ್ವ ಎನಿಸುವದಿಲ್ಲ."

ಅವಳನ್ನಗಲುವ ಶೋಕದಿಂದ ಕುಗ್ಗಿದ ದನಿಯಲ್ಲಿ ಬಾದಶಹನು ನುಡಿದ "ಇಲ್ಲ, ನಾನು ಮೊದಲಿನಷ್ಟೇ ಮಹತ್ವದವನಾಗಿದ್ದೇನೆ."

"ಆದರೆ ನನಗೆ ಈಗ ಯಾರಮಹತ್ವವೂ ಇಲ್ಲ. ನಾನೀಗ ಮುಕ್ತಳಾಗಿದ್ದೇನೆ. ಈ ಸ್ಥಿತಿಯು ಹಸಿಯುವ, ಚಳಿಯಿಂದ ನಡುಗುವ ಮತ್ತು ಬೆದರುವ ಸ್ಥಿತಿಗಳಿಗಿಂತಲೂ ಒಳ್ಳೆಯದು. ಈಗ ನನಗೆ ಹಸಿವು ಇಲ್ಲ, ಚಳಿ ಇಲ್ಲ. ನಾನೀಗ ಮುಕ್ತಳಾಗಿದ್ದೇನೆ". ಆ ದನಿ ನುಡಿಯಿತು: "ಒಳ್ಳೇದು ನಾನು ಹೋಗುತ್ತೇನೆ" ಒಂದೆರಡು ನಿಮಿಷ ತಡೆದು ಆ ಹುಡುಗಿ ಮತ್ತೆ ಹೇಳಿತು.

"ತಡೆ, ಅವಸರವೇಕೆ? ಒಂದೇ ನಿಮಿಷ. ನಾನು ಒಬ್ಬಂಟಿಗನಾಗಿದ್ದೇನೆ" ಬಾದಶಹ ಬೇಡಿಕೊಳ್ಳುವ ದನಿಯಿಂದ ನುಡಿದ.

"ಏಕೆ? ನಿನ್ನ ಸೈನಿಕರಿಗೆ ಅವರು ನನಗೆ ಗುಂಡು ಹೊಡೆದಂತೆ ನಿನಗೂ ಹೊಡೆ ಎಂದು ಹೇಳಲ್ಲ? ಅಂದರೆ ನೀನೂ ಮುಕ್ತನಾಗುವಿ. ಆಗ ನಾವಿಬ್ಬರೂ ಬೇಕಾದಷ್ಟು ಹೊತ್ತು ಹಾರಾಡುತ್ತ ಹೋಗಬಹುದು. ಇಲ್ಲದಿದ್ದರೆ ನಾನೀಗಲೇ ಹೋಗುವೆ."

"ಹಾಗೆ ಹೇಳುವದು ನನ್ನಿಂದ ಸಾಧ್ಯವಿಲ್ಲ."

"ಏಕೆ?"

"ಅದು ವ್ಯವಹಾರವಲ್ಲ. ಕೈಸರನು ವ್ಯವಹಾರಿಕ ಮನುಷ್ಯ."

"ವ್ಯವಹಾರ? ವ್ಯವಹಾರಿಕ ಮನುಷ್ಯ? ಅವು ದೊಡ್ಡ ಶಬ್ದಗಳು. ನನಗೆ ತಿಳಿಯುವದಿಲ್ಲ. ಅದು ಏನೇ ಇದ್ದರೂ ಅದನ್ನು ಮೀರುವದು ನಿನಗೆ ಸಾಧ್ಯವಿಲ್ಲವೇ?"

"ಇಲ್ಲ."

"ಹಾಗಾದರೆ ಯಾವನಾದರೂ ಒಬ್ಬ ಟಾಮಿಯಾಗಲಿ, ಹ್ಯಾರಿಯಾಗಲಿ ನಿನಗೆ ಗುಂಡು ಹೊಡೆಯುವ ವರೆಗೆ ತಡೆಯೋಣ. ಎದೆಗುಂದಬೇಡ. ಬೆಳಕಿನ ಗುಂಡುಗಳ ಪ್ರಕಾಶದಲ್ಲಿ ನೀನು ನಿಂತರೆ ಅವರು ತಡಮಾಡದೇ ನಿನ್ನನ್ನು ಮುಕ್ತಮಾಡುವರು. . . . ಸುಮ್ಮನಿರುವಿ. ಮನಸ್ಸಿಲ್ಲವೇ? ಇರಲಿ ಬಿಡು. ಇನ್ನು ನಾನು ಹೋಗುತ್ತೇನೆ. ಆದರೆ ಹೋಗುವ ಮೊದಲು ನಿನಗೊಂದು ಮುದ್ದು ಕೊಡಬೇಕೆಂದೆನಿಸುತ್ತದೆ. ಕಾರಣ ನಾನು ಮುಕ್ತಳಾಗುವ ಮೊದಲು ನೀನು ನನಗೊಂದು ಅತಿ ಮಧುರವಾದ ಮುದ್ದು ಕೊಟ್ಟದ್ದಿ. ಈಗ ನಾನು ಮುದ್ದುಕೊಟ್ಟದ್ದು ನಿನಗೆ ತಿಳಿಯಲಿಕ್ಕಿಲ್ಲ."

ಆದರಂತೆ, ಬಾದಶಹನು ಅದನ್ನು ತಿಳಿದುಕೊಳ್ಳಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಅದು ಅವನಿಗೆ ತಿಳಿಯಲಿಲ್ಲ. ಅವನಿಗೆ ಏನೋ ಕಂಡಹಾಗೆ ಆಯಿತು. ಅವಳು ಮುದ್ದು ಕೊಡುವೆನು ಎಂದು ಹೇಳಿದಾಗ ಅವನು ದನಿ ಬಂದ ದಿಕ್ಕಿನ ಕಡೆಗೆ ನೋಡಿದನು. ಅಲ್ಲಿಂದ ಗುಲಾಬಿ ಬಣ್ಣದ ರೆಕ್ಕೆಯುಳ್ಳ, ಮತ್ತು ದೇಹದ ಮೇಲೆ ಅರಿವೆಯ ಒಂದು ಚೂರು ಇಲ್ಲದ್ದರಅರಿವಿಲ್ಲದ ಒಂದುಹುಡುಗಿಯ ನಿರ್ಮಲವಾದ ಶರೀರವು ಬಾದಶಹನೆಡೆಗೆ ಮೆಲ್ಲಗೆ ಹಾರಿಕೊಂಡು ಬಂದಿತು. ತನ್ನ ಬಾಹುಗಳಿಂದ ಬಾದಶಹನ ದುಷ್ಟವಾದ ಕತ್ತನ್ನು ಬಳಸಿತು. ಮುದ್ದು ಕೊಟ್ಟು ಹಾರಿಹೋಯಿತು.

ಅವಳನ್ನಗಲಿದ್ದರಿಂದ ಅವನಿಗೆ ಬಹಳ ಕಸಿವಿಸಿ ಆದಂತಾಗಿತ್ತು. ಅವನು ಜ್ಞಾನಶೂನ್ಯನಾದಂತೆ ನಿಂತಿದ್ದನು. ಆದರೆ ಕೆಲ ಜನರ ಮಾತಿನ ಸಪ್ಪಳ ಅವನನ್ನು ಈ ಜಾಗ್ರತ ಸ್ವಪ್ನದಿಂದಎಚ್ಚರಿಸಿತು. ಅವರು ಅವನ ಪರಿವಾರದವರಾಗಿದ್ದರು. ಅವನಿಗೆ ಎಲ್ಲಿಯಾದರೂ ಗುಂಡುಗಳು ತಗಲಿವೆಯೋ ಎಂದು ಅವರು ಅತ್ಯಂತ ಆದರದಿಂದ ಕೇಳಿದರು. ತನ್ನ ಸಮಾಧಿಗೆ ಭಂಗ ತಂದಿದ್ದಕ್ಕಾಗಿ ಬಾದಶಹನಿಗೆ ಕೋಪ ಬಂದಿತು. ಒಂದೆರಡು ನಿಮಿಷ ಅವನಿಗೆ ಸಿಟ್ಟಿನಿಂದ ಮಾತನ್ನೂ ಆಡಲಾಗಲಿಲ್ಲ. ಕೊನೆಗೆ ಅತಿ ಒರಟಾಗಿ ಉದ್ಧಟನಂತೆ ಅವನು ಕೇಳಿದ್ದೇನಂದರೆ, "ನಾನು ಬಿಟ್ಟು ಬಂದ ಜೈಲಿನ ದಾರಿಯಾವುದು?" ಆದರೆ ಅವರಿಗೆ ತಾನು ಅಂದದ್ದರ ಅರ್ಥವಾಗಲಿಲ್ಲ ಎಂದು ತೋರಿ ಬಂದದ್ದರಿಂದ ಮತ್ತು ಅವರು ತನ್ನನ್ನು ಹುಚ್ಚರನ್ನು ನೋಡಿದಂತೆ ನೋಡುತ್ತಿದ್ದಾರೆಂದು ತಿಳಿದು ಬಂದದ್ದರಿಂದ ಅವನು ಸ್ವಲ್ಪ ಸುಧಾರಿಸಿಕೊಂಡು ತಾನು ಬಿಟ್ಟು ಬಂದ ಡೇರೆಯ ದಾರಿಯನ್ನು ಕೇಳಿದನು. ಅವರು ತೋರಿಸಿದರು. ಅವನು ಮುಂದೆ ಮುಂದೆ ಮೆಲ್ಲಗೆ ಸಾಗಿದನು. ಅವರು ಹಿಂದೆ ಹಿಂದೆ ಮೆಲ್ಲಗೆ ಹೊರಟರು. ಅವನು ಡೇರೆಯ ಸಮೀಪ ಬಂದಹಾಗೆಲ್ಲ ಕಾವಲುಗಾರರು ಅವನು ಡೇರೆ ಮುಟ್ಟುವ ವರೆಗೂ ಸಲಾಂ ಮಾಡಿದರು. ಅವನು ಎಲ್ಲರನ್ನು ಬೀಳ್ಕೊಟ್ಟನು ಮತ್ತು ಮಲಗಲು ಹೊರಟನು. ಆಗ ಆ ಇಬ್ಬರು ಪರಿಚಾರಕರು ಏನಾದರೂ ಸಂಭವಿಸಿದ್ದರೆ ವರದಿ ಕೊಡುವದಿದೆಯೋ ಎಂದು ಕೇಳಿದರು. ಇವನು "ನೀವಿಬ್ಬರೂ ಹುಚ್ಚರಿದ್ದೀರಿ" ಎಂದು ಹೇಳಿದನು.

ಅವರಿಬ್ಬರೂ ಒಬ್ಬರನ್ನೊಬ್ಬರು ಪರೀಕ್ಷಿಸುವಂತೆ ನೋಡಿಕೊಂಡರು ಮತ್ತು ಮೆಲ್ಲನೆ ನುಡಿದರು, "ಜನಾಬರು ಕುಡಿದಂತೆ ತೋರುತ್ತದೆ." ಆದರೆ ಪುಣ್ಯಕ್ಕೆ ಇದು, ಆ ಚಿಕ್ಕ ಹುಡುಗಿಯ ವಿಚಾರದಲ್ಲೆ ಗುಂಗಾದ ಬಾದಶಹನಿಗೆ ಕೇಳಲಿಲ್ಲ.

ಕಾಂಗ್ರೆಸ್ಸಿನ ಅಧ್ಯಕ್ಷರು ಅಲಹಾಬಾದದಿಂದ ಮೈಸೂರ ಸಂಸ್ಥಾನ ಕಾಂಗ್ರೆಸ್ಸಿನವರಿಗೆ ೧೯೪೭ ಮೇ ತಿಂಗಳ ೨ ತಾ|| ಗೆ ಕಳಿಸಿದ ಪಾರ್ಸಲು ಮೊನ್ನೆ ಅಂದರೆ ೧೯೫೦ ಮಾರ್ಚ ೩೧ ಕ್ಕೆ ಅಂದರೆ ೨ ವರ್ಷ ಹತ್ತು ತಿಂಗಳುಗಳ ನಂತರ ಬೆಂಗಳೂರಿಗೆ ಬಂದು ತಲುಪಿದೆ. ಪಾವತಿ ಪುಸ್ತಕಗಳನ್ನು ಒಳಗೊಂಡ ಆ ಪಾರ್ಸಲನ್ನು ಮೈಸೂರ ಸಂಸ್ಥಾನ ಕಾಂಗ್ರೆಸ್ಸಿನ ಕಾರ್ಯದರ್ಶಿಯ ಹೆಸರಿಗೆ ಕಳಿಸಲಾಗಿತ್ತು.

Reg. No. B. 3148

LICENCE No. 3
Licenced to Post without Prepayment

KARMAVEER 11-4-49

ಕರ್ನಾಟಕದಲ್ಲಿ

ಧಾರವಾಡ

ಅ. ಭಾ. ಚರಕ ಸಂಘದ ಕರ್ನಾಟಕ ಶಾಖೆಯವರು ಗದಗಿನಲ್ಲಿ ಮಾರ್ಚ ೧೭ ಕ್ಕೆ ತೆರೆದ ಸಮಗ್ರ ಗ್ರಾಮ ಸೇವಾ ಶಿಬಿರದ ಮುಕ್ತಾಯ ಸಮಾರಂಭ ೨ ನೇ ತಾರೀಖು ಶ್ರೀ ಜೀವಣರಾವ ಯಾಳಗಿಯವರ ಹಸ್ತದಿಂದ ಜರುಗಿತು. ಈ ಶಿಬಿರಕ್ಕೆ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಿಂದ ಕಾರ್ಯಕರ್ತರೂ ವಿಧಾಯಕ ಕಾರ್ಯದಲ್ಲಿ ಆಸಕ್ತಿಯುಳ್ಳ ಇತರರೂ ಬಂದಿದ್ದರು.

ಧಾರವಾಡ ಜಿಲ್ಲಾ ಗಾಂಧಿ ನಿಧಿ ಸಮಿತಿಯ ಸಾಧಾರಣ ಸಭೆಯು ಶ್ರೀ ಕೆ. ಬಿ. ದುಂಡೂರ ಇವರ ಅಧ್ಯಕ್ಷತೆಯಲ್ಲಿ ಸೇರಿ ನಿಧಿ ಸಂಗ್ರಹದ ಅವಧಿ ಮುಗಿಯಲು ಬಂದಿದ್ದರಿಂದ ಎಲ್ಲರೂ ನಿಧಿ ಸಂಗ್ರಹ ಕಾರ್ಯವನ್ನು ಭರದಿಂದ ನಡೆಸಬೇಕೆಂದು ಬಿನ್ನವಿಸಲಾಯಿತು. ೧೦೦೦ ರೂಪಾಯಿಗಳಿಗೆ ಮೇಲ್ಪಟ್ಟು ಹಣ ಕೊಡುವವರಿಗೆ ಡಾ. ರಾಜೇಂದ್ರ ಪ್ರಸಾದರ ಕೈಯಲ್ಲಿಯೇ ಕೊಡುವ ಅವಕಾಶ ಕಲ್ಪಿಸಿಕೊಡಲಾಗುವದೆಂದೂ ಸಾರಲಾಯಿತು.

ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಪರವಾಗಿ ಕಳೆದ ತಿಂಗಳು ೨೭—೨೮ ೨೯ ಈ ಮೂರು ದಿನ ಮದ್ರಾಸ ವಿಶ್ವವಿದ್ಯಾನಿಲಯದ ಕನ್ನಡ ಪಂಡಿತರಾದ ಶ್ರೀ ಮರಿಯಪ್ಪ ಭಟ್ಟರು ಶಬ್ದ ಮತ್ತು ಶಬ್ದ ಸಂಕಲನ ಮೂಲಕ ತಿಳಿದು ಬಂದ ಸಂಸ್ಕೃತಿ, ಶಿಲಾಶಾಸನಗಳು ಬೀರುವ ಬೆಳಕು ಮತ್ತು ಸಾಹಿತ್ಯವು ಪ್ರತಿಬಿಂಬಿಸುವ ಸಂಸ್ಕೃತಿ ಈ ವಿಷಯವಾಗಿ ವಿಚಾರಪರಿಪ್ಲುತ ಭಾಷಣ ಮಾಡಿದರು. ಶ್ರೀ ರಾ. ಸ್ವಾ. ಪಂಚಮುಖಿಯವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಎಸ್. ಎಸ್. ಮಳೀಮಠ, ಎಲ್. ಡಿ. ಬುರಬುರೆ ಮತ್ತು ಜಿ. ವಿ. ಪಾಟೀಲ ಇವರು ಗೃಹರಕ್ಷಕ ದಳದ ಆಯ್ಕೆ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

ಸರಕಾರದವರು ಕಳೆದ ಆಗಸ್ಟ ತಿಂಗಳಿಂದ ಬಟ್ಟೆಯನ್ನು ಕೊಂಡಿಲ್ಲಾದ್ದರಿಂದ ೫೪೦ ಗಂಟು ಬಟ್ಟೆ ಹಾಗೆಯೆ ಬಿದ್ದದ್ದರಿಂದ ಗದಗಿನ ಎಸ್. ಸಿ. ಮಿಲ್ಲಿನಲ್ಲಿಯ ನೇಯ್ಗೆ ಖಾತೆಯನ್ನು ನಿಲ್ಲಿಸಲಾಗಿದೆ.

ಗದುಗಿನಲ್ಲಿ ವಿದ್ಯುತ್ಕಂಪನಿ ಮತ್ತು ನಗರಸಭೆಯವರಲ್ಲಿ ಮತಭೇದವಾಗಿ ಊರಲ್ಲಿ ದೀಪಗಳಿದಲಿಲ್ಲ. ಈ ಸಂಬಂಧದಲ್ಲಿ ಕಲೆಕ್ಟರರು ಮಧ್ಯಸ್ತಿಕೆ ಮಾಡಿ ಹೊಸ ಕರಾರಪತ್ರ ಮಾಡಿಸಿದರು. ಆದುದರಿಂದ ನಗರದಲ್ಲಿ ಮತ್ತೆ ದೀಪಗಳು ಬೆಳಗಹತ್ತಿವೆ,

ಹುಲಕೋಟಿಯ ಪ್ರಮುಖ ನಾಗರಿಕರಾಗಿದ್ದ ಶ್ರೀ ಬಸವರಡ್ಡಿ ಲಿಂಗರಡ್ಡಿ ಹಂಚಿನಾಳ ಇವರು ೨ ಕ್ಕೆ ಆಕಸ್ಮಾತ್ ಹೃದಯ ವಿಕಾರದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶಿರಹಟ್ಟಿಯ ಹಾಯಸ್ಕೂಲಿಗಾಗಿ ಶ್ರೀ. ದಬಾಲಿ ಮರಿತಮ್ಮಪ್ಪ ಇವರು ಎರಡು ಎಕರೆ ಜಮೀನು ಕೊಡುವದಾಗಿಯೂ ಹಾಯಸ್ಕೂಲಿನ ಕಟ್ಟಡವನ್ನು ತಮ್ಮ ವೆಚ್ಚದಿಂದ ಕಟ್ಟಿಸಿ ಕೊಡುವದಾಗಿಯೂ ವಾಗ್ದಾನವಿತ್ತಿದ್ದಾರೆ.

ಬೆಳಗಾವಿ

ಅಥಣಿ ತಾಲೂಕಿನ ಸತ್ತಿ ಮತ್ತು ಕೊಕಟನೂರ ಈ ಎರಡೂ ಕೇಂದ್ರಗಳಲ್ಲಿ ಕಳೆದವಾರ ಕಲೆಕ್ಟರರಾದ ಶ್ರೀ ಎಂ. ಕೆ. ಜಾಧವ ಇವರ ಅಧ್ಯಕ್ಷತೆಯಲ್ಲಿ ಧಾನ್ಯ ಎತ್ತುವಳಿ ಸಮಾರಂಭವು ಜರುಗಿತು. ಒಂದೇ ದಿನದಲ್ಲಿ ೫೫೦೦ ಚೀಲ ಧಾನ್ಯವು ಖರೀದಿ ಮಾಡಲಾಯಿತು.

ದಕ್ಷಿಣ ಭಾಗದ ಪ್ರೌಢ ಶಿಕ್ಷಣ ಅಧಿಕಾರಿಗಳ ಸಲುವಾಗಿ ಎಸ್. ಟಿ. ಕಾಲೇಜಿನ ಪ್ರತ್ಯಕ್ಷ ಸಭಾಗೃಹದಲ್ಲಿ ೨೩ ರಿಂದ ೫ ದಿನ ತರಬೇತಿ ವರ್ಗವನ್ನು ನಡೆಸಲಾಯಿತು. ಕಾಲೇಜ ಪ್ರಿನ್ಸಿಪಾಲ ಶ್ರೀ ಕಾವಡೆಯವರಿಂದ ವರ್ಗದ ಉದ್ಘಾಟನವಾಯಿತು. ದಿನಾಲು ಪ್ರೌಢ ಶಿಕ್ಷಣದ ಬಗ್ಗೆ ಭಾಷಣ ಚರ್ಚೆಗಳು ನಡೆಯುತ್ತಿದ್ದವು.

ಶ್ರೀ ಎಸ್. ಎಂ. ಮೋಹಿತೆ, ಜಯದೇವ ಕುಲಕರ್ಣಿ ಮತ್ತು ಎಸ್. ಆಯ. ಗುತ್ತಿಗೋಳಿ ಇವರು ಗೃಹರಕ್ಷಕ ದಳದ ಆಯ್ಕೆ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

ಉತ್ತರಕನ್ನಡ

ಕಾರವಾರದಲ್ಲಿ ಕಳೆದ ರವಿವಾರ ರಾತ್ರಿ ಒಂದು ಜೂಜಾಟಅಡ್ಡೆಗೆ ಪೋಲೀಸರು ಮುತ್ತಿಗೆ ಹಾಕಿ ಇಸ್ಪೇಟು ಹಾಗು ೪೦ ರೂ. ಜಪ್ತಮಾಡಿ ೧೦ ಜನರನ್ನು ಬಂಧಿಸಿದರೆಂದೂ ತಿಳಿಯುತ್ತದೆ.

ಬಿ. ಎಸ್. ಮಳೀಮಠ, ಎಸ್. ಎಸ್. ಕೇಶವಾಯಿನ್ ಮತ್ತು ಕೆ. ಎನ್. ನಾಡಕರ್ಣಿ ಇವರು ಜಿಲ್ಹೆಯ ಗೃಹರಕ್ಷಕ ದಳದ ಆಯ್ಕೆ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟಿರುವರು.

ಸಾಣೇಕಟ್ಟೆಯ ಉಪ್ಪಿನ ಅಗರದಲ್ಲಿ ಕೆಲಸ ಮಾಡುವವರು ತಮಗೆ ಸಿಗುತಿದ್ದ ೫ ಶಿದ್ದಿ ಅಕ್ಕಿ ಕೂಲಿಯನ್ನು ೧೫ ಶಿದ್ದಿಗೆ ಏರಿಸಬೇಕೆಂದು ಕೇಳಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋಗಬಾರದೆಂದು ಹಲವರು ಇದರಲ್ಲಿ ಮಧ್ಯಸ್ತಿಕೆ ಮಾಡಿ ೧೦ ಶಿದ್ದಿ ಅಕ್ಕಿಯನ್ನು ತೆಗೆದುಕೊಳ್ಳಲು ಒಪ್ಪಿಸಿದ್ದಾರೆ.

ಮುಂದಿನ ತಿಂಗಳು ಮೊದಲು ವಾರದಲ್ಲಿ ಶಿರ್ಶಿಯಲ್ಲಿಅ. ಭಾ. ಅಡಿಕೆ ಪರಿಷತ್ತಿನ ತೃತೀಯ ಅಧಿವೇಶನವು ಸೇರುವದು. ಶ್ರೀ ಟಿ. ಎಂ. ಹೆಗ್ಡೆಯವರು ಸ್ವಾಗತಾಧ್ಯಕ್ಷರಾಗಿರುವರು. ೧೨ ಸಾವಿರ ರೂಪಾಯಿಗಳ ವೆಚ್ಚ ಬರುವದೆಂದು ಅಂದಾಜು ಮಾಡಲಾಗಿದ್ದು ಸ್ವಾಗತ ಸಮಿತಿಗೆ ಎಲ್ಲರೂ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಅವರ್ಸಾದ ಪದ್ಮನಾಭ ಹೆಗಡೆ ಎಂಬವರು ತಮ್ಮ ಮನೆಯ ಅವಾರದಲ್ಲಿ ಮಲಗಿದಾಗ ಯಾರೋ ಚೂರಿಯಿಂದ ತಿವಿಯುತಿರುವಾಗ ಎಚ್ಚರಾಗಿ ಅವರ ಕೈ ಹಿಡಿದರು. ಅಷ್ಟರಲ್ಲಿ ತುಂಬ ಗಾಯಗಳಾಗಿದ್ದವು. ಕೈ ಹಿಡಿದ ಕೂಡಲೆ ಅವರನ್ನು ಬಿಡಿಸಿಕೊಂಡು ಓಡಿ ಹೋದರು. ಗಾಯಾಳುವು ಕಾರವಾರ ಅಸ್ಪತ್ರೆಯಲ್ಲಿ ಉಪಚಾರ ಹೊಂದುತಿರುವನು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಹಾ ಅಧ್ಯಾಪಕ ಸಂಘ [Teachers gnild]ದ ವಾರ್ಷಿಕ ಸಭೆಯು ದಿನಾಂಕ ೩ ರಂದು ಮಂಗಳೂರಿನ ಸೈಂಟ ಆಗ್ನೆಸ್ ಕಾಲೇಜಿನಲ್ಲಿ ಶ್ರೀ ಎಂ. ಎಸ್. ಏಕಾಂಬರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಎಲ್ಲಾ ಶಾಲೆಗಳನ್ನು ರಾಷ್ಟ್ರೀಕರಿಸಬೇಕೆಂಬ ಠರಾವು ಮತಕೆಗೆಯಲಾಗಿ ಬಿದ್ದು ಹೋಯಿತು.

ಮಂಗಳೂರಿನ ಜೈಲಿನಿಂದ ಡಿ. ಸಿ. ಮಹಮ್ಮದ್ ಹುಸೇನ್ ಮತ್ತು ಸಿಲ್ವೆಸ್ಟರ್ ಡಿಸೋಜಾ, ಎಂಬ ಇಬ್ಬರು ಕೈದಿಗಳು ತಪ್ಪಿ ಹೋಗಿರುವರೆಂದು ವಾರ್ತೆಯಿದೆ.

ಮಂಜೇಶ್ವರದ ರೈಲು ನಿಲ್ದಾಣದಲ್ಲಿ, ಕಮ್ಯುನಿಸ್ಟರಾದ ಶ್ರೀ ಎನ್. ಎಸ್. ಹೊಳ್ಳರನ್ನು ಪೋಲೀಸರ ಕೈಯಿಂದ ಅಪಹರಿಸಿಕೊಂಡು ಹೋದರೆಂಬ ಆರೋಪದಿಂದ ಬಂಧಿಸಲ್ಪಟ್ಟ ೧೭ ಮಂದಿಯನ್ನು ಮಂಗಳೂರಿನ ಸೆಶನ್ಸ್ ಕೋರ್ಟಿನಲ್ಲಿ ವಿಚಾರಿಸಿ ಅವರು ತಪ್ಪಿತಸ್ಥರಲ್ಲವೆಂದು ಅವರನ್ನು ಬಿಡಲಾಗಿದೆ.

ಮಂಗಳೂರಿನ ನೀರಿನ ಸರಬರಾಯಿ ಯೋಜನೆಯ ಪೂರ್ವಭಾವಿ ಕೆಲಸಗಳಿಗಾಗಿ ಬೇಕಾದ ೩,೧೫,೦೦೦ ರೂಗಳಲ್ಲಿ ಅರ್ಧಾಂಶವನ್ನು ಸರಕಾರದವರೂ ಉಳಿದ ಅರ್ಧವನ್ನು ಮುನ್ಸಿಪಾಲಿಟಿಯೂ ಕೊಡುವಂತೆ ನಿರ್ಣಯವಾಯಿತು.

ಉಡ್ಪಿಯಲ್ಲಿ ಟೆಲಿಫೋನ್ ಎಕ್ಸಚೇಂಜ್ ಕಚೇರಿಯು ದಿನಾಂಕ ೨೫ ರಂದಿನಿಂದ ತೆರೆಯಲ್ಪಟ್ಟಿತು. ಅಂದು ಮದ್ರಾಸಿನ ಪೋಸ್ಟ್ ಮಾಸ್ಟರ್ ಜನರಲ್ಲರು ಮದ್ರಾಸಿನಿಂದಲೇ ಈ ಕಾರ್ಯವನ್ನು ಉದ್ಘಾಟಿಸಿದರು.

ಪಣಂಬೂರಿನ ಶ್ರೀರಾಮ ಧರ್ಮ ವೈದ್ಯಶಾಲಾ ಸಂಘದವರು ನಡೆಸಿಕೊಂಡು ' ಬರುವ ಧರ್ಮ ವೈದ್ಯಶಾಲೆಯ ವಾರ್ಷಿಕೋತ್ಸವವು ದಿನಾಂಕ ೨೭ ರಂದು ಡಾ.॥ ಕೆ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಡಿ. ಮೋಹನರಾವ್, ಶಿವಸಾಲ್ಯಾನ್, ಪಿ. ರಾಮರಾವ್ ಮೊದಲಾದವರ ಭಾಷಣಗಳಾದುವು.

ಖಾನಾಪುರ ತಾಲೂಕಿನ ಬೀಡಿಯಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಧಾನ್ಯ ಎತ್ತುವಳಿ ಕಾರ್ಯಕ್ರಮ ನಡೆದು ಒಂದೇ ದಿನ ೨೦೦೦ ಚೀಲ ಭತ್ತದ ಖರೀದಿಯಾಯಿತು.

ಶ್ರೀಕೃಷ್ಣ ಪಾರಿಜಾತದಲ್ಲಿ ತಜ್ಞರೂ ಲೇಖಕರೂ ಉತ್ತಮ ಸಂಗೀತಗಾರರೂ ಆಗಿದ್ದ ಶ್ರೀ ಅಚ್ಯುತಾಚಾರ್ಯ ಪೂರ್ವಾಲಿ ಇವರು ಕಳೆದ ೩೦ನೇತಾರೀಖು ರಾತ್ರಿ ೧೨ಗಂಟೆಗೆ ವಿಷಮಜ್ವರದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕನ್ನಡ ಸಂಸ್ಥಾನ

ಚಿಕ್ಕಮಗಳೂರಿನ ದೊಡ್ಡ ಪ್ಲಾಂಟರರೂ ಸಾವಕಾರರೂ ಆಗಿದ್ದ ಶ್ರೀ ಎ. ಸಿ. ಮಲ್ಲೇಗೌಡರು ೨ ನೇ ತಾರೀಖು ಮದ್ರಾಸಿನಲ್ಲಿ ಮರಣಹೊಂದಿದರು. ಅನೇಕ ಧರ್ಮಕಾರ್ಯಗಳಿಗೆ ಅವರು ತುಂಬ ದ್ರವ್ಯ ಸಹಾಯ ಮಾಡಿದ್ದರು.

ಗೋಹತ್ಯೆಯ ಅಪಾದನೆಯ ಮೇಲೆ ಶಿವಮೊಗ್ಗಿಯ ಶಂಕುರುಸಾಬ ಮತ್ತು ಐವರನ್ನು ಪೋಲೀಸರು ಬಂಧಿಸಿದರು. ಪೋಲೀಸ ಅಧಿಕಾರಿಗಳು ಮತ್ತು ನಗರಸಭೆಯ ಉಪಾಧ್ಯಕ್ಷರು ಈ ಸುದ್ದಿ ತಿಳಿದ ಕೂಡಲೆ ಶಂಕುರುಸಾಬರ ಮನೆಗೆ ಮುತ್ತಿಗೆ ಹಾಕಿದಾಗ ಆಕಳ ಸುಲಿಯುವದೂ ಗೋಮಾಂಸವನ್ನು ಮಾರುವದೂ ನಡೆದಿತ್ತು. ಇದನ್ನು ನೋಡಿದ ಕೂಡಲೆ ಪೋಲೀಸರು ಮೇಲೆ ಹೇಳಿದಂತೆ ಅವರನ್ನು ಬಂಧಿಸಿದರು. ನಗರದ ಮಧ್ಯದಲ್ಲಿ ಇದ್ದ ಈ ಮನೆಯಲ್ಲಿ ಅನೇಕ ದಿನಗಳಿಂದ ಗುಪ್ತರೀತಿಯಿಂದ ಗೋಹತ್ಯೆ ನಡೆದಿತ್ತೆಂದು ತಿಳಿಯುತ್ತದೆ.

ವಿಜಾಪುರ

ಶ್ರೀ ಆರ್. ಜಿ ದುಬೆ, ಜಿ. ಎಸ್. ಸಜ್ಜನ ಮತ್ತು ಎಸ್. ಡಿ. ಪಾಟೀಲ ಇವರು ಜಿಲ್ಹಾ ಗೃಹರಕ್ಷಕದಳದ ಆಯ್ಕೆ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟರು.

ವಿಜಾಪುರದಲ್ಲಿ ಕಳವುಗಳು ಬಹಳ ಆಗಹತ್ತಿವೆ ವಿಶೇಷತಃ ಜುಮ್ಮಾಮಶೀದೆಯ ಭಾಗದಲ್ಲಿ ಕಳವಿನ ದೂರು ಬಹಳಿದೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.